# ರಾಷ್ಟ್ರೀಯ ಮೀನುಗಾರಿಕೆ ನೀತಿ, 2020

***ಸಮಿತಿಯ ಪರಿಗಣನೆಗೆ ಐದನೇ ಕರಡು***

**09 ನವೆಂಬರ್ 2020**

## ಪರಿವಿಡಿ

**1.0 ಮುನ್ನುಡಿ** ...... 3

**2.0 ಪೀಠಿಕೆ** ...... 4

**3.0 ದೃಷ್ಟಿಕೋನ (Vision)** ...... 4

**4.0 ಗುರಿ (Mission)** ...... 4

**5.0 ಉದ್ದೇಶಗಳು (Objectives)** ...... 5

**6.0 ಕಾರ್ಯತಂತ್ರ(Strategy)** ...... 5

**6.1 ಸಮುದ್ರ ಮೀನುಗಾರಿಕೆ** ...... 5

*6.1.1 ಸುಸ್ಥಿರ ಸಮುದ್ರ ಮೀನುಗಾರಿಕೆ* ...... 5

*6.1.2 ಉಸ್ತುವಾರಿ, ನಿಯಂತ್ರಣ ಮತ್ತು ನೋಡಿಕೊಳ್ಳುವುದು* ...... 8

**6.2 ಒಳನಾಡು ಮೀನುಗಾರಿಕೆ** ...... 9

*6.2.1 ಭಾರತದ ನದಿಗಳಲ್ಲಿ ಮೀನುಗಾರಿಕೆ ಮತ್ತು ಅವುಗಳ ಪ್ರವಾಹ ಪ್ರದೇಶಗಳಲ್ಲಿ ನೈಸರ್ಗಿಕ ಸರೋವರಗಳು ಮತ್ತು ಗದ್ದೆಗಳು (Wetland) ಗಳಲ್ಲಿ ಮೀನುಗಾರಿಕೆ ನಿಯಂತ್ರಣ* ...... 9

*6.2.2 ಭಾರತದ ಜಲಾಶಯಗಳ ಸಾಮರ್ಥ್ಯವನ್ನು ಬಳಸಿಕೊಳ್ಳುವುದು* ...... 11

**6.3 ಜಲಕೃಷಿ (Aquaculture)** ...... 12

*6.3.1 ಸಿಹಿನೀರು ಜಲಕೃಷಿ* ...... 12

*6.3.2 ಉಪ್ಪುನೀರು ಜಲಕೃಷಿ* ...... 14

*6.3.3 ಸಮುದ್ರದಲ್ಲಿ ಜಲಕೃಷಿ* ...... 16

*6.3.4 ಸಮುದ್ರದ ಸಸ್ಯಗಳ ಕೃಷಿ* ...... 17

*6.3.5 ಅಲಂಕಾರಿಕ ಮೀನು ಕೃಷಿ* ...... 18

*6.3.6 ಒಳನಾಡಿನ ಲವಣಯುಕ್ತ ಭೂಮಿಯ ಸದ್ಬಳಕೆ* ...... 19

*6.3.7 ಜಲವಾಸಿ ಪ್ರಾಣಿಗಳ ಆರೋಗ್ಯವನ್ನು ಕಾಪಾಡುವುದು ಮತ್ತು ಜೈವಿಕ ಸುರಕ್ಷತೆ* ...... 19

**6.4 ಮೂಲಭೂತ ಸೌಕರ್ಯ** ...... 20

**6.5 ಹಿಡುವಳಿ ನಂತರದ ಚಟುವಟಿಕೆ ಮತ್ತು ವ್ಯಾಪಾರ** ...... 22

*6.5.1 ಪೂರೈಕೆ ಸರಪಳಿ ಮತ್ತು ಮೌಲ್ಯವರ್ಧನ ಸರಪಳಿಯ ಸುಧಾರಣೆ* ...... 22

*6.5.2 ದೇಶೀಯ ಮಾರಾಟ ವ್ಯವಸ್ಥೆಯ ಅಭಿವೃದ್ಧಿ* ...... 23

*6.5.3 ವ್ಯಾಪಾರ ಮತ್ತು ಆಹಾರ ಸುರಕ್ಷತೆಯನ್ನು ಉತ್ತೇಜಿಸುವುದು* ...... 24

**6.6 ಪರಿಸರ ಮತ್ತು ಹವಾಮಾನ ಬದಲಾವಣೆ** ...... 25

*6.6.1 ಹವಾಮಾನ ಬದಲಾವಣೆ* ...... 25

*6.6.2 ಪರಿಸರ ವ್ಯವಸ್ಥೆಯ ಆರೋಗ್ಯ ಮತ್ತು ಸಮಗ್ರತೆಯನ್ನು ಖಚಿತಪಡಿಸುವುದು* ...... 25

*6.6.3 ಕೀಸ್ಟೋನ್ ಪ್ರಭೇದಗಳನ್ನು(Keystone species) ಮತ್ತು ಅಪ್ರತಿಮ ಪರಿಸರ ವ್ಯವಸ್ಥೆಗಳನ್ನು ರಕ್ಷಿಸುವುದು* ...... 27

*6.6.4 ಫಿಶ್ ಮೀಲ್ (Fish Meal) ಉತ್ಪಾದನೆ ಮತ್ತು ಮೀನಿನ ಮರಿಗಳ ಹಿಡುವಳಿಯ ನಿಯಂತ್ರಣ* ...... 27

*6.6.5 ನೀಲಿ ಆರ್ಥಿಕತೆ ಮತ್ತು ಸಾಗರ ಪ್ರಾದೇಶಿಕ ಯೋಜನೆ (Marine spatial planning)* ...... 27

**6.7 ಸಾಮಾಜಿಕ ಭದ್ರತೆ ಮತ್ತು ಸುರಕ್ಷತೆ ಜಾಲಗಳು** .......... 28

*6.7.1 ಸಣ್ಣ ಪ್ರಮಾಣದ ಮೀನುಗಾರಿಕೆ ಮತ್ತು ಜಲಕೃಷಿಯನ್ನು ಸುರಕ್ಷಿತಗೊಳಿಸುವುದು* .......... 28

*6.7.2 ಸಾಮಾಜಿಕ ಭದ್ರತೆ, ಲಿಂಗ ಸಮಾನತೆ ಮತ್ತು ಸ್ಥಿತಿಸ್ಥಾಪಕತ್ವ ಸ್ಥಾಪಿಸುವುದು* .......... 29

**6.8 ಮೀನುಗಾರಿಕೆ ಆಡಳಿತ** .......... 31

*6.8.1 ಒಳನಾಡು ಮತ್ತು ಸಮುದ್ರಗಳ ಸಂಪನ್ಮೂಲಗಳ ಸುಸ್ಥಿರ ಮತ್ತು ಯುಕ್ತ ಬಳಕೆಯನ್ನು ನಿಯಂತ್ರಿಸುವುದು* .......... 31

*6.8.2 ಸಂಸ್ಥೆಗಳು* .......... 32

*6.8.3 ಎಚ್‌ಆರ್‌ಡಿ ಮತ್ತು ಉದ್ಯಮಶೀಲತೆ* .......... 34

*6.8.4 ಅಂಕಿ ಅಂಶ (ಡೇಟಾ–ಬೇಸ್)* .......... 34

*6.8.5 ಜ್ಞಾನವನ್ನು ತಲುಪಿಸುವುದು ಮತ್ತು ತಾಂತ್ರಿಕತೆಯ ಬೆಂಬಲವನ್ನು ವಿಸ್ತರಿಸುವುದು* .......... 35

**6.9 ಪ್ರಾದೇಶಿಕ / ಅಂತರರಾಷ್ಟ್ರೀಯ ಬದ್ಧತೆಗಳು** .......... 36

*6.9.1 ಪ್ರಾದೇಶಿಕ ಸಹಕಾರಕ್ಕೆ ಪ್ರೋತ್ಸಾಹ* .......... 36

*6.9.2 ಭಾರತವನ್ನು ಪ್ರದೇಶದ ನಾಯಕನಾಗಿ ಇರಿಸುವುದು* .......... 37

**6.10 ಮುಂದಿನ ದಾರಿ** .......... 37

**ಸಂಕ್ಷಿಪ್ತ ರೂಪಗಳು** .......... 38

**ಮೂಲಾಧಾರ (baseline) ಸನ್ನಿವೇಶ** .......... 39

# ರಾಷ್ಟ್ರೀಯ ಮೀನುಗಾರಿಕೆ ನೀತಿ, 2020

## 1.0 ಪರಿಚಯ

ಪುರಾಣ, ಸಂಸ್ಕೃತಿ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣೆದುಕೊಂಡಿರುವ ಭಾರತದ ಮೀನುಗಾರಿಕೆಯನ್ನು ಉತ್ತರದ ಪ್ರಬಲ ಹಿಮಾಲಯದಿಂದ ಹಿಡಿದು ದೇಶದ ಪರ್ಯಾಯ ದ್ವೀಪವನ್ನು ಸುತ್ತುವರೆದಿರುವ ಸಾಗರಗಳವರೆಗಿನ ವಿಶಿಷ್ಟ ಮತ್ತು ವೈವಿಧ್ಯಮಯ ಭೌಗೋಳಿಕ ಶ್ರೇಣಿಯಲ್ಲಿ ವಿಸ್ತರಿಸಲಾಗಿದೆ. ಜಾಗತಿಕ ಮೀನುಗಾರಿಕಾ ಸನ್ನಿವೇಶದಲ್ಲಿ ಸಾಟಿಯಿಲ್ಲದ, ದೇಶದ ಬೆರಗುಗೊಳಿಸುವ ಮೀನುಗಾರಿಕೆ ಜೀವವೈವಿಧ್ಯತೆಯು ವೈವಿದ್ಯಮಯ ಫಿನ್ (Fin) ಮತ್ತು ಚಿಪ್ಪುಮೀನುಗಳು ಮತ್ತು ಜಲಸಸ್ಯಗಳನ್ನು ಒಳಗೊಂಡಿದೆ, ಇದು ಲಕ್ಷಾಂತರ ಮೀನುಗಾರರಿಗೆ ನೇರವಾಗಿ ಮತ್ತು ಇನ್ನೂ ಅನೇಕ ಲಕ್ಷ ಜನರಿಗೆ ಪೂರಕ ಮತ್ತು ಪೋಷಕ ಚಟುವಟಿಕೆಗಳಲ್ಲಿ ಜೀವನೋಪಾಯವನ್ನು ಒದಗಿಸುತ್ತದೆ.

ಈ ವಲಯವನ್ನು ಐವತ್ತರ ದಶಕದ ಆರಂಭದಲ್ಲಿ ಯೋಜಿತ ಅಭಿವೃದ್ಧಿಗೆ ಒಳಪಡಿಸಿದ ಸಮಯದಿಂದ ಚಿಮ್ಮಿ ಬೆಳೆಯುತ್ತಿದೆ. 13.76 ಮಿಲಿಯನ್ ಟನ್ ಒಟ್ಟು ಮೀನು ಉತ್ಪಾದನೆಯೊಂದಿಗೆ (2018–19) ಭಾರತವು ಚೀನಾ ಮತ್ತು ಇಂಡೋನೇಷ್ಯಾದ ನಂತರ ವಿಶ್ವದ ಮೂರನೇ ಅತಿದೊಡ್ಡ ಮೀನು ಉತ್ಪಾದಕ ರಾಷ್ಟ್ರವಾಗಿದೆ. ಸಮುದ್ರ ಮೀನುಗಾರಿಕೆಯು ತನ್ನ ಅಂದಾಜು ಸಾಮರ್ಥ್ಯದ 5.31 ಮಿಲಿಯನ್ ಮೆಟ್ರಿಕ್ ಟನ್ (ಎಂಎಂಟಿ) ಕಡೆಗೆ ಸ್ಥಿರ ಚಲನೆಯನ್ನು ಕಾಯ್ದುಕೊಳ್ಳುವುದರೊಂದಿಗೆ ಜಲ ಕೃಷಿಯು ಕಳೆದ ಮೂರು ದಶಕಗಳಲ್ಲಿ ಅದ್ಭುತ ಬೆಳವಣಿಗೆಯನ್ನು ಪ್ರದರ್ಶಿಸಿ ಭಾರತವನ್ನು ಪ್ರಪಂಚದಲ್ಲಿ ಎರಡನೇ ಗರಿಷ್ಠ ಜಲಕೃಷಿ ಮೀನು ಉತ್ಪಾದಕ ರಾಷ್ಟ್ರವಾಗಿಸಿದೆ.

ಅಂದಾಜು 28 ದಶಲಕ್ಷ ಮೀನುಗಾರರು ಮತ್ತು ಮೀನು ಕೃಷಿಕರಿಗೆ ಅಂದರೆ ರಾಷ್ಟ್ರೀಯ ಜನಸಂಖ್ಯೆಯ ಶೇಕಡಾ 2.04 ರಷ್ಟು ಜನರಿಗೆ ಜೀವನಾಧಾರವಾಗಿರುವ ಈ ಕ್ಷೇತ್ರವು ವಿಶೇಷವಾಗಿ ಯುವಕರಿಗೆ ಮತ್ತು ಮಹಿಳೆಯರಿಗೆ ಉದ್ಯೋಗ ಸೃಷ್ಟಿ ಮತ್ತು ಆಹಾರ ಮತ್ತು ಪೌಷ್ಠಿಕಾಂಶದ ಭದ್ರತೆ ಮತ್ತು ವಿದೇಶಿ ವಿನಿಮಯ ಗಳಿಕೆಯನ್ನು ಪೂರೈಸಲು ಅಪಾರ ಅವಕಾಶಗಳನ್ನು ನೀಡುತ್ತದೆ. 2018–19ರ ಅವಧಿಯಲ್ಲಿ ಮೀನುಗಾರಿಕೆ ವಲಯದ ಒಟ್ಟು ಮೌಲ್ಯವರ್ಧನೆ (ಜಿವಿಎ) ಪ್ರಸ್ತುತ ಬೆಲೆಯಲ್ಲಿ 2,12,915 ಕೋಟಿ ರೂ. ಆಗಿದ್ದು, ಇದು ರಾಷ್ಟ್ರೀಯ ಜಿವಿಎಯ ಶೇಕಡಾ 1.12 ಮತ್ತು ಕೃಷಿ ಮತ್ತು ಸಂಬಂಧಿತ ವಲಯದ ಜಿವಿಎಯ ಶೇಕಡಾ 7.28 ರಷ್ಟಿತ್ತು. ಇದೇ ಅವಧಿಯಲ್ಲಿ ಈ ವಲಯವು ರೂ. 13.92 ಲಕ್ಷ ಟನ್ ಸಮುದ್ರ ಉತ್ಪನ್ನಗಳನ್ನು ರಫ್ತು ಮಾಡುವ ಮೂಲಕ 46,589 ಕೋಟಿ ರೂಗಳ ವಿದೇಶಿ ವಿನಿಮಯ ಗಳಿಸಿರುತ್ತರೆ. ಒಟ್ಟಾರೆಯಾಗಿ, 2014–15 ರಿಂದ 2018–19ರವರೆಗೆ, ಈ ವಲಯವು ಸರಾಸರಿ ವಾರ್ಷಿಕ ಶೇ. 10.87 ರಷ್ಟು ಬೆಳವಣಿಗೆಯನ್ನು ದಾಖಲಿಸಿದ್ದು, ಇದು ರಾಷ್ಟ್ರೀಯ ಆರ್ಥಿಕತೆಯ ಬೆಳವಣಿಗೆಗಿಂತ (7.16%) ಸ್ಥಿರ (2011–12) ಬೆಲೆಯಲ್ಲಿ ಹೆಚ್ಚಾಗಿದೆ.

ಭಾರತದ ಮೀನುಗಾರಿಕಾ ವಲಯವು ಸಮುದ್ರ ಮತ್ತು ಒಳನಾಡಿನ ನೀರಿನಲ್ಲಿ ಇಲ್ಲಿಯವರೆಗೆ ಬಳಸದ/ಕಡಿಮೆ ಬಳಕೆ ಮಾಡಿದ ಸಮುದ್ರ ಮತ್ತು ಒಳನಾಡಿನ ಸಂಪನ್ಮೂಲಗಳಿಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ; ಜಲಕೃಷಿಯಿಂದ ಉತ್ಪಾದನೆ ಮತ್ತು ಉತ್ಪಾದಕತೆಯಲ್ಲಿ ಗಮನಾರ್ಹ ಏರಿಕೆ; ಕೃಷಿ, ತೋಟಗಾರಿಕೆ, ಕೋಳಿ ಮತ್ತು ಜಾನುವಾರುಗಳಂತಹ ಇತರ ಕೃಷಿ ಕ್ಷೇತ್ರಗಳೊಂದಿಗೆ ಉತ್ಪಾದಕತೆಯ ಏಕೀಕರಣ; ಆಹಾರೇತರ ಅಲಂಕಾರಿಕೆ ಮೀನುಗಾರಿಕೆಯ ವಿಸ್ತರಣೆ; ಮತ್ತು ಒಮೆಗಾ–3 ಕೊಬ್ಬಿನಾಮ್ಲಗಳಿಂದ ಸಮೃದ್ಧವಾಗಿರುವ ಪೌಷ್ಟಿಕ ಮೀನು ಪ್ರೋಟೀನ್‌ನ ಲಭ್ಯತೆಯನ್ನು ರಾಷ್ಟ್ರದ ಹೆಚ್ಚುತ್ತಿರುವ ಜನಸಂಖ್ಯೆಗೆ ಒದಗಿಸುವಲ್ಲಿ ಅಗಾಧ ಸಾಮರ್ಥ್ಯವನ್ನು ಒದಗಿಸುತ್ತದೆ. ಪರಿಸರದ ದೃಷ್ಟಿಯಿಂದ ಮಳೆನೀರನ್ನು ಕೊಯ್ಲು ಮತ್ತು ಹಿಡಿದಿಟ್ಟುಕೊಳ್ಳುವಲ್ಲಿ ಮತ್ತು ಅಂತರ್ಜಲವನ್ನು ಪುನರ್ಭರ್ತಿ (recharge) ಮಾಡಲು ಅಮೂಲ್ಯವಾದ ಸುಧಾರಣಾ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುವಲ್ಲಿ ಕೊಳ, ಟ್ಯಾಂಕ್‌ಗಳು ಮತ್ತು ಪ್ರವಾಹ ಪ್ರದೇಶಗಳು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ.

ದೇಶದ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಮೀನು ಪ್ರೋಟೀನ್‌ಗೆ ಹೆಚ್ಚುತ್ತಿರುವ ಅವಶ್ಯಕತೆಗಳೊಂದಿಗೆ, ಸಂಪನ್ಮೂಲಗಳ ಸುಸ್ಥಿರ ಅಭಿವೃದ್ಧಿಯ ಅಗತ್ಯವು ಈಗ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಅಂತಹ ಬೇಡಿಕೆಗಳಿಗೆ ಸರಿಹೊಂದುವಂತೆ ಮತ್ತು ಇಂದಿನ ಅವಶ್ಯಕತೆಗಳನ್ನು ಪೂರೈಸುವ ಮತ್ತು ನಾಳೆಗೆ ಉತ್ತಮವಾದ ಮೀನುಗಾರಿಕೆಯನ್ನು ನೀಡುವ ಬೆಳವಣಿಗೆಯ ಪಥವನ್ನು ಖಾತ್ರಿಪಡಿಸಿಕೊಳ್ಳಲು, ದೇಶಕ್ಕೆ ಉತ್ತಮ ರಾಷ್ಟ್ರೀಯ ಮೀನುಗಾರಿಕೆ ನೀತಿ ಚೌಕಟ್ಟನ್ನು ಅಭಿವೃದ್ಧಿಪಡಿಸುವುದು ಅವಶ್ಯಕವಾಗಿದೆ. ಮೀನು ಹಿಡುವಳಿ ಮತ್ತು ಜಲಕೃಷಿ ಸಂಪನ್ಮೂಲಗಳನ್ನು ಯೋಗ್ಯವಾಗಿ ಬಳಸಿಕೊಳ್ಳಲು ನೀತಿಯು ನೀಲನಕ್ಷೆಯನ್ನು ಒದಗಿಸುತ್ತದೆ, ಮತ್ತು ಅಪೇಕ್ಷಿತ ಉತ್ಪಾದನೆ ಮತ್ತು ಉತ್ಪಾದಕತೆಯ ಮಟ್ಟವನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ. ಈ ನೀತಿ ಚೌಕಟ್ಟು ಮುಂಬರುವ ಅವಧಿಯಲ್ಲಿ ರಾಜ್ಯ ಮತ್ತು ಕೇಂದ್ರಾಡಳಿತ ಮಟ್ಟದಲ್ಲಿ ಇದೇ ರೀತಿಯ ಉಪಕ್ರಮಗಳಿಗೆ ಮಾರ್ಗದರ್ಶನ ನೀಡುವುದೆಂದು ನಿರೀಕ್ಷಿಸಲಾಗಿದೆ.

ಮೀನುಗಾರಿಕೆ ಸಂಪನ್ಮೂಲಗಳು ಆರೋಗ್ಯ ಮತ್ತು ಸಮಗ್ರತೆಯನ್ನು ನಿರ್ಧರಿಸುವ ಮತ್ತು ಸಸ್ಯ ಮತ್ತು ಪ್ರಾಣಿ ಸಂಪತ್ತನ್ನು ಒಳಗೊಂಡಿರುವ ವೈವಿಧ್ಯಮಯ ಪರಿಸರ ವ್ಯವಸ್ಥೆಯಲ್ಲಿ ಅಡಕವಾಗಿದೆಯೆಂದು ಒಪ್ಪಿಕೊಂಡು, ಎನ್‌ಎಫ್‌ಪಿ (ರಾಮೀನೀ)ಯು ಪರ್ವತದಿಂದ ಸಮುದ್ರ–ಸ್ಕೇಪ್ ವಿಧಾನವನ್ನು ಅಳವಡಿಸಿ ಕೊಳ್ಳುತ್ತದೆ. ವಲಯವು ಬಾಹ್ಯ ಮೂಲಗಳಿಂದ ಕನಿಷ್ಠ ಪ್ರತಿಕೂಲ ಪರಿಣಾಮಗಳನ್ನು ಪಡೆಯುವುದನ್ನು ಇದು ಖಚಿತಪಡಿಸುತ್ತದೆ ಮತ್ತು ಪ್ರಕ್ರಿಯೆಯಲ್ಲಿ ಪರಿಸರದ ಮೇಲೆ ಕನಿಷ್ಠ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡುತ್ತದೆ. 'ಬ್ಲೂ ಎಕಾನಮಿ' ಯ ಚೌಕಟ್ಟಿನೊಳಗೆ ರಾ.ಮೀ.ನೀ (NFP)ಯು ಕೃಷಿ, ಜಾನುವಾರು, ಜಲಸಂಪನ್ಮೂಲ, ಜಲ ವಿದ್ಯುತ್ ಶಕ್ತಿ, ಇಂಧನ, ಅರಣ್ಯ ಮತ್ತು ಪರಿಸರ, ಪರಿಸರ ಪ್ರವಾಸೋದ್ಯಮ, ಗ್ರಾಮೀಣಾಭಿವೃದ್ಧಿ, ಶಿಪ್ಪಿಂಗ್ ಇತ್ಯಾದಿ ವಲಯಗಳ ಉತ್ಪಾದನೆಯ ಸಮನ್ವಯವನ್ನು, 'ನೀಲಿ ಆರ್ಥಿಕತೆ' ಯ

ಗುರಿಗಳನ್ನು ಸಾಧಿಸಲು ಖಚಿತಪಡಿಸುತ್ತದೆ. ಹವಾಮಾನ ಬದಲಾವಣೆಯ ಕಾರಣದ ಜಾಗತಿಕ ತಾಪಮಾನ ಏರಿಕೆ, ಚಂಡಮಾರುತಗಳು ಮತ್ತು ಸುನಾಮಿಗಳು, ಪ್ರವಾಹ ಮತ್ತು ಅನಾವೃಷ್ಟಿಯಂತಹ ವಿಪರೀತ ನೈಸರ್ಗಿಕ ಘಟನೆಗಳು ಮತ್ತು COVID-19 ನಂತಹ ಯಾವುದೇ ಅಭೂತಪೂರ್ವ ಪರಿಸ್ಥಿತಿಗಳಿಂದ ಮೀನುಗಾರಿಕೆ ಸಮುದಾಯಗಳ ದುರ್ಬಲತೆಯನ್ನು ಕಡಿಮೆ ಮಾಡಲು ರಾ.ಮೀ.ನೀ (NFP) ಸಾಕಷ್ಟು ಒತ್ತು ನೀಡಲಿದೆ ಮತ್ತು ಅಂತಹ ಸಂಕಷ್ಟಗಳನ್ನು ಸರಿದೂಗಿಸಲು ಸಮುದಾಯಗಳ ಸ್ಥಿತಿಸ್ಥಾಪಕತ್ವವನ್ನು ಖಚಿತಪಡಿಸುತ್ತದೆ.

ವ್ಯಾಪಾರೀಕರಣ, ನೀರಿನ ಜಲಾನಯನ ಪ್ರದೇಶಗಳ ಹಂಚಿಕೆ, ವಲಸೆ ಮೀನು ಪ್ರಭೇದಗಳ ಅಂತರ–ವಿಶೇಷ ಆರ್ಥಿಕ ವಲಯ (EEZ) ಚಲನೆ, ಜೀವಂತ ಜಲಚರ ಪ್ರಾಣಿಗಳ ಅಂತರಾಷ್ಟ್ರೀಯ ಮಾರಾಟ, ಕಾನೂನುಬಾಹಿರ, ವರದಿ ಮಾಡದ ಮತ್ತು ಅನಿಯಂತ್ರಿತ ಮೀನುಗಾರಿಕೆಯನ್ನು ನಿಗ್ರಹಿಸುವುದು ಮತ್ತು ಬಂಧಿಸುವ (binding) ಮತ್ತು ಬಂಧಿಸದ (nonbinding) ಸ್ವಭಾವದ ಅಂತರರಾಷ್ಟ್ರೀಯ ನಿಯಮಗಳಿಗೆ ಭಾರತದ ಬದ್ಧತೆಗಳನ್ನು ಒಳಗೊಂಡಿರುವ ಜಾಗತಿಕ ಪರಿಸರಕ್ಕೆ ಮೀನುಗಾರಿಕೆಯು ಕ್ರಮೇಣವಾಗಿ ಚಲಿಸುತ್ತಿದೆ ಎಂಬ ಅಂಶವನ್ನು ರಾ.ಮೀ.ನೀ (NFP) ಗಣನೆಗೆ ತೆಗೆದುಕೊಳ್ಳುತ್ತದೆ. ಅಂತೆಯೇ, ಹಂಚಿಕೆಯಾದ ಮೀನುಗಾರಿಕೆ ಪರಿಸರ ಮತ್ತು ಜಲಸಂಪನ್ಮೂಲಗಳನ್ನು ದೀರ್ಘಕಾಲೀನ ಸುಸ್ಥಿರತೆಯ ಹಿತದೃಷ್ಟಿಯಿಂದ ಸಹಕಾರಿ ವ್ಯವಸ್ಥೆಯಲ್ಲಿ ಟ್ರಾನ್ಸ್ ಬೌಂಡ್ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಪ್ರಾದೇಶಿಕ ಆಯಾಮಗಳು ರಾ.ಮೀ.ನೀ (NFP) ಯಲ್ಲಿ ಸಮರ್ಪಕವಾಗಿ ಪ್ರತಿಫಲಿಸುತ್ತದೆ.

ಅಂತಿಮವಾಗಿ, ಸರ್ಕಾರವು ಮೀನುಗಾರಿಕೆ ಕ್ಷೇತ್ರಕ್ಕೆ ಪ್ರತ್ಯೇಕ ಸಚಿವಾಲಯವನ್ನು ರಚಿಸಿದೆ ಎಂಬ ಅಂಶದಿಂದ ಸ್ಫೂರ್ತಿ ಪಡೆಯುವುದರಿಂದ, ಈ ನೀತಿಯು ರಾಷ್ಟ್ರೀಯ ಆಕಾಂಕ್ಷೆಗಳನ್ನು ಮತ್ತು ದೇಶದ ನಾಯಕತ್ವವು ನಿಗದಿಪಡಿಸಿದ ಅಭಿವೃದ್ಧಿ ಗುರಿಗಳನ್ನು ಪ್ರತಿಬಿಂಬಿಸುತ್ತದೆ ಮತ್ತು 2025 ರ ಹೊತ್ತಿಗೆ ಭಾರತವನ್ನು 5.0 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿ ಮಾಡುವಲ್ಲಿ ಮೀನುಗಾರಿಕೆಯು ಇತರೆ ಅಭಿವೃದ್ಧಿ ಕ್ಷೇತ್ರಗಳೊಂದಿಗೆ ಸಮಾನ ಪಾಲುದಾರ ರಾಗುವುದನ್ನು ಖಚಿತಪಡಿಸುತ್ತದೆ.

## 2.0 ಪೀಠಿಕೆ

ಸಂವಿಧಾನದ ಕಾರ್ಡಿನಲ್ ತತ್ವಗಳ ಆಧಾರದ ಮೇಲೆ ಮತ್ತು ಜನ–ಕೇಂದ್ರಿತ ಮತ್ತು ಭಾಗವಹಿಸುವಿಕೆಯ ವಿಧಾನವನ್ನು ಅಳವಡಿಸಿಕೊಳ್ಳುವುದರಿಂದ, ರಾಷ್ಟ್ರೀಯ ಮೀನುಗಾರಿಕಾ ನೀತಿಯು ಸಮಾನತೆ ಮತ್ತು ಸಮಾನತೆಯನ್ನು ಹೆಚ್ಚಿಸುವುದು, ಸುಸ್ಥಿರತೆಯನ್ನು ಖಾತರಿಪಡಿಸುವುದು, ಲಿಂಗಭೇದ ನಿವಾರಿಸುವುದು ಮತ್ತು ಅದರ ಪಾತ್ರವನ್ನು ಹೆಚ್ಚಿಸುವುದು, ಅಂತರ್ಗತ ಅಭಿವೃದ್ಧಿಯನ್ನು ಉತ್ತೇಜಿಸುವುದು, ಸ್ವಾವಲಂಬನೆಯನ್ನು ಉತ್ತೇಜಿಸುವುದು ಮತ್ತು ಉದ್ಯಮಶೀಲತೆ, ಸಹಭಾಗಿತ್ವವನ್ನು ನಿರ್ಮಿಸುವುದು, ಅಂತರಜನಾಂಗೀಯ ಇಕ್ವಿಟಿಯನ್ನು ಕಾಪಾಡಿಕೊಳ್ಳುವುದು, ಅಂಗಸಂಸ್ಥೆಯ ತತ್ವವನ್ನು ಅನುಸರಿಸಿ ಮತ್ತು ಮುಂಬರುವ ಒಂದು ದಶಕದಲ್ಲಿ ಮೀನುಗಾರಿಕೆ ಕ್ಷೇತ್ರಕ್ಕೆ ನೀಲಿ–ನಕ್ಷೆಯನ್ನು ಸಿದ್ದಪಡಿಸಲು ಉದ್ದೇಶಿಸಿದೆ.

## 3.0 ದೃಷ್ಟಿಕೋನ (Vision)

"ಪ್ರಸ್ತುತ ಮತ್ತು ಭವಿಷ್ಯದ ಪೀಳಿಗೆಯ ಅಗತ್ಯಗಳನ್ನು ಪೂರೈಸುವ ಆರೋಗ್ಯಕರ ಮತ್ತು ಸ್ಪಂದಿಸುವ (vibrant) ಮೀನುಗಾರಿಕೆ ಕ್ಷೇತ್ರ."

## 4.0 ಮಿಷನ್ (Mission)

"ಸಂಪನ್ಮೂಲಗಳ ಸುಸ್ಥಿರತೆಯನ್ನು ಎಲ್ಲಾ ಕ್ರಿಯೆಗಳ ಅಂತರಂಗದಲ್ಲಿಟ್ಟುಕೊಂಡು, ರಾಷ್ಟ್ರೀಯ ಮೀನುಗಾರಿಕೆ ನೀತಿಯು ಮುಂದಿನ ಹತ್ತು ವರ್ಷಗಳಲ್ಲಿ ದೇಶದ ಮೀನುಗಾರರು ಮತ್ತು ಮೀನು ಕೃಷಿಕರ ಸಾಮಾಜಿಕ ಮತ್ತು ಆರ್ಥಿಕ ಗುರಿಗಳನ್ನು ಮತ್ತು ಯೋಗಕ್ಷೇಮವನ್ನು ನಿರ್ವಹಿಸುತ್ತದೆ ಮತ್ತು ಮೀನುಗಾರಿಕೆ ಕ್ಷೇತ್ರದ ಸಮನ್ವಯ ಮತ್ತು ನಿರ್ವಹಣೆಗೆ ಮಾರ್ಗದರ್ಶನ ನೀಡುವ ಉದ್ದೇಶವನ್ನು ಹೊಂದಿದೆ."

## 5.0 ಉದ್ದೇಶಗಳು (Objectives)

ದೇಶದಲ್ಲಿ ಮೀನು ಹಿಡುವಳಿ (Capture fisheries) ಮತ್ತು ಜಲಕೃಷಿ (Aquaculture) ಗಳ ಸಮಗ್ರ ಅಭಿವೃದ್ಧಿಯನ್ನು ಭದ್ರಪಡಿಸುವುದು ರಾಷ್ಟ್ರೀಯ ಮೀನುಗಾರಿಕೆ ನೀತಿಯ ಉದ್ದೇಶವಾಗಿದೆ. ಮೀನುಗಾರರು ಮತ್ತು ಮೀನು ಕೃಷಿಕರು ನೀತಿಯ ಕೇಂದ್ರವಾಗಿರುವಾಗ, ಸಂಪನ್ಮೂಲಗಳು ಮತ್ತು ಸಂಬಂಧಿತ ಆವಾಸಸ್ಥಾನಗಳ (habitats) ಉತ್ತಮ ನಿರ್ವಹಣೆ ಮತ್ತು ಸುಸ್ಥಿರ ಅಭಿವೃದ್ಧಿ, ಪರಿಸರ ವ್ಯವಸ್ಥೆಯ ಸಮಗ್ರತೆಯನ್ನು ಕಾಪಾಡಿಕೊಳ್ಳುವುದು, ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಮತ್ತು ಪೌಷ್ಟಿಕಾಂಶದ ಸುರಕ್ಷತೆಯನ್ನು ಪೂರೈಸುವುದು, ಮೀನುಗಾರಿಕೆ ಮತ್ತು ಕೃಷಿ ಸಮುದಾಯಗಳ ಹಕ್ಕುಗಳು ಮತ್ತು ಅವುಗಳ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸುವುದು, ಭಾರತೀಯ ಮೀನು ಮತ್ತು ಮೀನು ಉತ್ಪನ್ನಗಳನ್ನು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿಸುವುದು, ಮತ್ತು ಮೀನುಗಾರಿಕೆ ಸಂಪನ್ಮೂಲಗಳ ಸುಸ್ಥಿರ ಮತ್ತು ಸದ್ಬಳಕೆಯ ಕುರಿತಾದ ಜಾಗತಿಕ ಕಾರ್ಯಸೂಚಿಯನ್ನು ಪೂರೈಸುವಲ್ಲಿ ಭಾರತದ ಬದ್ಧತೆಯನ್ನು ಬೆಂಬಲಿಸುವುದು ಇದರ ಉದ್ದೇಶವಾಗಿರುತ್ತದೆ.

## 6.0 ಕಾರ್ಯತಂತ್ರ (Strategy)

ರಾಷ್ಟ್ರೀಯ ಮೀನುಗಾರಿಕೆ ನೀತಿ (ರಾ.ಮೀ.ನೀ) ದೇಶದ ಸಂಪೂರ್ಣ ಭೂಮಿ ಮತ್ತು ಇಇಜೆಡ್ (EEZ) ಅನ್ನು ಒಳಗೊಳ್ಳುತ್ತದೆ ಮತ್ತು ಇದನ್ನು ಹತ್ತು ವರ್ಷಗಳ (2021–2030) ಕಾಲಮಿತಿಯಲ್ಲಿ ನಿಗದಿಪಡಿಸಲಾಗಿದೆ. ಕಾರ್ಯತಂತ್ರದ ರೂಪರೇಷೆಗಳನ್ನು ಈ ಕೆಳಗಿನ ನಿರೂಪಣೆಯಲ್ಲಿ 10 ವಿಭಾಗಗಳ (6.1–6.10) ಅಡಿಯಲ್ಲಿ ವಿವರಿಸಲಾಗಿದೆ.

### 6.1 ಸಮುದ್ರ ಮೀನುಗಾರಿಕೆ

ಮೀನುಗಾರಿಕೆ ಕ್ಷೇತ್ರದ ಸಾಮರ್ಥ್ಯ ಅದರಲ್ಲೂ ವಿಶೇಷವಾಗಿ ಸಮುದ್ರ ಮೀನುಗಾರಿಕೆ ಉಪ–ವಲಯದ ಅಂತಸ್ಸತ್ವ(potential)ವನ್ನು ಭಾರತೀಯ ಅಭಿವೃದ್ಧಿ ಯೋಜನೆಯು ಪ್ರಾರಂಭದಲ್ಲಿಯೇ ಗುರುತಿಸಲಾಗಿದೆ. ಜನಸಾಮಾನ್ಯರ ಆಹಾರ ಮತ್ತು ಪೌಷ್ಟಿಕಾಂಶದ ಅವಶ್ಯಕತೆಗಳನ್ನು ಭದ್ರಪಡಿಸುವುದರ ಹೊರತಾಗಿ, ಸಮುದ್ರ ಮೀನುಗಾರಿಕೆಯು ವ್ಯಾಪಾರ ಮತ್ತು ವಾಣಿಜ್ಯದಲ್ಲಿ ಸಹ ಪ್ರಮುಖ ಪಾತ್ರ ವಹಿಸುತ್ತದೆ ಮತ್ತು ಈ ಪ್ರಕ್ರಿಯೆಯಲ್ಲಿ ಕರಾವಳಿ ಸಮುದಾಯಗಳ ಉದ್ಯೋಗ ಮತ್ತು ಜೀವನೋಪಾಯವನ್ನು ಉತ್ತೇಜಿಸುತ್ತದೆ.

1976 ರಲ್ಲಿ ಇಇಜೆಡ್ (EEZ) ಘೋಷಣೆಯ ನಂತರ, ಭಾರತಕ್ಕೆ ಲಭ್ಯವಿರುವ ಸಮುದ್ರ ಪ್ರದೇಶವು 2.02 ಮಿಲಿಯನ್ ಚದರ ಕಿ.ಮೀ, ಶೆಲ್ಫ್ ಪ್ರದೇಶ (shelf area) 0.372 ಮಿಲಿಯನ್ ಚದರ ಕಿ.ಮೀ ಮತ್ತು ಕರಾವಳಿ ತೀರವು 8000+ ಕಿ.ಮೀ. ಆಗಿರುತ್ತದೆ. ಇಇಜೆಡ್(EEZ)ನಲ್ಲೂ ಸಾರ್ವಭೌಮ ಹಕ್ಕುಗಳೊಂದಿಗೆ, ಈ ಪ್ರದೇಶದೊಳಗಿನ ಸಮುದ್ರ ಜೀವ ಸಂಪನ್ಮೂಲಗಳನ್ನು ಸಂರಕ್ಷಿಸುವ, ಅಭಿವೃದ್ಧಿಪಡಿಸುವ ಮತ್ತು ಸೂಕ್ತವಾಗಿ ಬಳಸಿಕೊಳ್ಳುವ ಜವಾಬ್ದಾರಿಯನ್ನು ಭಾರತ ಪಡೆದುಕೊಂಡಿದೆ. ಭಾರತದಲ್ಲಿ ಒಟ್ಟು 3.77 ಮಿಲಿಯನ್ ಸಮುದ್ರ ಮೀನುಗಾರರು ಮತ್ತು ಇದರಲ್ಲಿ 0.93 ಮಿಲಿಯನ್ ಸಕ್ರೀಯ ಮೀನುಗಾರರು ಇರುವುದಾಗಿ ಅಂದಾಜಿಸಲಾಗಿದೆ. ಮೀನುಗಾರ ಮಹಿಳೆಯರು ಮೀನು ಮಾರಾಟದಲ್ಲಿ ಸಕ್ರೀಯರಾಗಿದ್ದು, ಮಾರಾಟಗಾರರಲ್ಲಿ ಶೇ. 86ರಷ್ಟಿರುತ್ತಾರೆ. ಹಾಗೆಯೇ ಸುಮಾರು 14,000 ಮಹಿಳೆಯರು ಮೀನುಮರಿ ಸಂಗ್ರಹದಲ್ಲಿ ತೊಡಗಿದ್ದಾರೆ ಮತ್ತು ಅಷ್ಟೇ ಸಂಖ್ಯೆಯಲ್ಲಿ ಚಿಪ್ಪು ಮೀನು ಸಂಗ್ರಹ ಚಟುವಟಿಕೆಗಳಲ್ಲಿ ಭಾಗಿಯಾಗಿರುತ್ತಾರೆ. ಸಮುದ್ರ ಮೀನುಗಾರಿಕೆಯು ಪ್ರಮುಖವಾಗಿ ಸಣ್ಣ ಪ್ರಮಾಣದ ಮೀನುಗಾರಿಕೆಯಿಂದ (Small scale fishing) ಕೂಡಿದೆ.

#### *6.1.1 ಸಮುದ್ರ ಮೀನುಗಾರಿಕೆಯನ್ನು ಉಳಿಸಿಕೊಳ್ಳುವುದು (Sustaining Marine Fisheries)*

ಇಇಜೆಡ್ (EEZ) ನಿಂದ ಸಮುದ್ರ ಮೀನುಗಾರಿಕೆಯ ಪ್ರಸ್ತುತ ಸಂಭಾವ್ಯ ಇಳುವರಿ (ಪಿವೈ) 5.31 ಮಿಲಿಯನ್ ಮೆಟ್ರಿಕ್ ಟನ್ ಆಗಿರುತ್ತದೆ. ಪ್ರಸ್ತುತ ಇಳುವರಿ (2018–2019) 4.18 ಮಿ.ಮೀ. ಆಗಿದ್ದು, ಹಿಡುವಳಿಯನ್ನು 1.13 ಮಿ.ಮೆ. ಟನ್ ನಷ್ಟು ಹೆಚ್ಚಿಸುವ ಸಾಮರ್ಥ್ಯವನ್ನು ಸೂಚಿಸುತ್ತದೆ. 200 ರಿಂದ 500 ಮೀಟರ್ ಆಳದ ವಲಯದಲ್ಲಿ ಮತ್ತು ಆಳ ಸಮುದ್ರದ (Oceanic) ನೀರಿನಲ್ಲಿ ಹಿಡುವಳಿ ಮಾಡಿದ/ಕಡಿಮೆ ಹಿಡುವಳಿಯಾದ ಸಂಪನ್ಮೂಲಗಳು ಲಭ್ಯವಿದೆ. 0.23 ಎಂಎಂಟಿ ಟ್ಯೂನಾ ಮೀನು ಮತ್ತು ಟ್ಯೂನಾ ತರಹದ ಮೀನುಗಳ ಸಂಭಾವ್ಯ ಇಳುವರಿ ಹೊರತುಪಡಿಸಿ, ಸಾಗರ ನೀರಿನಲ್ಲಿರುವ ಇತರ ಅನೇಕ ಸಂಪನ್ಮೂಲಗಳು ಸಾಂಪ್ರದಾಯಿಕವಲ್ಲದ ಫಿನ್ ಮತ್ತು ಚಿಪ್ಪುಮೀನುಗಳಾದ ಮೈಕ್ಟೋಫಿಡ್ಸ್ ಮತ್ತು ಸಾಗರ ಸ್ಕ್ವಿಡ್‌ಗಳಾಗಿವೆ.

0.23 ಎಂಎಂಟಿ ಟ್ಯೂನ ಮತ್ತು ಟ್ಯೂನ ತರಹದ ಮೀನುಗಳು ಮತ್ತು ಸಾಗರ ಸ್ಕ್ವಿಡ್‌ಗಳ (0.63 ಎಂಎಂಟಿ) ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು, ಮೀನುಗಾರರಿಗೆ ಮೀನು ಹಿಡಿಯುವ ಮತ್ತು ಸಂರಕ್ಷಿಸುವ ಕೌಶಲ್ಯ ಮತ್ತು ಸಾಮರ್ಥ್ಯಗಳ ಸುಧಾರಣೆಗೆ ನೀತಿ ಮಾರ್ಗದರ್ಶಿಯನ್ನು ರೂಪಿಸಲಾಗುವುದು. ಆಧುನಿಕ ಮೀನುಗಾರಿಕಾ ದೋಣಿಗಳು, ಬಲೆಗಳು ಮತ್ತು ಸಂಭಾವ್ಯ ಮೀನುಗಾರಿಕಾ ಪ್ರದೇಶವನ್ನು (PFZ) ಪತ್ತೆಹಚ್ಚಲು ಸಂಶೋಧನೆ ಮತ್ತು ಅಭಿವೃದ್ಧಿಗೆ ಹಿಡುವಳಿ ನಂತರದ ನಿರ್ವಹಣೆಯನ್ನು ಸುಧಾರಿಸುವುದು ಮತ್ತು ಮೌಲ್ಯವರ್ಧನೆಯನ್ನು ಸೃಷ್ಟಿಸುವುದು ಮತ್ತು ಆಹಾರ ಸುರಕ್ಷತೆಯನ್ನು ಖಾತರಿಪಡಿಸಲು ನೆರವು ನೀಡುವ ಮೂಲಕ ಈ ಉಪಕ್ರಮವು ಮತ್ತಷ್ಟು ಸಹಾಯಕವಾಗಲಿದೆ. ಆದಾಗ್ಯೂ, ಅಂದಾಜುಗಳಲ್ಲಿನ ಅನಿಶ್ಚಿತತೆಗಳನ್ನು ಪರಿಗಣಿಸಿ, ಜಾಗತಿಕ ಮಟ್ಟಕ್ಕೆ ಅನುಗುಣವಾಗಿ ಸುಸ್ಥಿರತೆ ಮತ್ತು ಇಕ್ವಿಟಿಯ ಪ್ರಮುಖ ಧ್ಯೇಯದೊಂದಿಗೆ ಸಮುದ್ರ ಮೀನುಗಾರಿಕೆಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ.

ಸುಸ್ಥಿರತೆಯನ್ನು (ಪರಿಸರ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಥಿಕ) ಖಾತರಿಪಡಿಸುವತ್ತ ಗಮನಹರಿಸುವುದರೊಂದಿಗೆ, ಸಂಪನ್ಮೂಲಗಳ ಸುಸ್ಥಿರತೆಗೆ ಹೋಲಿಸಿದರೆ ಮೀನು ಹಿಡುವಳಿ ಪ್ರಯತ್ನ ತರ್ಕಬದ್ಧಗೊಳಿಸುವಿಕೆಯು ಅತ್ಯಂತ ತಕ್ಷಣದ ಅವಶ್ಯಕತೆಯಾಗಿದೆ. ಇದು ಮೀನುಗಾರಿಕೆ ಕಾರ್ಯಾಚರಣೆಗಳ ಆರ್ಥಿಕ ಕಾರ್ಯಸಾಧ್ಯತೆಯನ್ನು ಖಚಿತಪಡಿಸುತ್ತದೆ. ಅಲ್ಪಾವಧಿಯಲ್ಲಿ ಮೀನು ಹಿಡುವಳಿಗೆ ಹೆಚ್ಚುವರಿ ಪ್ರವೇಶವನ್ನು ನಿಲ್ಲಿಸುವುದು ಮತ್ತು ನಂತರ ಸಮತೋಲನದತ್ತ ಸಾಗುವ ಪ್ರಯತ್ನದ ಮರು ವಿತರಣೆಯ ಗುರಿಯಾಗಿದೆ. ಆಳಸಮುದ್ರದ ನೀರಿನಲ್ಲಿ, ಕಡಿಮೆ ಅಥವಾ ಮೀನು ಹಿಡುವಳಿಯಾಗದ ಸಂಪನ್ಮೂಲಗಳಿಗೆ ಮಾತ್ರ ಹೆಚ್ಚುವರಿ ಪ್ರಯತ್ನವನ್ನು ಅನುಮತಿಸಬಹುದು. ಇತರ ನಿರ್ವಹಣಾ ಕ್ರಮಗಳಲ್ಲಿ ಮೀನುಗಾರಿಕೆ ದಿನಗಳು, ಕಾರ್ಯಾಚರಣೆಯ ಪ್ರದೇಶ, ಎಂಜಿನ್ ಅಶ್ವಶಕ್ತಿ, ಗೇರ್ ಗಾತ್ರ, ಕನಿಷ್ಠ ಜಾಲರಿಯ ಗಾತ್ರ, ಕನಿಷ್ಠ ಕಾನೂನು ಗಾತ್ರ (ಎಂಎಲ್‌ಎಸ್) ಮತ್ತು ವಾಣಿಜ್ಯಿಕವಾಗಿ ಪ್ರಮುಖ ಮೀನಿನ ಜಾತಿಗಳ ಎಂಎಲ್‌ಎಸ್ ಗಾಗಿ ರಾಷ್ಟ್ರೀಯ ಮಾರ್ಗಸೂಚಿಗಳ ಅಭಿವೃದ್ಧಿಯಂತಹ ಇನ್ಪುಟ್ (input) ಮತ್ತು ಔಟ್‌ಪುಟ್ (output) ನಿಯಂತ್ರಣಗಳನ್ನು ಒಳಗೊಂಡಿರುತ್ತದೆ. ಈ ಚಟುವಟಿಕೆಗಳಿಗೆ ಪೂರಕವಾಗಿ, ಸಂಪನ್ಮೂಲ ನಾಶದ ನಿಯಂತ್ರಣಕ್ಕೆ ಫ್ಲೀಟ್ ಪ್ಲಾನ್ (Fleet plans) ಮತ್ತು ಮೀನುಗಾರಿಕೆ ನಿಯಂತ್ರಣ ವಲಯಗಳ ಸೃಷ್ಟಿಯು ಸಹಾಯಕವಾಗುತ್ತದೆ. ಮೀನುಗಾರಿಕೆ ಮತ್ತು ಸಂಬಂಧಿತ ಸಂಸ್ಥೆಗಳು ಕ್ಷೀಣಿಸಿದ ಅಥವಾ ಕುಸಿದ ಸ್ಥಿತಿಯಲ್ಲಿರುವ ಮೀನು ದಾಸ್ತಾನುಗಳಿಗೆ ಪುನರ್ನಿರ್ಮಾಣ / ಚೇತರಿಕೆ ಯೋಜನೆಗಳನ್ನು ರೂಪಿಸುವುದನ್ನು ಖಚಿತಪಡಿಸುತ್ತದೆ. ಮೀನಿನ ದಾಸ್ತಾನುಗಳನ್ನು ಮರುಪೂರಣಗೊಳಿಸಲು ಮತ್ತು ಸಮುದ್ರ ಪರಿಸರದಲ್ಲಿ ಜಾತಿಗಳ ವೈವಿಧ್ಯತೆಯನ್ನು ಸುಧಾರಿಸಲು ನಿರ್ವಹಣಾ ಆಯ್ಕೆಗಳಾಗಿ ಸಮುದ್ರ ಮೀನುಮರಿ ಬಿತ್ತನೆ (Sea Ranching) ಮತ್ತು ಕೃತಕ ರೀಫ್ (artificial reef) ನಿಯೋಜನೆಯನ್ನು ಆಧರಿಸಿ ಸಹ ಇಂತಹ ಪ್ರಯತ್ನಗಳು ನಡೆಯುತ್ತವೆ. ಸಂಭಾವ್ಯ ಇಳುವರಿ (PE) ಅಂದಾಜಿನ ಆಧಾರದ ಮೇಲೆ ಮೀನುಗಾರಿಕೆ ಸಾಮರ್ಥ್ಯಕ್ಕಾಗಿ

ಮೌಲ್ಯಮಾಪನ ಚೌಕಟ್ಟನ್ನು ಸಿದ್ಧಪಡಿಸಲಾಗುತ್ತದೆ ಮತ್ತು ಮೀನು ದಾಸ್ತಾನುಗಳನ್ನು ಸುಸ್ಥಿರ ಆಧಾರದ ಮೇಲೆ ಹಿಡುವಳಿ ಮಾಡಲು ನಿರಂತರ ಸ್ಟಾಕ್ ಮೌಲ್ಯಮಾಪನಗಳನ್ನು ಕೈಗೊಳ್ಳಲಾಗುತ್ತದೆ.

ಉತ್ಪಾದನಾ ಪ್ರಕ್ರಿಯೆಗಳಲ್ಲಿ ಜೀವವೈವಿಧ್ಯ ಸಂರಕ್ಷಣೆಯನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನಿಸಲಾಗುವುದು; ಪರಿಸರ ಮತ್ತು ಜೈವಿಕವಾಗಿ ಮಹತ್ವದ ಪ್ರದೇಶಗಳ (ಇಬಿಎಸ್ಎ) ಮತ್ತು ದುರ್ಬಲ ಸಮುದ್ರ ಪರಿಸರ ವ್ಯವಸ್ಥೆಗಳ (ವಿಎಂಇ) ಸಂರಕ್ಷಣೆ ಸೇರಿದಂತೆ ಜಾತಿ–ನಿರ್ದಿಷ್ಟ ಮತ್ತು ವಲಯ / ಪ್ರದೇಶ–ನಿರ್ದಿಷ್ಟ ನಿರ್ವಹಣಾ ಯೋಜನೆಗಳು; ಸಾಂಪ್ರದಾಯಿಕ ಮತ್ತು ಅಳಿವಿನಂಚಿನಲ್ಲಿರುವ ಮತ್ತು threatened (ಇಟಿಪಿ) ಜಾತಿಗಳ ರಕ್ಷಣೆ; ಸಂಪನ್ಮೂಲಗಳ ಸುಸ್ಥಿರ ಬಳಕೆಗಾಗಿ ಪ್ರಾದೇಶಿಕ ಮತ್ತು ತಾತ್ಕಾಲಿಕ ಕ್ರಮಗಳು; ಮತ್ತು ಸಮಾಲೋಚನಾ ಪ್ರಕ್ರಿಯೆಗಳ ಮೂಲಕ ಮೀನು ರೆಫ್ಯೂಜಿಯಾವನ್ನು ರಚಿಸುವುದು ಸೇರಿವೆ. ಅದೇ ಸಮಯದಲ್ಲಿ, ಸರ್ಕಾರವು ಅಸ್ತಿತ್ವದಲ್ಲಿರುವ ಸಮುದ್ರ ಸಂರಕ್ಷಿತ ಪ್ರದೇಶಗಳ (ಎಂಪಿಎ) ಪರಿಶೀಲನೆ ಮತ್ತು ಆವರ್ತಕ ಮೌಲ್ಯಮಾಪನವನ್ನು ಕೈಗೊಳ್ಳುತ್ತದೆ ಮತ್ತು ಅಂತಹ ಸಂರಕ್ಷಣಾ ಕ್ರಮಗಳಿಂದ ಸಾಂಪ್ರದಾಯಿಕ ಮೀನುಗಾರರ ಹಕ್ಕುಗಳು ಮತ್ತು ಜೀವನ ನಿವಹಣೆಗೆ ತೊಂದರೆಯಾಗದಂತೆ ಖಚಿತಪಡಿಸಿಕೊಳ್ಳಲು ಶಾಸಕಾಂಗ ಬೆಂಬಲವನ್ನು ಒದಗಿಸುತ್ತದೆ.

ಸಮುದ್ರ ಪರಿಸರ ವ್ಯವಸ್ಥೆಯ ಎಲ್ಲಾ ಜೀವಂತ ಮತ್ತು ನಿರ್ಜೀವ ಘಟಕಗಳ ಕ್ಷೇಮ ಮತ್ತು ಮೀನುಗಾರರ ಸಾಮಾಜಿಕ ಲಕ್ಷಣಗಳು ಮತ್ತು ಆರ್ಥಿಕ ಅಗತ್ಯಗಳನ್ನು ಪರಿಗಣಿಸಿ ಮೀನುಗಾರಿಕೆ ನಿರ್ವಹಣೆಗೆ ಪರಿಸರ ವ್ಯವಸ್ಥೆ ಅಪ್ರೋಚ್ (ಇಎಎಫ್ಎಂ) ಜಾರಿಗೆ ತರಲಾಗುವುದು. ಅದೇ ಧಾಟಿಯಲ್ಲಿ, ಬಹು–ಪಾಲುದಾರ, ಬಹು–ಜಾತಿಗಳು ಮತ್ತು ಬಹು ದೋಣಿಗಳ ಮೀನುಗಾರಿಕೆಗಾಗಿ ಯಶಸ್ವಿ ನಿರ್ವಹಣಾ ವ್ಯವಸ್ಥೆಗಳಲ್ಲಿ ಒಂದಾಗಿ ಜಾಗತಿಕವಾಗಿ ಗುರುತಿಸಲ್ಪಟ್ಟ ಸಹಭಾಗಿತ್ವ ನಿರ್ವಹಣೆ ಅಥವಾ ಸಹ–ನಿರ್ವಹಣೆಯನ್ನು ಉತ್ತೇಜಿಸಲಾಗುತ್ತದೆ. ದೇಶದಲ್ಲಿ ಸಹ ನಿರ್ವಹಣೆಯನ್ನು ಉತ್ತೇಜಿಸುವಾಗ ಕೇರಳ, ತಮಿಳುನಾಡು ಮತ್ತು ಪುದುಚೇರಿಗಳು ಸಿದ್ಧಪಡಿಸಿದ ಉದಾಹರಣೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಸ್ಥಳೀಯ, ಪ್ರಾದೇಶಿಕ, ಅಂತರಾಜ್ಯ ಮತ್ತು ರಾಷ್ಟ್ರೀಯ ಮೀನುಗಾರಿಕೆ ಕೌನ್ಸಿಲ್‌ಗಳು (councils) ಮೀನುಗಾರರ ಗುಂಪುಗಳ ನಡುವಿನ ಸಂಘರ್ಷದ ಪರಿಹಾರ ಒದಗಿಸಲು ಸಹಾಯಕವಾಗುತ್ತದೆ. ಮತ್ತು ನಿರ್ವಹಣಾ ಮಾರ್ಗಸೂಚಿಗಳನ್ನು ಪಾಲುದಾರರೊಂದಿಗೆ ಚರ್ಚಿಸಿ ಸಿದ್ದಪಡಿಸಲಾಗುವುದು. ಪ್ರಾದೇಶಿಕ ಮತ್ತು ತಾತ್ಕಾಲಿಕ ಮುಚ್ಚುವಿಕೆಗಳು ದೇಶದ ಸಮುದ್ರ ಮೀನು ಸಂಪತ್ತನ್ನು ಉಳಿಸಿಕೊಳ್ಳಲು ಸಹಾಯ ಮಾಡಿವೆ. ಈ ನಿರ್ವಹಣಾ ಕ್ರಮಗಳು ಮೀನುಗಾರರ ಜೀವನೋಪಾಯವನ್ನು ಪರಿಣಾಮಕಾರಿಯಾಗಿ ಸುಧಾರಿಸುತ್ತದೆ ಎಂದು ಖಚಿತಪಡಿಸಿಕೊಳ್ಳಲು, ಮುನ್ನೆಚ್ಚರಿಕೆ ವಿಧಾನ ಸೇರಿದಂತೆ ಲಭ್ಯವಿರುವ ಅತ್ಯುತ್ತಮ ವೈಜ್ಞಾನಿಕ ಮಾಹಿತಿಯನ್ನು ಗಣನೆಗೆ ತೆಗೆದುಕೊಂಡು, ಮತ್ತು ಮೀನುಗಾರರು ಮತ್ತು ಇತರ ಸಂಬಂಧಪಟ್ಟ ಪಾಲುದಾರರನ್ನು ಸೇರಿಸಿಕೊಂಡು ಆವರ್ತಕ ವಿಮರ್ಶೆಗಳನ್ನು ನಡೆಸಲಾಗುತ್ತದೆ.

ಪ್ರಸ್ತುತ, ಕರಾವಳಿ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ, ಯಾಂತ್ರಿಕೃತ ಮೀನುಗಾರಿಕೆಗೆ ಅನುಮತಿ ಇಲ್ಲದ ನಿರ್ದಿಷ್ಟ ಪ್ರದೇಶಗಳನ್ನು (ಕಡಲ ತೀರದಿಂದ ಆಳ ಅಥವಾ ದೂರವನ್ನು ಆಧರಿಸಿ) ಕಾಯ್ದಿರಿಸಲಾಗಿದೆ. Such Territorial Use Rights for Fisheries (TURF) (ಪ್ರಾದೇಶಿಕ ಬಳಕೆಯ ಹಕ್ಕುಗಳು) ಸಾಂಪ್ರದಾಯಿಕ ಮೀನುಗಾರರ ಜೀವನೋಪಾಯವನ್ನು ಉಳಿಸಿಕೊಳ್ಳಲು ಉಪಯುಕ್ತವೆಂದು ಸಾಬೀತಾಗಿದೆ. ಸಾಂಪ್ರದಾಯಿಕ ಮೀನುಗಾರರಿಗೆ ಸರ್ಕಾರವು ಅಂತಹ ಬೆಂಬಲವನ್ನು ನೀಡುವುದನ್ನು ಮುಂದುವರಿಸುತ್ತದೆ ಮತ್ತು ಪಾಲುದಾರರ ಗುಂಪುಗಳೊಂದಿಗೆ ಸಮಾಲೋಚಿಸಿ, ಪ್ರಾದೇಶಿಕ ನೀರಿನಲ್ಲಿ (territorial waters) ಸಾಂಪ್ರದಾಯಿಕ ಮೀನುಗಾರರಿಗೆ ಪ್ರಸ್ತುತ ಲಭ್ಯವಿರುವ ಪ್ರದೇಶವನ್ನು ಹೆಚ್ಚಿಸಲು ಇದು ಪರಿಗಣಿಸುತ್ತದೆ.

ಸಾಂಪ್ರದಾಯಿಕ ಜ್ಞಾನ ಮತ್ತು ವಿಜ್ಞಾನವನ್ನು ವ್ಯಾಪಾರ ತತ್ವಗಳೊಂದಿಗೆ ಬೆರೆಸುವುದು ಮತ್ತು ಪ್ರಾಥಮಿಕ ಪಾಲುದಾರರು ಮತ್ತು ಇತರೇ ಪೂರಕ ಚಟುವಟಿಕೆ ತೊಡಗಿರುವವರನ್ನು ಪರಿಣಾಮಕಾರಿ ತೊಡಗಿಸಿಕೊಳ್ಳುವಿಕೆ ಮೂಲಕ ಮೀನುಗಾರಿಕೆ ಪರಿಸರ ಮತ್ತು ಆರ್ಥಿಕವಾಗಿ ಸುಸ್ಥಿರವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಮೀನುಗಾರಿಕೆ ನಿರ್ವಹಣೆಯು ಸಮಗ್ರ ವಿಧಾನವನ್ನು ಅನುಸರಿಸುತ್ತದೆ. ಜ್ಞಾನ ಸಮೃದ್ಧಿ ಮತ್ತು ಸಂಪನ್ಮೂಲ ಸಮೃದ್ಧಿ ಮತ್ತು ವಿತರಣೆಯಂತಹ ಸಮುದ್ರ ಮೀನುಗಾರಿಕಾ ಕ್ಷೇತ್ರದ ಪ್ರಮುಖ ಗುಣಲಕ್ಷಣಗಳ ಮಾಹಿತಿಯ ತ್ವರಿತ ಮತ್ತು ಸುಲಭ ಪ್ರಸಾರ ಮತ್ತು ಮಾಹಿತಿಯ ಲಭ್ಯತೆಯನ್ನು ಬೆಳೆಸುವ ವಿಧಾನವಾಗಿದೆ; ನೈಜ–ಸಮಯದ ಸಂಪನ್ಮೂಲ ನಕ್ಷೆಗಳು; ಉತ್ಪಾದಕತೆ ಮೌಲ್ಯಮಾಪನಗಳು; ನೈಜ–ಸಮಯದ ಸಂಭಾವ್ಯ ಮೀನುಗಾರಿಕೆ ವಲಯ (ಪಿಎಫ್‌ಜೆಡ್) ಸಲಹೆಗಳು; ಮತ್ತು ಮೀನುಗಾರರ ಅನುಕೂಲಕ್ಕಾಗಿ ಹವಾಮಾನ ಮುನ್ಸೂಚನೆಗಳು. ಮಾಹಿತಿ ತಂತ್ರಜ್ಞಾನ (ಐಟಿ) ಮತ್ತು ಬಾಹ್ಯಾಕಾಶ ತಂತ್ರಜ್ಞಾನ (ಎಸ್‌ಟಿ) ಬಳಕೆಯನ್ನು ಮೀನುಗಾರ ಸಮುದಾಯಕ್ಕೆ ಬೆಂಬಲವಾಗಿ ಪ್ರಯೋಜನಗಳನ್ನು ಪಡೆಯಲು ಅತ್ಯುತ್ತಮ ಬಳಕೆಗೆ ತರಲಾಗುವುದು.

ಕಡಲಾಚೆಯ ನೀರಿನಲ್ಲಿ ರಾಷ್ಟ್ರೀಯ ನ್ಯಾಯವ್ಯಾಪ್ತಿಯ ಆಚೆಗಿನ ಪ್ರದೇಶಗಳು (Areas Beyond National Judisdiction (ABNJ) ಮೀನುಗಾರಿಕೆಗೆ ತೀವ್ರ ಬಂಡವಾಳ ಮತ್ತು ತಂತ್ರಜ್ಞಾನ ಅಗತ್ಯವಾಗಿದೆ. ಅಂತರ್ಗತ ಅಭಿವೃದ್ಧಿಗೆ ಸಮುದ್ರ ಮೀನುಗಾರಿಕೆಯ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಆಳ ಸಮುದ್ರದ ಮೀನುಗಾರಿಕೆ ಮತ್ತು ಸಂಸ್ಕರಣೆಯಲ್ಲಿ ಖಾಸಗಿ ಹೂಡಿಕೆಗಳನ್ನು ಉತ್ತೇಜಿಸಲಾಗುತ್ತದೆ. ವಾಣಿಜ್ಯೋದ್ಯಮ ಅಭಿವೃದ್ಧಿ, ತಂತ್ರಜ್ಞಾನದ ಲಭ್ಯತೆ, ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ವ್ಯವಸ್ಥೆಗಳು ಮತ್ತು ಸಾಂಸ್ಥಿಕ ಹಣಕಾಸು ನೆರವನ್ನು ಸಮುದ್ರ ಮೀನುಗಾರಿಕೆ ನೀಡಲು ಉತ್ತೇಜಿಸಲಾಗುತ್ತದೆ. ಅಲ್ಲದೆ, ಈ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಮೀನಿನ ಸಂಸ್ಕರಣೆ ಮತ್ತು ರಫ್ತು ವಲಯವನ್ನು ಆಳ ಸಮುದ್ರದ ಮೀನುಗಾರಿಕೆ ಉದ್ಯಮದೊಂದಿಗೆ ಸಂಯೋಜಿಸಲು ವಿಧಾನಗಳನ್ನು ರೂಪಿಸಲಾಗುವುದು.

ಆಳ ಸಮುದ್ರದ ಮೀನುಗಾರಿಕೆಯನ್ನು ಕೈಗೊಳ್ಳಲು ಮತ್ತು ಜನಪ್ರಿಯಗೊಳಿಸಲು ಕುಶಲಕರ್ಮಿ ಮೀನುಗಾರರ ಕೌಶಲ್ಯ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸಲು ಸರ್ಕಾರವು ಹೊಸ ಯೋಜನೆ (ಗಳನ್ನು) ಅಸ್ತಿತ್ವದಲ್ಲಿರುವ ಆಳ ಸಮುದ್ರದ ಮೀನುಗಾರಿಕಾ ದೋಣಿಗಳ ಆಧುನೀಕರಣ, ಸಹಕಾರಿ / ಸ್ವ–ಸಹಾಯ ಗುಂಪುಗಳ ಮೀನುಗಾರರ ಮೂಲಕ ಹೊಸ / ಸುಧಾರಿತ ಸ್ಥಳೀಯ ಆಳ ಸಮುದ್ರ ಮೀನುಗಾರಿಕೆ ದೋಣಿಗಳ ಸೇರ್ಪಡೆ, ಆನ್–ಬೋರ್ಡ್ ತರಬೇತಿ ಮತ್ತು ಮಾರುಕಟ್ಟೆಗಳು ಮತ್ತು ರಫ್ತಿಗೆ ಸಂಪರ್ಕಗಳನ್ನು ರೂಪಿಸುತ್ತದೆ. ಈ ಕಾರ್ಯವಿಧಾನಗಳು / ಯೋಜನೆಗಳನ್ನು ಪರಿಚಯಿಸುವಾಗ, ಅಂತಹ ಉಪಕ್ರಮಗಳು ಇಇಜೆಡ್ ಮತ್ತು ಎಬಿಎನ್‌ಜೆ ಮೀನುಗಾರಿಕೆಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಸಾಧನಗಳ ಅಡಿಯಲ್ಲಿ ನಿಗದಿಪಡಿಸಿದ ನಿಯಮಗಳು ಮತ್ತು ನಿಯಮಗಳನ್ನು ಅನುಸರಿಸುತ್ತವೆ ಎಂದು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

ಇಇಜೆಡ್ (EEZ) ಮತ್ತು ಅದರಾಚೆಗಿನ ಆಳ ಸಮುದ್ರದ ಸಂಪನ್ಮೂಲಗಳ ಬಳಕೆಯಲ್ಲಿ ಇಇಜೆಡ್ ನಲ್ಲಿ ಲಭ್ಯವಿರುವ ಸಂಪನ್ಮೂಲಗಳ ವಿಷಯದಲ್ಲಿ ಮಾತ್ರವಲ್ಲದೆ ಮೂಲಭೂತ ಸೌಕರ್ಯಗಳು, ದೋಣಿ ನಿರ್ಮಾಣ, ಸಮೀಕ್ಷೆ ಮತ್ತು ಪ್ರಮಾಣೀಕರಣ, ಮಾನವ ಸಾಮರ್ಥ್ಯ ಅಭಿವೃದ್ಧಿ; ಬಲವಾದ ಮಾನಿಟರಿಂಗ್, ನಿಯಂತ್ರಣ ಮತ್ತು ಕಣ್ಗಾವಲು (ಎಂಸಿಎಸ್), ಒಳಗೊಂಡ ಸಮಗ್ರ ಮತ್ತು ಕಾರ್ಯಗತಗೊಳಿಸಬಹುದಾದ ನಿಯಮಗಳು ಮತ್ತು ನಿಬಂಧನೆಗಳು; ಮತ್ತು ವಾಣಿಜ್ಯ ಮೀನುಗಾರಿಕೆ ಸಂಪನ್ಮೂಲಗಳ ಬಗ್ಗೆ ವೈಜ್ಞಾನಿಕ ಮತ್ತು ತಾಂತ್ರಿಕ ಮಾಹಿತಿಯ ಲಭ್ಯತೆ ಮತ್ತು ಅವುಗಳನ್ನು ಗುರಿಯಾಗಿಸುವ ಅತ್ಯುತ್ತಮ ಮೀನುಗಾರಿಕೆ ವಿಧಾನಗಳನ್ನೂ ಪರಿಗಣಿಸಲಾಗುವುದು. ಆದಾಗ್ಯೂ, ಅಂತಹ ಉಪಕ್ರಮಗಳು ಆಳ ಸಮುದ್ರದ ಮತ್ತು ಎಬಿಎನ್‌ಜೆಗಳಲ್ಲಿನ ಮೀನುಗಾರಿಕೆಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಒಪ್ಪಂದಗಳು / ವ್ಯವಸ್ಥೆಗಳಲ್ಲಿನ ಸೂಕ್ತವಾದ ನಿಬಂಧನೆಗಳಿಗೆ ಅನುಸಾರವಾಗಿರುತ್ತವೆ ಮತ್ತು ಕರಾವಳಿಯ ಸುರಕ್ಷತೆ ಮತ್ತು ಸಮುದ್ರದಲ್ಲಿನ ಮೀನುಗಾರರ ಸುರಕ್ಷತೆಯನ್ನು ಕಾಪಾಡಲು ಸರಿಯಾದ ಮೇಲ್ವಿಚಾರಣೆ ಮತ್ತು ಸಂವಹನ ಕಾರ್ಯವಿಧಾನಗಳನ್ನು ಹೊಂದಿರುತ್ತವೆ.

ಕರಾವಳಿ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳ ಅಗತ್ಯತೆಗಳು ಮತ್ತು ಎರಡು ದ್ವೀಪಗಳಾದ ಅಂಡಮಾನ್ ಮತ್ತು ನಿಕೋಬಾರ್ ಮತ್ತು ಲಕ್ಷದ್ವೀಪದ ವಿಶೇಷ ಮತ್ತು ವಿಶಿಷ್ಟ ಅಗತ್ಯಗಳನ್ನು ಪರಿಗಣಿಸಿ, ಕರಾವಳಿ ರಾಜ್ಯ / ಕೇಂದ್ರ ಪ್ರಾಂತ್ಯ (ಯುಟಿ) ಸರ್ಕಾರಗಳೊಂದಿಗೆ ಸಮಾಲೋಚಿಸಿ, ಸರ್ಕಾರವು ಇಇಜೆಡ್ ನ ಮೀನುಗಾರಿಕೆ ಸಮಗ್ರ ಸಂಪನ್ಮೂಲ ಬಳಕೆಯ ಯೋಜನೆಯನ್ನು ಅಭಿವೃದ್ಧಿಪಡಿಸುತ್ತದೆ. ಅದೇ ಸಮಯದಲ್ಲಿ, ಕರಾವಳಿ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಿಗೆ 12 ರಿಂದ 200 ನಾಟಿಕಲ್ ಮೈಲುಗಳ(ಎನ್‌ಎಂ) ನಡುವಿನ ಇಇಜೆಡ್ ಪ್ರದೇಶವು ಕೇಂದ್ರ ಸರ್ಕಾರದಿಂದ ನಿರ್ವಹಿಸಲ್ಪಡುವ ಸಾಮಾನ್ಯ ಸಂಪನ್ಮೂಲವಾಗಿದೆ ಮತ್ತು ಮೀನುಗಾರಿಕೆ ಕಾರ್ಯವಿಧಾನಗಳಿಂದ ಅತಿಯಾದ ಹಿಡುವಳಿ ಮತ್ತು ಅಂತರ–

ರಾಜ್ಯ/ಯುಟಿ ಸಂಘರ್ಷಗಳಿಗೆ ಕಾರಣವಾಗಬಹುದೆಂದು ಪರಿಗಣಿಸಲು ತಿಳಿಸಲಾಗುವುದು. ಸಮುದ್ರ ಮೀನುಗಾರಿಕೆಯ ನಿರ್ವಹಣೆಗಾಗಿ ಅಂತಾರಾಷ್ಟ್ರೀಯ ಸಂಘರ್ಷಗಳನ್ನು ಮುಖ್ಯವಾಗಿ ನೆರೆಯ ರಾಷ್ಟ್ರಗಳೊಂದಿಗೆ ಮತ್ತು ಅಂತರರಾಜ್ಯ ಸಂಘರ್ಷಗಳನ್ನು ಕಡಿಮೆ ಮಾಡಲು ಮತ್ತು ನಿರ್ವಹಿಸಲು ಸಾಂಸ್ಥಿಕ ಕಾರ್ಯವಿಧಾನವನ್ನು ಸ್ಥಾಪಿಸಲಾಗುವುದು ಮತ್ತು ಬಲಪಡಿಸಲಾಗುತ್ತದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಕರಾವಳಿಯ ಆರ್ಥಿಕತೆಯನ್ನು ಹೆಚ್ಚಿಸಲು ಸಹಾಯ ಮಾಡುವ ಸಮಗ್ರ ಕರಾವಳಿ ಮತ್ತು ದ್ವೀಪಗಳ ಮೀನುಗಾರಿಕೆ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುತ್ತದೆ ಮತ್ತು ಕಾರ್ಯಗತಗೊಳಿಸುತ್ತದೆ.

**ತಕ್ಷಣದ ಕ್ರಮಕೈಗೊಳ್ಳಬೇಕಾದ ಪ್ರಮುಖ ಕ್ಷೇತ್ರಗಳು ಕೆಳಕಂಡಂತಿವೆ:**

- *ಸೂಕ್ತವಾದ ಮತ್ತು ಜವಾಬ್ದಾರಿಯುತ ತಂತ್ರಜ್ಞಾನ ಮತ್ತು ಪಾಲುದಾರರ, ವಿಶೇಷವಾಗಿ ಸಾಂಪ್ರದಾಯಿಕ ಮೀನುಗಾರರ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ, ಕಡಿಮೆ–ಶೋಷಿತ ಸಂಪನ್ಮೂಲಗಳನ್ನು ಟ್ಯಾಪ್ ಮಾಡಲು ಆಳ ಸಮುದ್ರದ ಮತ್ತು ಎಬಿಎನ್‌ಜೆ (ABNJ) ಪ್ರದೇಶದ ಮೀನುಗಾರಿಕೆಯನ್ನು ಉತ್ತೇಜಿಸುವುದು ಮತ್ತು ಮೀನು ಹಿಡುವಳಿ ಮತ್ತು ಹಿಡುವಳಿ ನಂತರದ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವುದು.*
- *ಮೀನುಗಾರಿಕೆಯ ಪ್ರಯತ್ನವನ್ನು ಉತ್ತಮಗೊಳಿಸುವುದು (Optimization) ಮತ್ತು ಕುಸಿದ / ಅವನತಿ ಹೊಂದಿದ ಮೀನು ದಾಸ್ತಾನುಗಳ ಪುನರ್ನಿರ್ಮಾಣಕ್ಕಾಗಿ ನಿರ್ವಹಣಾ ಯೋಜನೆಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು.*
- *ಸಮಾಲೋಚನಾ ಪ್ರಕ್ರಿಯೆಗಳ ಮೂಲಕ ಮೀನಿನ ಜಾತಿ–ನಿರ್ದಿಷ್ಟ ಮತ್ತು ವಲಯ / ಪ್ರದೇಶ–ನಿರ್ದಿಷ್ಟ ನಿರ್ವಹಣಾ ಯೋಜನೆಗಳಂತಹ ಸಂರಕ್ಷಣಾ ಕ್ರಮಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಇಇಜೆಡ್‌ನಲ್ಲಿ ಸಂಪನ್ಮೂಲ ಬಳಕೆಗಾಗಿ ಸಮಾಲೋಚನಾ ರೀತಿಯಲ್ಲಿ ಸಮಗ್ರ ಯೋಜನೆಯನ್ನು ಸಿದ್ಧಪಡಿಸುವುದು.*
- *ಇಎಎಫ್‌ಎಂ ಮತ್ತು ಸಹ–ನಿರ್ವಹಣಾ ವಿಧಾನಗಳನ್ನು ಅಳವಡಿಸಿಕೊಳ್ಳುವುದನ್ನು ಉತ್ತೇಜಿಸುವುದು.*
- *ಎಂಎಫ್‌ಆರ್‌ಎಗಳ ಅಡಿಯಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳು ಮೀನುಗಾರಿಕೆಗೆ ಮೀಸಲಾಗಿರುವ ಪ್ರದೇಶವನ್ನು ಹೆಚ್ಚಿಸಲು ಕರಾವಳಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪ್ರೋತ್ಸಾಹಿಸುವುದು.*
- *ಸುಧಾರಿತ ಐಟಿ ತಂತ್ರಜ್ಞಾನಗಳ ಬಳಕೆಯೊಂದಿಗೆ ಸಮುದ್ರ ಮೀನುಗಾರಿಕೆ ಕ್ಷೇತ್ರದ ಸಂಪೂರ್ಣ ಕಾರ್ಯಚಟುವಟಿಕೆಗಳಲ್ಲಿ ಜ್ಞಾನ ನಿರ್ವಹಣೆಗೆ ಅನುಕೂಲ ಕಲ್ಪಿಸುವುದು.*
- *ಆಳ ಸಮುದ್ರದ ಮೀನುಗಾರಿಕೆ ಮತ್ತು ರಾಷ್ಟ್ರೀಯ ನೀರಿಗಿಂತ ಮೀರಿದ ದೂರದ ಪ್ರದೇಶದಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸುವಾಗ ಮೀನುಗಾರರ ಸುರಕ್ಷತೆ ಮತ್ತು ರಾಷ್ಟ್ರೀಯ ಭದ್ರತೆಯನ್ನು ಖಚಿತಪಡಿಸುವುದು.*

### *6.1.2 ಮೇಲ್ವಿಚಾರಣೆ, ನಿಯಂತ್ರಣ ಮತ್ತು ಕಣ್ಗಾವಲು (MCS)*

ಸಮುದ್ರ ಮೀನುಗಾರಿಕೆ ಕ್ಷೇತ್ರಕ್ಕೆ ಉತ್ತಮವಾದ ಮತ್ತು ಪರಿಣಾಮಕಾರಿಯಾದ ಎಂಸಿಎಸ್ ಆಡಳಿತಕ್ಕಾಗಿ ಅಸ್ತಿತ್ವದಲ್ಲಿರುವ ಕಾರ್ಯವಿಧಾನಗಳನ್ನು ಸರ್ಕಾರವು ಅಂಗೀಕರಿಸಿದ ಎಂಸಿಎಸ್ ಮೇಲಿನ ರಾಷ್ಟ್ರೀಯ ಕ್ರಿಯಾ ಯೋಜನೆ (ಎನ್‌ಪಿಒಎ–ಎಂಸಿಎಸ್) ಯನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ. ಪ್ರಸ್ತುತ, ಸಮುದ್ರ ವಲಯದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಮೀನುಗಾರಿಕಾ ದೋಣಿಗಳನ್ನು (ಸಾಂಪ್ರದಾಯಿಕ, ಯಾಂತ್ರಿಕೃತ, ಮೋಟರೀಕೃತ ಮತ್ತು ಯಾಂತ್ರಿಕೃತವಲ್ಲದ) ನೋಂದಾಯಿಸಲು ಸರ್ಕಾರವು ಆನ್‌ಲೈನ್ ಏಕರೂಪದ ನೋಂದಣಿ ಮತ್ತು ಪರವಾನಗಿ ವ್ಯವಸ್ಥೆಯನ್ನು (ರಿಯಲ್‌ಕ್ರಾಫ್ಟ್) ಹೊಂದಿದೆ. ನೋಂದಣಿ ಮತ್ತು ಪರವಾನಗಿ ಮೂಲಕ ಮೀನು ಹಿಡಿಯುವಿಕೆ ಮತ್ತು ಪ್ರಯತ್ನ ಮತ್ತು ಮೀನುಗಾರಿಕೆಯ ನಿಯಂತ್ರಣದ ಮೇಲ್ವಿಚಾರಣೆ ಜಾರಿಯಲ್ಲಿದ್ದು, ಕರಾವಳಿ ರಾಜ್ಯಗಳು / ಯುಟಿಗಳ ಮೀನುಗಾರಿಕೆ ಇಲಾಖೆಗಳು, ಕರಾವಳಿ ಸಾಗರ ಪೊಲೀಸ್ ಮತ್ತು ಭಾರತೀಯ ಕರಾವಳಿ ಕಾವಲುಪಡೆ (ICG) ಗಳನ್ನು ಹೆಚ್ಚಿಗೆ ತೊಡಗಿಸಿಕೊಳ್ಳುವ ಮೂಲಕ ಎಂಸಿಎಸ್ ಚಟುವಟಿಕೆಗಳನ್ನು ಇನ್ನಷ್ಟು ಬಲಪಡಿಸಲಾಗುತ್ತದೆ. ಚಿಪ್ ಆಧಾರಿತ ಸ್ಮಾರ್ಟ್ ನೋಂದಣಿ ಕಾರ್ಡ್‌ಗಳನ್ನು ಅಳವಡಿಸುವುದು, ಲಾಗ್‌ಬುಕ್‌ಗಳ ಕಡ್ಡಾಯ ಬಳಕೆ (ಕಾಗದ ಮತ್ತು ಎಲೆಕ್ಟ್ರಾನಿಕ್ ಎರಡೂ), ಮತ್ತು ಬಾಹ್ಯಾಕಾಶ ತಂತ್ರಜ್ಞಾನಗಳು ಮತ್ತು ಐಟಿ ಪರಿಕರಗಳ ವ್ಯಾಪಕ ಬಳಕೆಯ ಮೂಲಕ ಎಂಸಿಎಸ್‌ನಲ್ಲಿ ಬಲಪಡಿಸುವಿಕೆ ಮತ್ತು ಸುಧಾರಣೆಗಳನ್ನು ಹಂತಹಂತವಾಗಿ ಕೈಗೊಳ್ಳಲಾಗುವುದು. ಹೆಚ್ಚು ಪರಿಣಾಮಕಾರಿಯಾದ ಎಂಸಿಎಸ್ ವ್ಯವಸ್ಥೆಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ರಾಜ್ಯ / ಯುಟಿ ಸರ್ಕಾರಗಳೊಂದಿಗೆ ಕೆಲಸ ಮಾಡುತ್ತದೆ ಮತ್ತು ಎಂಸಿಎಸ್ ವ್ಯವಸ್ಥಾಪಕರ ಕೌಶಲ್ಯ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಮತ್ತು ಎಂಸಿಎಸ್ ಕಾರ್ಯಗಳ ಅನುಷ್ಠಾನದಲ್ಲಿ ಸಮುದಾಯದ ಪಾತ್ರವನ್ನೂ ಸಹ ಒಳಗೊಂಡಿರುತ್ತದೆ.

ಸಮುದ್ರ ಮೀನುಗಾರಿಕಾ ವಲಯವು ವಿವಿಧ ವಿನ್ಯಾಸ, ನಿರ್ಮಾಣ ಸಾಮಗ್ರಿಗಳು, ಗಾತ್ರ, ಎಂಜಿನ್ ಗಳು ಮತ್ತು ಬಲೆಗಳು ಮತ್ತು ಕಾರ್ಯಾಚರಣೆಯ ಪ್ರದೇಶಗಳಲ್ಲಿ ಭಿನ್ನವಾಗಿರುವ ಮೀನುಗಾರಿಕಾ ದೋಣಿಗಳ ವ್ಯಾಪ್ತಿಯಿಂದ ಕೂಡಿರುತ್ತದೆ. ನೋಂದಣಿ, ಸಮೀಕ್ಷೆ ಮತ್ತು ಪ್ರಮಾಣೀಕರಣ, ಗುರುತಿನ ದಾಖಲೆಗಳು ಮತ್ತು ಟ್ರ್ಯಾಕಿಂಗ್ ಉಪಕರಣಗಳ ಕಡ್ಡಾಯ ಅಳವಡಿಕೆ ಮೇಲಿನ ನಿಬಂಧನೆಗಳ ಉಲ್ಲಂಘನೆಗಾಗಿ ದಂಡ, ಸಮುದ್ರ ಸುರಕ್ಷತೆ ಮತ್ತು ಮೀನುಗಾರಿಕಾ ದೋಣಿಗಳ ಪರಿವೀಕ್ಷಣೆ ಮಾನದಂಡಗಳಿಗೆ ಸಂಬಂಧಿಸಿದ ಶಾಸನಗಳನ್ನು ಮೀನುಗಾರಿಕೆ ಕ್ಷೇತ್ರದ ಅಗತ್ಯತೆಗಳಿಗೆ ಅನುಗುಣವಾಗಿ ಸಂಬಂಧಿತ ಏಜೆನ್ಸಿಗಳಾದ ಆಹಾರ ಮತ್ತು ಕೃಷಿ ಸಂಸ್ಥೆ (ಎಫ್‌ಎಒ), ಅಂತರರಾಷ್ಟ್ರೀಯ ಕಡಲ ಸಂಸ್ಥೆ (ಐಎಂಒ), ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಒ) ಮುಂತಾದವುಗಳಿಂದ ಸೂಚಿಸಲ್ಪಟ್ಟ

ಮಾನದಂಡಗಳಿಗೆ ಅನುಗುಣವಾಗಿ ನವೀಕರಿಸುವ ಅಗತ್ಯವಿದೆ. ಅಸ್ತಿತ್ವದಲ್ಲಿರುವ ನಿಯಮಗಳು ಮತ್ತು ನಿಬಂಧನೆಗಳನ್ನು ನವೀಕರಿಸುವಾಗ ದೋಣಿ ನಿರ್ಮಾಣ ಘಟಕಗಳ ಕಡ್ಡಾಯ ನೋಂದಣಿ, ಮೀನುಗಾರಿಕೆ ಬಲೆಗಳ ನೋಂದಣಿ ಮಾಡುವುದು, ಬಲೆ(Ghost) ಮೀನುಗಾರಿಕೆಯಿಂದ ನಷ್ಟವನ್ನು ಕಡಿಮೆ ಮಾಡುವುದು, ಮೀನುಗಾರಿಕಾ ದೋಣಿಗಳ ಸಮುದ್ರ ಸ್ಥಿರತೆ (Sea worthiness) ಮತ್ತು ಹಳೆಯದಾದ ಮತ್ತು ಕಾರ್ಯಸಾಧ್ಯವಲ್ಲದ ಮೀನುಗಾರಿಕಾ ದೋಣಿಗಳನ್ನು ಹಂತಹಂತವಾಗಿ ಹೊರೆತೆಗೆಯಲು ಅಗತ್ಯವಾಗಿದೆ.

ಕಾನೂನುಬಾಹಿರ, ವರದಿ ಮಾಡದ ಮತ್ತು ಅನಿಯಂತ್ರಿತ (ಐಯುಯು) ಮೀನುಗಾರಿಕೆಯನ್ನು ತಡೆಯಲು, ತಡೆಗಟ್ಟಲು ಮತ್ತು ನಿರ್ಮೂಲನೆ ಮಾಡಲು ಭಾರತವು ಹಲವಾರು ಅಂತರರಾಷ್ಟ್ರೀಯ ಒಪ್ಪಂದಗಳು / ವ್ಯವಸ್ಥೆಗಳ ಭಾಗವಾಗಿರುವುದರಿಂದ ದೋಣಿಗಳು ಇಇಜೆಡ್ ನಲ್ಲಿ ಮತ್ತು ಎಬಿಎನ್‌ಜೆ ಯಲ್ಲಿ ಯಾವುದೇ ಐಯುಯು ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳದಂತೆ ನೋಡಿಕೊಳ್ಳಲು ಬಂದರು ಮತ್ತು ಸಮುದ್ರದಲ್ಲಿ ಸರ್ಕಾರವು ಉತ್ತಮ ಕಾರ್ಯವಿಧಾನವನ್ನು ಸ್ಥಾಪಿಸುತ್ತದೆ.

**ತಕ್ಷಣದ ಕ್ರಮಕೈಗೊಳ್ಳಬೇಕಾದ ಪ್ರಮುಖ ಕ್ಷೇತ್ರಗಳು ಕೆಳಕಂಡಂತಿವೆ:**

- *ಕರಾವಳಿ ರಾಜ್ಯಗಳು / ಯುಟಿಗಳು ಮತ್ತು ಇತರ ಸಂಬಂಧಿತ ಸಚಿವಾಲಯಗಳು / ಇಲಾಖೆಗಳ ಸಮನ್ವಯದೊಂದಿಗೆ ಎನ್‌ಪಿಒಎ–ಎಂಸಿಎಸ್ ಅನ್ನು ಅನುಸರಿಸಿ ಪರಿಣಾಮಕಾರಿ ಎಂಸಿಎಸ್ ವ್ಯವಸ್ಥೆಯನ್ನು ಸ್ಥಾಪಿಸುವುದು. ಈ ವ್ಯವಸ್ಥೆಯು ಎಂಸಿಎಸ್ ವ್ಯವಸ್ಥಾಪಕರ ಕೌಶಲ್ಯ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಎಂಸಿಎಸ್ ಕಾರ್ಯಗಳ ಅನುಷ್ಠಾನದಲ್ಲಿ ಸಮುದಾಯದ ಪಾತ್ರವನ್ನೂ ಒಳಗೊಂಡಿರುತ್ತದೆ.*
- *ರಾಷ್ಟ್ರೀಯ ಮತ್ತು ವಿದೇಶಿ ಮೀನುಗಾರಿಕಾ ದೋಣಿಗಳಿಂದ ಐಯುಯು ಮೀನುಗಾರಿಕೆಯನ್ನು ತಡೆಯುವ ಕ್ರಮಗಳನ್ನು ಉತ್ತೇಜಿಸುವುದು.*

## 6.2 ಒಳನಾಡು ಮೀನುಗಾರಿಕೆ

ಒಳನಾಡಿನ ಹಿಡುವಳಿ ಮೀನುಗಾರಿಕೆ (Capture fisheries) ಸಂಪನ್ಮೂಲಗಳು ಸಮುದ್ರ ಮೀನುಗಾರಿಕೆ ಸಂಪನ್ಮೂಲಗಳಷ್ಟೇ ವಿಸ್ತಾರವಾಗಿವೆ ಮತ್ತು ವೈವಿಧ್ಯಮಯವಾಗಿವೆ ಮತ್ತು ಜನಸಾಮಾನ್ಯರ ಜೀವನೋಪಾಯ, ಆಹಾರ ಮತ್ತು ಪೋಷಣೆಯ ಮೂಲವಾಗಿ ಅವುಗಳ ಪ್ರಾಮುಖ್ಯತೆಯು ಸಮುದ್ರ ಮೀನುಗಾರಿಕೆಗಿಂತ ಕಡಿಮೆಯಿಲ್ಲ. ಭಾರತದ ಪ್ರಮುಖ ನದಿ ವ್ಯವಸ್ಥೆಗಳ ಉದ್ದಕ್ಕೂ ವಾಸಿಸುವ ಸಮುದಾಯಗಳು ಸಮುದ್ರ ಮೀನುಗಾರರಂತೆ ಪ್ರಾಚೀನ ಮತ್ತು ಸಾಂಪ್ರದಾಯಿಕವಾಗಿವೆ, ಆದರೂ ಒಳನಾಡಿನ ವಲಯದಲ್ಲಿ ಬದಲಾಗುತ್ತಿರುವ ಸನ್ನಿವೇಶದೊಂದಿಗೆ, ಇತರ ಜೀವನೋಪಾಯಗಳ ಮೂಲಗಳಿಗೆ ಅವರ ವಲಸೆಯು ಇತರ ಆಹಾರ ಉತ್ಪಾದನಾ ಕ್ಷೇತ್ರಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು

ಹೊಂದಿದೆ. ಒಳನಾಡಿನ ಹಿಡುವಳಿ ಮೀನುಗಾರಿಕೆ ಸಂಪನ್ಮೂಲಗಳಲ್ಲಿ 2,01,496 ಕಿ.ಮೀ ಉದ್ದದ ನದಿಗಳು (ಉಪನದಿಗಳು ಮತ್ತು ನೀರಾವರಿ ಕಾಲುವೆಗಳು ಸೇರಿದಂತೆ), 3.52 ಮಿಲಿಯನ್ ಹೆಕ್ಟೇರ್ ಸಣ್ಣ ಮತ್ತು ದೊಡ್ಡ ಜಲಾಶಯಗಳು ಮತ್ತು 1.2 ಮಿಲಿಯನ್ ಹೆಕ್ಟೇರ್ ಪ್ರವಾಹ ಪ್ರದೇಶಗಳು (Flood plains) ಸೇರಿವೆ. ಒಳನಾಡಿನ ಮೀನುಗಾರಿಕೆಗೆ ಲಭ್ಯವಿರುವ ಒಟ್ಟು ಪ್ರದೇಶವು ನದಿಗಳು ಮತ್ತು ಕಾಲುವೆಗಳನ್ನು ಹೊರತುಪಡಿಸಿ 8.24 ಮಿಲಿಯನ್ ಹೆಕ್ಟೇರ್‌ಗಳೆಂದು ಅಂದಾಜು ಮಾಡಲಾಗಿದೆ. ಒಳನಾಡಿನ ಮೀನುಗಾರರ ಒಟ್ಟು ಜನಸಂಖ್ಯೆಯನ್ನು ಅಂದಾಜು 24.29 ಮಿಲಿಯನ್ ಎಂದು ಅಂದಾಜಿಸಲಾಗಿದೆ.

### *6.2.1 ಭಾರತೀಯ ನದಿಗಳು ಮತ್ತು ಅವುಗಳ ಪ್ರವಾಹ ಪ್ರದೇಶಗಳು, ನೈಸರ್ಗಿಕ ಸರೋವರಗಳು ಮತ್ತು ವೆಟ್‌ಲ್ಯಾಂಡ್‌ಗಳಲ್ಲಿ ಮೀನುಗಾರಿಕೆಯನ್ನು ನಿರ್ವಹಿಸುವುದು*

ನದಿಗಳು, ಅವುಗಳ ಉಪನದಿಗಳು ಮತ್ತು ಅದಕ್ಕೆ ಸಂಬಂಧಿಸಿದ ಪ್ರವಾಹ ಪ್ರದೇಶಗಳು, ಮತ್ತು ಸರೋವರಗಳು ದೇಶದ ಒಳನಾಡಿನ ಹಿಡುವಳಿ ಮೀನುಗಾರಿಕೆಯ ಪ್ರಧಾನ ಸಂಪನ್ಮೂಲವಾಗಿದೆ. ಯುಗಗಳಿಂದಲೂ, ಈ ಒಳನಾಡಿನ ಮೀನುಗಾರಿಕೆ ಸಂಪನ್ಮೂಲಗಳು ನದಿ ದಡದ ಸಮುದಾಯಗಳನ್ನು ಉಳಿಸಿಕೊಂಡಿವೆ ಮತ್ತು ಹೆಚ್ಚಿನ ಭಾಗದ ಜನರಿಗೆ ಸಿಹಿನೀರಿನ ಮೀನುಗಳನ್ನು ಒದಗಿಸಿವೆ. ಭಾರತೀಯ ದೊಡ್ಡಗೆಂಡೆ (ಐಎಂಸಿ; ಕಾಟ್ಲಾ, ರೋಹು, ಮೃಗಾಲ್) ಮರಿ ಉತ್ಪಾದನೆಯ ತಂತ್ರಜ್ಞಾನವು ಪರಿಪೂರ್ಣವಾಗದವರೆಗೂ, ಗಂಗಾ ಮತ್ತು ಬ್ರಹ್ಮಪುತ್ರದಂತಹ ಪ್ರಮುಖ ನದಿ ವ್ಯವಸ್ಥೆಗಳು ಮೀನು ಮರಿಗಳ ಮೂಲವಾಗಿದ್ದು, ಅವುಗಳನ್ನು ಕೊಳಗಳಲ್ಲಿ ಮತ್ತು ಟ್ಯಾಂಕ್‌ಗಳಲ್ಲಿ ಬಿತ್ತನೆ ಮಾಡಿ ತಿನ್ನುವ ಗಾತ್ರದ ಮೀನನ್ನು ಬೆಳೆಯಲಾಗುತ್ತಿತ್ತು. ಈ ನದಿ ವ್ಯವಸ್ಥೆಗಳು ಇಂದಿಗೂ ದೇಶದಲ್ಲಿ ಸಿಹಿನೀರಿನ ಜಲಚರ ಸಾಕಣೆ ಉತ್ಪಾದನೆಯ ಬೆನ್ನೆಲುಬಾಗಿವೆ, ಏಕೆಂದರೆ ಅವು ಜರ್ಮ್‌ಪ್ಲಾಸಂನ ಚೈತನ್ಯವನ್ನು ಕಾಪಾಡಿಕೊಳ್ಳಲು ಪ್ರಬುದ್ಧ / ಗರ್ಭಫಲಿತ ಐಎಂಸಿ ಪ್ರಭೇದಗಳನ್ನು ಪಡೆಯುವ ಏಕೈಕ ಮೂಲವಾಗಿದೆ.

ಹೆಚ್ಚುತ್ತಿರುವ ನಗರೀಕರಣ, ಕೈಗಾರಿಕಾ ಅಭಿವೃದ್ಧಿ, ಪ್ರವಾಹ ಸಂರಕ್ಷಣೆ ಮತ್ತು ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಗೆ ನೀರಿನ ಬಳಕೆ, ನದಿ ಮೀನುಗಾರಿಕೆಯ ಮೇಲೆ ಕೆಟ್ಟ ಪರಿಣಾಮ ಬೀರಿದೆ. ನದಿಗಳಲ್ಲಿನ ನೀರಿನ ಹರಿವು ಕಡಿಮೆಯಾಗುವುದು, ನದಿ ಪರಿಸರ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವುದಲ್ಲದೆ, ಅಳಿವೆ (Estuary) ಮತ್ತು ಕರಾವಳಿ ನೀರಿನ ಮೇಲೆ ಸಹ ಪರಿಣಾಮ ಬೀರುತ್ತಿದೆ. ಏಕೆಂದರೆ ಸಿಹಿನೀರು ಮತ್ತು ಸೆಡಿಮೆಂಟ್ಸ್ ನದಿ ನೀರಿನಲ್ಲಿ ಹರಿದು ಬರುವುದು ಅವುಗಳ ಪರಿಸರ ಸಮಗ್ರತೆಯನ್ನು ಉಳಿಸಿಕೊಳ್ಳಲು ಅಗತ್ಯವಾಗಿವೆ. ನದಿ ಪರಿಸರ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಮತ್ತು ಮೀನುಗಾರಿಕೆಯ ಕುಸಿತವನ್ನು ಹಿಮ್ಮೆಟ್ಟಿಸಲು, ಎನ್‌ಎಫ್‌ಪಿಯ ಪ್ರಮುಖ ಗಮನವು ನದಿಗಳು ಮತ್ತು ಅವುಗಳ ಉಪನದಿಗಳಲ್ಲಿ ಮೀನುಗಾರಿಕೆಯನ್ನು ಉಳಿಸಿಕೊಳ್ಳಲು ನೀರಿನ ಹರಿವಿನ ಲಭ್ಯತೆಯು ಅನುಕೂಲಕರವಾಗಿದೆಯೆ ಎಂದು

ಖಚಿತಪಡಿಸಿಕೊಳ್ಳುವುದು ಆಗಿದೆ. ಎರಡನೆಯದಾಗಿ, ನದಿ ಪರಿಸರ ವ್ಯವಸ್ಥೆಯ ಆರೋಗ್ಯವನ್ನು ಸುಧಾರಿಸುವುದು ಮತ್ತು ಪಾಯಿಂಟ್ ಮತ್ತು ಪಾಯಿಂಟ್ ಅಲ್ಲದ ಮೂಲಗಳಿಂದ ನದಿಗಳು ಮತ್ತು ಅವುಗಳ ಉಪನದಿಗಳಿಗೆ ಮಾಲಿನ್ಯದ ಹರಿವನ್ನು ತಡೆಯುವಲ್ಲಿ ನೀತಿ ಕೇಂದ್ರೀಕರಿಸುತ್ತದೆ. ಮೂರನೆಯದಾಗಿ, ಐಎಂಸಿ ಪ್ರಭೇದಗಳು, ಸಣ್ಣಗೆಂಡೆ ಮೀನುಗಳು, ಬೆಕ್ಕು ಮೀನುಗಳು ಮತ್ತು ಹೆಚ್ಚಿನ ಸಂಖ್ಯೆಯ ಚಿಕ್ಕ ಮೀನುಗಳ ಪ್ರಭೇದಗಳು, ಮತ್ತು ಹಲವಾರು ಇತರ ಪ್ರಮುಖ ನದಿ ಮೀನು ಪ್ರಭೇದಗಳು (ಮಹ್ಸೀರ್, ಬೆಕ್ಕುಮೀನು, ಇತ್ಯಾದಿ) ಸಂತಾನೋತ್ಪತ್ತಿ ಮತ್ತು ಲಾರ್ವಾಗಳ ಬೆಳವಣಿಗೆಗೆ ಅಗತ್ಯವಾಗಿರುವ ನದಿ ವಿಸ್ತಾರಗಳು ಮತ್ತು ಸಂಬಂಧಿತ ಪ್ರವಾಹ ಪ್ರದೇಶಗಳು ಈ ಸ್ಥಳೀಯ ಪ್ರಭೇದಗಳ ಸಂತತಿಯು ನಿರಂತರವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಸಂರಕ್ಷಿಸಲಾಗುವುದು. ಭಾರತೀಯ ಗೆಂಡೆ ಮೀನುಗಳ ಸಂತತಿಗೆ ತೊಂದರೆಯಾಗುವಂತ ನದಿ ಪರಿಸರದಲ್ಲಿನ ಸ್ಥಳೀಯ ಅಡೆತಡೆಗಳಿಂದ ದೇಶದ ಒಳನಾಡು ಜಲಕೃಷಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ.

ನದಿಗಳು ಮತ್ತು ಸಮುದ್ರಗಳ ನಡುವಿನ ಪರಿವರ್ತನಾ ವಲಯಗಳಂತೆ ಅಳಿವೆಗಳು ಲಾಭದಾಯಕ ಮೀನುಗಾರಿಕೆಯನ್ನು ಸಹ ನೀಡುತ್ತವೆ. ಸಮುದ್ರಗಳಲ್ಲಿ ಹರಿಯುವ ದೇಶದ ಎಲ್ಲಾ ಪ್ರಮುಖ ನದಿ ವ್ಯವಸ್ಥೆಗಳು ಅಳಿವೆಗಳನ್ನು ಹೊಂದಿವೆ; ಕೆಲವು ಸಂದರ್ಭಗಳಲ್ಲಿ, ಗಂಗಾ ನದಿ ವ್ಯವಸ್ಥೆಯಂತೆ, ಅಳಿವೆಗಳು ಬಹಳ ದೊಡ್ಡ ಪ್ರದೇಶಗಳನ್ನು ಒಳಗೊಳ್ಳುತ್ತವೆ ಮತ್ತು ಹೆಚ್ಚಿನ ಸಂಖ್ಯೆಯ ಫಿನ್ ಮತ್ತು ಚಿಪ್ಪುಮೀನುಗಳ ಮೀನುಗಾರಿಕೆಯನ್ನು ಹೊಂದಿರುತ್ತವೆ. ಶುದ್ಧ ನೀರಿನ ಹರಿವು ಮತ್ತು ಉಬ್ಬರವಿಳಿತದ ಪ್ರಭಾವವು ಮೀನು ಮತ್ತು ಮೀನುಗಾರಿಕೆಯ ಉತ್ಪಾದಕತೆಯನ್ನು ಹೆಚ್ಚಾಗಿ ನಿರ್ಧರಿಸುತ್ತದೆ. ಆದಾಗ್ಯೂ, ಕರಾವಳಿ ವಸಾಹತುಗಳು ಮತ್ತು ಕೈಗಾರಿಕೀಕರಣದ ಹೆಚ್ಚಳದೊಂದಿಗೆ, ಅಳಿವೆಗಳಲ್ಲಿ ಪಾಯಿಂಟ್ ಮತ್ತು ಪಾಯಿಂಟ್ ಅಲ್ಲದ ಮೂಲಗಳಿಂದ ಬರುವ ಮಾಲಿನ್ಯದ ರೆಸೆಪ್ಟಾಕಲ್ ಆಗಿ ಮಾರ್ಪಟ್ಟಿವೆ. ಇದಲ್ಲದೆ, ನದಿ ನೀರಿನ ಬಳಕೆಯು ಹೆಚ್ಚಾಗಿ ಅಳಿವೆಗಳಿಗೆ ಅಗತ್ಯವಾದ ಸಿಹಿನೀರಿನ ಹರಿವು ಕ್ರಮೇಣ ಕಡಿಮೆಯಾಗಿದೆ, ಅಳಿವೆ ಪ್ರದೇಶದ ನಿರ್ಧಿಷ್ಟ ರೂಪರೇಷೆ ಬದಲಾಗಿ ಮೀನು ಮತ್ತು ಚಿಪ್ಪುಮೀನಿನ ಉತ್ಪಾದಕತೆ ಮತ್ತು ಉತ್ಪತ್ತಿ ಪ್ರಮಾಣವನ್ನು ಕಡಿಮೆಯಾಗಿದೆ. ನದಿಗಳು ಮತ್ತು ಅವುಗಳ ಉಪನದಿಗಳ ನಿರಂತರ ಭಾಗವಾಗಿ ಪ್ರವಾಹದ ಸರೋವರಗಳು (Flood plain lakes), ಗಂಗಾ ಮತ್ತು ಬ್ರಹ್ಮಪುತ್ರ ನದಿ ಜಲಾನಯನ ಪ್ರದೇಶಗಳಲ್ಲಿ ಅನಾದಿ ಕಾಲದಿಂದಲೂ ಪ್ರಮುಖ ಮೀನುಗಾರಿಕೆ ಸಂಪನ್ಮೂಲಗಳನ್ನು ರೂಪಿಸಿವೆ. ಅವು ನದಿ ಮೀನುಗಾರಿಕೆಯ ಜೀವಸೆಲೆ. ಅಂದಾಜು 1.2 ದಶಲಕ್ಷ ಹೆಕ್ಟೇರ್ ಪ್ರದೇಶವನ್ನು ಹೊಂದಿರುವ ಪ್ರವಾಹ ಸರೋವರಗಳು ಸಮುದಾಯಗಳ ಮೀನುಗಾರಿಕೆಗೆ ಆಧಾರವಾಗಿರುವುದು ಮಾತ್ರವಲ್ಲದೆ ಮಳೆಗಾಲದಲ್ಲಿ ಹೆಚ್ಚುವರಿ ನದಿ ಹರಿವುಗಳಿಗೆ ಒಂದು ರೆಸೆಪ್ಟಾಕಲ್ ಆಗಿ ಕಾರ್ಯನಿರ್ವಹಿಸಿವೆ. ಭಾರೀ ಹೂಳು ತುಂಬುವಿಕೆ, ಹಲವಾರು ಪ್ರವಾಹ ಪ್ರದೇಶಗಳು ಮತ್ತು ಅವುಗಳಿಗೆ ಸಂಬಂಧಿಸಿದ ನದಿಗಳ ನಡುವಿನ ಸಂಪರ್ಕದ ನಷ್ಟ, ಮತ್ತು ಕಳೆ ಮುತ್ತಿಕೊಳ್ಳುವಿಕೆ

(ಮುಖ್ಯವಾಗಿ ನೀರಿನ ಹಯಸಿಂತ್ – ಐಚೋರ್ನಿಯಾ ಕ್ರಾಸಿಪ್ಸ್), ಈ ಜಲಮೂಲಗಳ ನೀರಿನ ಧಾರಣ ಸಾಮರ್ಥ್ಯ ಮತ್ತು ಉತ್ಪಾದಕತೆ ಗಣನೀಯವಾಗಿ ಕಡಿಮೆಯಾಗಿ, ನದಿ ಮೀನುಗಾರಿಕೆಯಲ್ಲಿನ ಕುಸಿತಕ್ಕೆ ಕಾರಣವಾಗಿದೆ ಮತ್ತು ನದಿ ಜಲಾನಯನ ಪ್ರದೇಶಗಳಲ್ಲಿ ಪುನರಾವರ್ತಿತ ಪ್ರವಾಹ ಸಂಭವಿಸಲು ಕಾರಣವಾಗಿದೆ. ಅತಿಕ್ರಮಣವು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ. ಹಾನಿಕಾರಕ ಮೀನುಗಾರಿಕೆ ಸಾಧನಗಳ ಬಳಕೆ ಮತ್ತು ದಡದ ಸಮುದಾಯಗಳಿಂದ ಸಂಪನ್ಮೂಲಗಳನ್ನು ಅತಿಯಾಗಿ ಬಳಸಿಕೊಳ್ಳುವುದು ಸಹ ಅತಿರೇಕವಾಗಿದೆ ಮತ್ತು ನಿಯಂತ್ರಣದ ಅಗತ್ಯವಿದೆ. ನದಿಗಳು ಮತ್ತು ಪ್ರವಾಹ ಪ್ರದೇಶಗಳ ನಡುವಿನ ಸಂಪರ್ಕವನ್ನು ಪುನಃಸ್ಥಾಪಿಸಲು ಮತ್ತು ಈ ಸಂಪನ್ಮೂಲಗಳನ್ನು ಅವುಗಳ ಅಸಂಖ್ಯಾತ ಪರಿಸರ ವ್ಯವಸ್ಥೆಯ ಸೇವೆಗಳನ್ನು ಲಾಭದಾಯಕವಾಗಿ ಬಳಸಿಕೊಳ್ಳಲು ಪುನಶ್ಚೇತನಗೊಳಿಸಲು ಪ್ರಯತ್ನಿಸಲಾಗುವುದು.

ನೈಸರ್ಗಿಕ ಸರೋವರಗಳು ಮತ್ತು ವೆಟ್‌ಲ್ಯಾಂಡ್‌ಗಳು ದೇಶದ ಮತ್ತೊಂದು ಪ್ರಮುಖ ಮೀನುಗಾರಿಕೆ ಸಂಪನ್ಮೂಲವಾಗಿದೆ. ಪರ್ವತ ಪ್ರದೇಶದ ಸರೋವರಗಳು ಮತ್ತು ವೆಟ್‌ಲ್ಯಾಂಡ್ಸ್ ಪ್ರದೇಶಗಳಿಂದ ಹಿಡಿದು ಗಂಗಾ ಬಯಲು ಪ್ರದೇಶಗಳ ತಾಲ್ ಮತ್ತು ಜೀಲ್ಗಳು, ಒಡಿಶಾದ ಚಿಲಿಕಾ, ತಮಿಳುನಾಡು/ಆಂಧ್ರಪ್ರದೇಶದ ಪುಲಿಕಾಟ್ ಮತ್ತು ಕೇರಳದ ವೆಂಬನಾಡ್ ಮುಂತಾದ ಅಳಿವೆ ತೀರದ ಸರೋವರಗಳು, ಪ್ರಾಣಿ ಮತ್ತು ಸಸ್ಯ ಪ್ರೋಟೀನ್ ಎರಡನ್ನೂ ಸಮುದಾಯಕ್ಕೆ ಹಾಗೂ ಹಲವಾರು ಇತರ ಪರಿಸರ ವ್ಯವಸ್ಥೆಯ ಸೇವೆಗಳನ್ನು ಒದಗಿಸುತ್ತಿವೆ. ಗಂಗಾ ಜಲಾನಯನ ಪ್ರದೇಶದ ತಾಲ್ಸ್ ಮತ್ತು ಜೀಲ್ಗಳು ಪ್ರಮುಖ ಸಸ್ಯ ಪ್ರೋಟೀನ್ಗಳಾದ ಮಖಾನಾ ಅಥವಾ ನರಿ ಕಾಯಿ (ಯುರ್ಯೆಲ್ ಫೆರಾಕ್ಸ್) ಮತ್ತು ಸಿಂಹರಾ ಅಥವಾ ವಾಟರ್ ಕ್ಯಾಲ್ಟ್ರಾಪ್ಸ್ (ಟ್ರಾಪಾ ಬಿಸ್ಪಿನೋಸಾ) ಆಧಾರವಾಗಿದೆ. ಚಿಲಿಕಾದಂತಹ ಅಳಿವೆ ತೀರದ ಸರೋವರಗಳು ಅಪ್ರತಿಮ ಗಂಗೆಟಿಕ್ ಮತ್ತು ಇರ್ರಾವಾಡಿ ಡಾಲ್ಫಿನ್‌ಗಳಿಗೆ ನೆಲೆಯಾಗಿದೆ. ಇದನ್ನು ವನ್ಯಜೀವಿ (ಸಂರಕ್ಷಣೆ) ಕಾಯ್ದೆ, 1972 ರ ಅಡಿಯಲ್ಲಿ ರಕ್ಷಿಸಲಾಗಿದೆ. ಹಿಮಾಲಯ ಎತ್ತರ ಪ್ರದೇಶದಲ್ಲಿರುವ ಸರೋವರಗಳಿಂದ ಮೀನು ಸ್ಥಳೀಯರ ಮತ್ತು ಗಡಿಭದ್ರತೆಯ ಕಾವಲುಗಾರರಿಗೆ ಆಹಾರವಾಗುವುದರಿಂದ ಅವುಗಳ ಅಭಿವೃದ್ಧಿಗೆ ಗಮನ ನೀಡುವುದು ಅಗತ್ಯ.

ಒಳನಾಡಿನ ಹಿಡುವಳಿ ಮೀನುಗಾರಿಕೆ ಭಾರೀ ಬಾಹ್ಯ ಪ್ರಭಾವಗಳಿಗೆ ಒಳಪಟ್ಟಿರುವುದರಿಂದ, ನಿರ್ವಹಣಾ ವಿಧಾನಗಳು, ವಿಶಾಲ ಅರ್ಥದಲ್ಲಿ ಸಮುದ್ರ ಮೀನುಗಾರಿಕೆಗೆ ಹೋಲುತ್ತವೆ ಎಂದು ಪರಿಗಣಿಸಲಾಗುತ್ತದೆ. ಇತರೆ ವಿಷಯಗಳ ಜೊತೆಗೆ ನಿರ್ವಹಣೆಯ ಕೆಳಗಿನವುಗಳನ್ನು ಒಳಗೊಂಡಿರುತ್ತದೆ. ದೋಣಿಗಳ ಗಾತ್ರದ ಮತ್ತು ಮೀನುಗಾರಿಕೆ ದಿನಗಳ ಸಂಖ್ಯೆಯನ್ನು ಆಪ್ಟಿಮೈಸೇಷನ್; ಗುತ್ತಿಗೆ ನೀತಿಗಳ ವಿಮರ್ಶೆ, ಅಗತ್ಯವಿರುವಲ್ಲಿ ಅವುಗಳ ನವೀಕರಣ; ಸಾಂಪ್ರದಾಯಿಕ ಮೀನುಗಾರಿಕೆ ಸಮುದಾಯಗಳ ಹಕ್ಕುಗಳನ್ನು ಗುರುತಿಸುವುದು; ಜಲಕೃಷಿಗೆ ಬಳಸುವ ಪ್ರಮುಖ ಪ್ರಭೇದಗಳ ತಾಯಿ ಮೀನುಗಳ ರಕ್ಷಣೆಗಾಗಿ ಮೀನುಗಾರಿಕೆ ನಿಷೇಧಿತ ಅವಧಿ ಮತ್ತು ನಿಷೇಧಿತ ಪ್ರದೇಶಗಳ (ಮೀನು ಸಂರಕ್ಷಿತ ತಾಣಗಳು) ಅನುಷ್ಠಾನ;

ಮೀನುಗಾರಿಕೆ ಬಲೆಗಳು ಮತ್ತು ವಿಧಾನಗಳ ಮೇಲೆ ನಿಯಂತ್ರಣ; ಅಂತಿಮವಾಗಿ ಅಳಿವೆ ಸೇರುವ ನದಿಗಳು ಮತ್ತು ಅವುಗಳ ಉಪನದಿಗಳಲ್ಲಿನ ಕನಿಷ್ಟ ನೀರಿನ ಹರಿವಿನ ನಿಯಂತ್ರಣ, ಅತಿಕ್ರಮಣಗಳ ತೆರವು ಮತ್ತು ನಿಯಮಗಳು ಸೇರಿದಂತೆ ಆವಾಸಸ್ಥಾನಗಳ ಪುನಃಸ್ಥಾಪನೆ, ನದಿಗಳು ಅಥವಾ ಅವುಗಳ ಉಪನದಿಗಳು ಅಣೆಕಟ್ಟುಗಳು ಅಥವಾ ಬ್ಯಾರೇಜ್‌ಗಳನ್ನು ಹೊಂದಿರುವಲ್ಲಿ ಮೀನು ಪಾಸ್‌ಗಳು ಮತ್ತು ಏಣಿಗಳನ್ನು ಒದಗಿಸುವುದು; ಮತ್ತು ಸರೋವರದ ಬಾಯಿಯನ್ನು ನಿಯಮಿತವಾಗಿ ಹೂಳು ತೆಗೆಯುವ ಮೂಲಕ ಅಳಿವೆ ತೀರದ ಸರೋವರಗಳಲ್ಲಿ ಸಮುದ್ರದ ನೀರಿನ ಹರಿವನ್ನು ಖಾತ್ರಿಪಡಿಸುವುದು. ಅಂತಹ ರಚನೆಗಳು / ಕಾರ್ಯಗಳು ವಲಸೆ ಪ್ರಭೇದಗಳಿಗೆ ಸಂತಾನೋತ್ಪತ್ತಿ ಅಥವಾ ಆಹಾರದ ನೆಲೆಯನ್ನು ತಲುಪಲು ಅನುವು ಮಾಡಿಕೊಡುತ್ತದೆ. ನದಿಗಳು ಮತ್ತು ಇತರ ಒಳನಾಡಿನ ಜಲಾನಯನ ಪ್ರದೇಶಗಳಲ್ಲಿ ಮೀನಿನ ಸಾಂದ್ರತೆಯು ಗಣನೀಯವಾಗಿ ಕುಸಿದಿದ್ದು ಮತ್ತು ಸ್ಟಾಕ್ ಮರುಪೂರಣ / ವರ್ಧನೆಯ ಅಗತ್ಯವಿರುವಲ್ಲಿ ಆಯ್ದ ಸ್ಥಳೀಯ ಮೀನು ಪ್ರಭೇದಗಳ ಮರಿಗಳನ್ನು ಮರುಪೂರಣ (Ranching) ಮಾಡಲಾಗುವುದು. ಕೇಂದ್ರ ಜಲ ಆಯೋಗ ಮತ್ತು ಕೇಂದ್ರ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಈ ಜಲಮೂಲಗಳ ಪ್ರಾಚೀನ ಸ್ಥಿತಿಯನ್ನು ಪುನಃಸ್ಥಾಪಿಸುವ ಗುರಿಯನ್ನು ಹೊಂದಿದ್ದು, ಇದರಿಂದಾಗಿ ಅವರ ಆಹಾರ ಮತ್ತು ಇತರ ಪರಿಸರ ವ್ಯವಸ್ಥೆಯ ಸೇವೆಗಳು ಈ ಪ್ರದೇಶದಲ್ಲಿ ಮತ್ತು ಇತರೆಡೆ ವಾಸಿಸುವ ಜನರಿಗೆ ಲಭ್ಯವಾಗಲು ಅಗತ್ಯ ನೀತಿಗಳನ್ನು ರೂಪಿಸಲಾಗುವುದು. ಪ್ರಮುಖ ನದಿಗಳನ್ನು ಜೋಡಿಸಲು ಸರ್ಕಾರ ಉದ್ದೇಶಿಸಿದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಅಂತಹ ನದಿ ಜೋಡಣೆಯಿಂದ ಮೀನುಗಾರಿಕೆ ಸಂಪನ್ಮೂಲಗಳ ಮೇಲೆ ಅದರಲ್ಲೂ ಮುಖ್ಯವಾಗಿ ಸ್ಥಳೀಯ ಜರ್ಮ ಪ್ಲಾಸಂ ಮೇಲೆ ವ್ಯತಿರಿಕ್ತ ಪರಿಣಾಮವಾಗದಂತೆ ಅಗತ್ಯ ನೀತಿಯನ್ನು ರೂಪಿಸಲಾಗುವುದು.

### *6.2.2 ಭಾರತೀಯ ಜಲಾಶಯಗಳ ಸಾಮರ್ಥ್ಯವನ್ನು ಬಳಸಿಕೊಳ್ಳುವುದು*

ದೇಶದ ಜಲಾಶಯದ ಸಂಪನ್ಮೂಲಗಳು ಬೃಹತ್ತಾಗಿದ್ದು (> 3.0 ಮಿಲಿಯನ್ ಹೆಕ್ಟೇರ್) ಇದರಲ್ಲಿ ದೊಡ್ಡದಾದ (> 5000 ಹೆಕ್ಟೇರ್), ಮಧ್ಯಮ (1000 – 5000 ಹೆಕ್ಟೇರ್) ಮತ್ತು ಸಣ್ಣ (<1000 ಹೆಕ್ಟೇರ್) ಗಾತ್ರದ ಜಲಸಂಪನ್ಮೂಲಗಳನ್ನು ಒಳಗೊಂಡಿರುತ್ತವೆ, ಇವುಗಳನ್ನು ಮೀನುಮರಿ ಬಿತ್ತನೆ ಮತ್ತು ಹಿಡುವಳಿಯ ಹಲವಾರು ಸಂಯೋಜನೆಗಳಿಂದ ನಿರ್ವಹಿಸಬಹುದು ಮತ್ತು ಮೀನು ಉತ್ಪಾದನೆಯ ಅಮೂಲ್ಯ ಮೂಲವಾಗಿದೆ. ಭಾರತವು ಭೂಖಂಡದಂತ ವಿಶಾಲ ದೇಶವಾಗಿರುವುದರಿಂದ, ಅದರ ಜಲಾಶಯಗಳು ವಿವಿಧ ರೀತಿಯ ಭೂಪ್ರದೇಶಗಳಲ್ಲಿ ಹರಡಿಕೊಂಡಿವೆ ಮತ್ತು ಮಣ್ಣಿನ ಪ್ರಕಾರಗಳು ವೈವಿಧ್ಯಮಯ ಹವಾಮಾನ ಪರಿಸ್ಥಿತಿಗಳಿಗೆ ಒಡ್ಡಿಕೊಳ್ಳುತ್ತವೆ ಮತ್ತು ಅವು ವಿವಿಧ ಜಲಾನಯನ ಪ್ರದೇಶಗಳಿಂದ ನೀರನ್ನೂ ಪಡೆಯುತ್ತವೆ. ಆದಾಗ್ಯೂ, ಭಾರತೀಯ ಜಲಾಶಯಗಳಿಂದ ಪ್ರಸ್ತುತ ಇಳುವರಿ ಮಟ್ಟಗಳು ತೀರಾ ಕಡಿಮೆ

ಮತ್ತು ಅವುಗಳ ಗರಿಷ್ಠ ಉತ್ಪಾದನಾ ಸಾಮರ್ಥ್ಯವನ್ನು ತಲುಪಲು ರಾಷ್ಟ್ರೀಯ ಮೀನು ಉತ್ಪಾದನಾ ಗುರಿಗೆ ಕೊಡುಗೆ ನೀಡಲು ಈ ಜಲಮೂಲಗಳನ್ನು ಸೂಕ್ತ ನಿರ್ವಹಣಾ ಯೋಜನೆಗಳಿಗೆ ಒಳಪಡಿಸಬೇಕಾಗಿದೆ. ಜಲಾಶಯಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಅಗತ್ಯವಾದ ಪ್ರಮುಖ ನೀತಿಗಳು (i) ಸಂಪನ್ಮೂಲಗಳನ್ನು ಅವುಗಳ ಉತ್ಪಾದಕತೆ ಮತ್ತು ಮೀನುಗಾರಿಕೆ ನಿರ್ವಹಣಾ ದೃಷ್ಟಿಕೋನದಿಂದ ವರ್ಗೀಕರಿಸುವುದು (ನೈಸರ್ಗಿಕ ಮರಿ ಉತ್ಪಾದನೆ, ಪೂರಕ ದಾಸ್ತಾನು ಮತ್ತು ಮೀನು ಹಿಡುವಳಿ ತಂತ್ರಗಳು, ಇತ್ಯಾದಿ); (ii) ಬಿತ್ತನೆ ಮರಿಗಳ ಮತ್ತು ಮಾರುಕಟ್ಟೆ ಗಾತ್ರದ ಮೀನುಗಳನ್ನು ಬೆಳೆಸಲು ಪೆನ್ನುಗಳು ಮತ್ತು ಪಂಜರಗಳನ್ನು ಸ್ಥಾಪಿಸುವುದು ಸೇರಿದಂತೆ ಜಲಮೂಲಗಳಲ್ಲಿ ಗುತ್ತಿಗೆ / ಮೀನುಗಾರಿಕೆ ಹಕ್ಕುಗಳಿಗಾಗಿ ಉತ್ತಮ ನೀತಿಗಳು; (iii) ಮೀನುಗಾರಿಕೆ ಸಂಪನ್ಮೂಲಗಳನ್ನು ನಿರ್ವಹಿಸಲು ಜಲಾಶಯ ಆಧಾರಿತ ಸಮುದಾಯಗಳಿಗೆ ಅಧಿಕಾರ ನೀಡುವುದು ಮತ್ತು ಭಾಗ ಅಥವಾ ಇಡೀ ಜಲಮೂಲವು ಸಂರಕ್ಷಿತ ಅಥವಾ ಕಾಯ್ದಿರಿಸಿದ ಪ್ರದೇಶದೊಳಗೆ ಬರುವಂತಹ ಜಲಾಶಯಗಳಲ್ಲಿ ಮೀನುಗಾರರ ಸಾಂಪ್ರದಾಯಿಕ ಹಕ್ಕುಗಳನ್ನು ಉಳಿಸಿಕೊಳ್ಳುವುದು; (iv) ಜಲಾಶಯಗಳಿಂದ ಕೃಷಿ ಕ್ಷೇತ್ರಗಳಿಗೆ ನೀರನ್ನು ಸಾಗಿಸುವ ನೀರಾವರಿ ಕಾಲುವೆಗಳ ವ್ಯಾಪಕ ಜಾಲದಲ್ಲಿ ಪಂಜರ / ಪೆನ್ ಮೀನು ಸಾಕಾಣಿಕೆ ಮೂಲಕ ಉತ್ಪಾದನೆಗೆ ಬಳಕೆ; (v) ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಗಳನ್ನು ಬಳಸಿಕೊಂಡು ಅಸುರಕ್ಷಿತ ಮೀನುಗಾರಿಕೆ ದೋಣಿಗಳ ಮತ್ತು ಹಾನಿಕಾರಕ ಬಲೆಗಳ ಬಳಕೆಯನ್ನು ನಿರುತ್ಸಾಹಗೊಳಿಸುವುದು; ಮತ್ತು (vi) ಅಗತ್ಯವಿರುವ ಜಲಾಶಯಗಳ ಪೂರಕ ಮೀನುಮರಿ ದಾಸ್ತಾನುಗಳನ್ನು ಬೆಂಬಲಿಸಲು ಫಾರ್ವರ್ಡ್ (Forward) ಮತ್ತು ಬ್ಯಾಕ್‌ವರ್ಡ್ (Backward) ಸಂಪರ್ಕಗಳನ್ನು ಸ್ಥಾಪಿಸುವುದು ಮತ್ತು ಯೋಗ್ಯ ನಿರ್ವಹಣೆ ಮತ್ತು ಮಾರುಕಟ್ಟೆಗಳಿಗೆ ಹಿಡಿದ ಮೀನಿನ ತ್ವರಿತ ಸಾಗಾಣಿಕೆಯನ್ನು ಖಚಿತಪಡಿಸಿಕೊಳ್ಳಲು ಹಿಡುವಳಿ ನಂತರದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

**ತಕ್ಷಣದ ಕ್ರಮಕೈಗೊಳ್ಳಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ನದಿಗಳು ಮತ್ತು ಅವುಗಳ ಉಪನದಿಗಳಲ್ಲಿ ಮೀನುಗಾರಿಕೆಯನ್ನು ಉಳಿಸಿಕೊಳ್ಳಲು ಅನುಕೂಲಕರವಾದ ನೀರಿನ ಹರಿವಿನ ಲಭ್ಯತೆಯನ್ನು ಖಚಿತಪಡಿಸುವುದು.*
- *ಸಂಬಂಧಿತ ಏಜೆನ್ಸಿಗಳ ಸಮನ್ವಯದೊಂದಿಗೆ ನದಿಗಳು ಮತ್ತು ಅವುಗಳ ಉಪನದಿಗಳಲ್ಲಿ ಪಾಯಿಂಟ್ ಮತ್ತು ಪಾಯಿಂಟ್ ಅಲ್ಲದ ಮೂಲಗಳಿಂದ ಮಾಲಿನ್ಯದ ಹರಿವನ್ನು ತಡೆಯುವ ಮೂಲಕ ನದಿ ಪರಿಸರ ವ್ಯವಸ್ಥೆಯ ಪರಿಸರ ಆರೋಗ್ಯವನ್ನು ಸುಧಾರಿಸುವುದು.*
- *ಸಂರಕ್ಷಿತ ಪ್ರದೇಶ, ಸಮಯ ಮತ್ತು ಪ್ರದೇಶ ಮುಚ್ಚುವಿಕೆ ಮತ್ತು ಮೀನು ಹಿಡುವಳಿಯ ನಿರ್ವಹಣೆಯ ಮೂಲಕ ಸ್ಥಳೀಯ ಪ್ರಭೇದಗಳ ಸಂತತಿಯನ್ನು ಉಳಿಸಿಕೊಳ್ಳಲು ನದಿ ಮತ್ತು ಅದಕ್ಕೆ ಸಂಬಂಧಿಸಿದ ಪ್ರವಾಹ ಪ್ರದೇಶಗಳನ್ನು ರಕ್ಷಿಸುವುದು.*

- *ಸಂಪನ್ಮೂಲಗಳನ್ನು ಪುನಶ್ಚೇತನಗೊಳಿಸಲು ಮತ್ತು ಅವುಗಳ ಅಸಂಖ್ಯಾತ ಪರಿಸರ ವ್ಯವಸ್ಥೆಯ ಸೇವೆಗಳನ್ನು ಲಾಭದಾಯಕವಾಗಿ ಬಳಸಿಕೊಳ್ಳಲು ನದಿಗಳು ಮತ್ತು ಪ್ರವಾಹ ಪ್ರದೇಶಗಳ ನಡುವಿನ ಸಂಪರ್ಕವನ್ನು ಮರುಸ್ಥಾಪಿಸುವುದು.*
- *ಸಂಪನ್ಮೂಲಗಳನ್ನು ಅವುಗಳ ಉತ್ಪಾದಕತೆಗೆ ಅನುಗುಣವಾಗಿ ಬಳಸಲು ಮತ್ತು ಸಂಪನ್ಮೂಲಗಳನ್ನು ನಿರ್ವಹಿಸಲು ಸ್ಥಳೀಯ ಸಮುದಾಯಗಳಿಗೆ ಅಧಿಕಾರ ನೀಡುವುದನ್ನು ಖಚಿತಪಡಿಲು ಗುತ್ತಿಗೆ ನೀತಿಗಳನ್ನು ಜಾರಿಗೊಳಿಸುವುದು.*
- *ಮೀನುಮರಿ ಉತ್ಪಾದನೆ ಮತ್ತು ದಾಸ್ತಾನು ಮಾಡಲು ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.*

## 6.3 ಜಲಕೃಷಿ (Aquaculture)

### *6.3.1 ಸಿಹಿನೀರಿನ ಜಲಕೃಷಿ*

ಇಂದು, ಭಾರತವು ವಿಶ್ವದ ಎರಡನೇ ಅತಿದೊಡ್ಡ ಕೃಷಿ ಮೀನು ಉತ್ಪಾದಕ ರಾಷ್ಟ್ರವಾಗಿದೆ. ಕೊಳಗಳು ಮತ್ತು ಟ್ಯಾಂಕ್‌ಗಳ ರೂಪದಲ್ಲಿ 2.48 ಮಿಲಿಯನ್ ಹೆಕ್ಟೇರ್ ವಿಸ್ತಾರದ ಪ್ರದೇಶವಿದೆ.

2018–19ರ ಅವಧಿಯಲ್ಲಿ ಕೃಷಿ ಮಾಡಿದ ಮೀನಿನ ಪ್ರಮಾಣ 7.7 ಎಂಎಂಟಿ ಎಂದು ಅಂದಾಜಿಸಲಾಗಿದ್ದು, ಇದು ಭಾರತದಲ್ಲಿ ಉತ್ಪಾದನೆಯಾಗುವ ಒಳನಾಡಿನ ಮೀನುಗಳಲ್ಲಿ ಸುಮಾರು ಶೇ. 80 ಮತ್ತು ದೇಶದ ಒಟ್ಟು ಮೀನು ಉತ್ಪಾದನೆಯಲ್ಲಿ ಶೇಕಡಾ 56 ರಷ್ಟು ಕೊಡುಗೆ ನೀಡುತ್ತದೆ. ಐಎಂಸಿ ಪ್ರಭೇದಗಳು ಸಿಹಿನೀರಿನ ಜಲಕೃಷಿಗೆ ಪ್ರಮುಖವಾಗಿ ಬಳಕೆಯಾದರೂ ಮತ್ತು ಭಾರತದಲ್ಲಿ ಜಲಚರ ಸಾಕಣೆಯಿಂದ ಗರಿಷ್ಠ ಉತ್ಪಾದನೆಗೆ ಸಹಕಾರಿಯಾಗಿದ್ದರೂ, ಇತರ ಪ್ರಭೇದಗಳಾದ ಪಂಗಾಸಿಯಸ್ ಮತ್ತು ಟಿಲಾಪಿಯಾ ಕೂಡ ಮೀನು ಕೃಷಿಯಲ್ಲಿ ಸ್ಥಾನ ಪಡೆಯುತ್ತಿವೆ ಮತ್ತು ದೇಶದ ಅನೇಕ ಭಾಗಗಳಲ್ಲಿ ಜನಪ್ರಿಯವಾಗಿ ಸೇವಿಸಲ್ಪಡುತ್ತವೆ.

ಸಂಯೋಜಿತ ಮೀನು ಸಾಕಾಣಿಕೆ (Composite fish culture) ತಂತ್ರಜ್ಞಾನವನ್ನು ದೇಶದ ಮೀನು ಕೃಷಿಕರಿಗೆ ವರ್ಗಾವಣೆ ಮಾಡುವಲ್ಲಿ ಮೊದಲ ಯಶಸ್ವಿ ಪ್ರಯತ್ನವು ಎಪ್ಪತ್ತರ ದಶಕದ ಮಧ್ಯದಿಂದ ಕೊನೆಯವರೆಗೆ ನಡೆದು 'ಅಕ್ವಾಪ್ಲೋಷನ್'ಗೆ ಕಾರಣವಾದರೂ, ತರುವಾಯ, ತಂತ್ರಜ್ಞಾನ ವಿಸ್ತರಣೆ ಅತ್ಯಲ್ಪವಾಗಿದೆ. ಸಿಹಿನೀರಿನ ಮೀನು ಸಾಕಾಣಿಕೆಯ ಒಳಪಟ್ಟ ಪ್ರದೇಶದ ವಿಸ್ತಾರದ ಹೆಚ್ಚಳ ಕಂಡುಬಂದರೂ, ಉತ್ಪಾದಕತೆ ಹೆಚ್ಚಳ ಸೀಮಿತವಾಗಿದೆ. ಇದರ ಪರಿಣಾಮವಾಗಿ ಪ್ರತಿ ಹೆಕ್ಟೇರ್‌ನ ಉತ್ಪಾದಕತೆಯು ಸರಾಸರಿ ಹೆಕ್ಟೇರಿಗೆ 3000 ಕೆ.ಜಿ.ಗೆ ಸೀಮಿತವಾಗಿದೆ. ಗುಣಮಟ್ಟದ ಮೀನುಮರಿ ಲಭ್ಯತೆ ಕೆಲವು ಪ್ರದೇಶಗಳಿಗೆ ಸೀಮಿತವಾಗಿದೆ ಮತ್ತು ಪೂರಕ ಮೀನು ಆಹಾರ ಬಳಕೆಯೂ ಕನಿಷ್ಠವಾಗಿರುತ್ತದೆ. ಮೀನು ಕೃಷಿ ಪದ್ಧತಿಗಳು

ಪ್ರದೇಶದಿಂದ ಪ್ರದೇಶಕ್ಕೆ ಮತ್ತು ಹೆಚ್ಚಾಗಿ ಕೃಷಿಕರ ಸ್ವಂತ ಉಪಕ್ರಮಗಳು ಮತ್ತು ಆವಿಷ್ಕಾರಗಳಿಂದಾಗಿ ತೀವ್ರವಾಗಿ ಬದಲಾಗಿವೆ. ಅಂತಹ ಬದಲಾವಣೆಗಳು ಕೃಷಿಕರಿಗೆ ಅನುಕೂಲವಾಗಿದ್ದರೂ ಕಾಲಾನಂತರದಲ್ಲಿ ಯೋಜನೆ ರೂಪಿಸಲು ಮತ್ತು ಆಹಾರದ ಬಳಕೆ ಗುಣಮಟ್ಟದ ನಿಯಂತ್ರಣ, ರೋಗಗಳ ಪ್ರಸರಣದ ತಡೆಗೆ ಅಡ್ಡಿಯಾಗಿವೆ. ಜಾಗತಿಕವಾಗಿ ಮುನ್ನಡೆಯಲ್ಲಿದ್ದರೂ ಪ್ರಭೇದಗಳ ಮತ್ತು ವ್ಯವಸ್ಥೆಗಳ ವೈವಿಧ್ಯೀಕರಣದ ದೃಷ್ಟಿಯಿಂದ ಭಾರತದಲ್ಲಿನ ಸಿಹಿನೀರಿನ ಜಲಚರ ಸಾಕಣೆ ಕ್ಷೇತ್ರವು ಹೆಚ್ಚು ಸಂಪ್ರದಾಯವಾದಿಯಾಗಿದೆ. ಪಂಗಾಸಿಯಸ್ ಮತ್ತು ಇತ್ತೀಚಿನ ಅವಧಿಯಲ್ಲಿ ಕೃಷಿಕರು ಮತ್ತು ಉದ್ಯಮಿಗಳ ಟಿಲಾಪಿಯಾವನ್ನು ಬೆಳೆಯುವುದನ್ನು ಹೊರತುಪಡಿಸಿ, ಈ ಕ್ಷೇತ್ರವು ದೊಡ್ಡಗೆಂಡೆ (ಐಎಂಸಿಗಳು) ಮತ್ತು ವಿದೇಶಿ ಕಾರ್ಪ್‌ಗಳಿಗೆ ಬದ್ಧವಾಗಿದೆ. ಅಂತೆಯೇ, ಸಮಗ್ರ ಮೀನು ಸಾಕಾಣಿಕೆ ಪದ್ಧತಿಯು ಪಶ್ಚಿಮ ಬಂಗಾಳ ಮತ್ತು ಕೆಲವು ಈಶಾನ್ಯ ರಾಜ್ಯಗಳ ಸಾಂಪ್ರದಾಯಿಕ ಪ್ರದೇಶಗಳಿಂದ ಸಂಭಾವ್ಯತೆ ಇರುವ ಇತರ ಪ್ರದೇಶಗಳಿಗೆ ಪ್ರಸಾರಗೊಂಡಿಲ್ಲ. ಕಾರ್ಪ್ ಜಾತಿಯ (IMC) ಮೀನು ಕೃಷಿಯ ವಿಸ್ತೀರ್ಣ ಮತ್ತು ಉತ್ಪಾದಕತೆ ಏರಿಕೆ ಅಗತ್ಯವಾಗಿರುತ್ತದೆ, ಇದರಿಂದಾಗಿ ಪ್ರತಿ ಹೆಕ್ಟೇರ್ ಉತ್ಪಾದನೆ ಮತ್ತು ಜಲಸಂಪನ್ಮೂಲಗಳ ಉತ್ಪಾದಕತೆ ಹೆಚ್ಚಾಗುತ್ತದೆ. ಆದ್ದರಿಂದ, ಜಲಕೃಷಿ ಉಪ–ವಲಯದ ಕೊಡುಗೆಗಳನ್ನು ಹೆಚ್ಚಿಸಲು, ನೀತಿ ಉಪಕ್ರಮಗಳು ಕೆಳಕಂಡ ಕ್ರಮವಹಿಸುವುದು ಅಗತ್ಯವಾಗಿದೆ. ಅಗತ್ಯ ಪ್ರಭೇದಗಳ ಆರೋಗ್ಯಕರ ಮೀನುಮರಿಗಳ ಲಭ್ಯತೆಯನ್ನು ಖಾತರಿಪಡಿಸುವ ಮೂಲಕ ಮೀನಿನ ಜಾತಿಗಳ ವೈವಿಧ್ಯೀಕರಣ ಮತ್ತು ವಿಸ್ತರಣೆಯ ಮೇಲೆ ಹೆಚ್ಚಾಗಿ ಕೇಂದ್ರೀಕರಿಸುವುದು; ಜಲಕೃಷಿ ಕ್ಷೇತ್ರದಲ್ಲಿ ಪರೀಕ್ಷಿತ ತಂತ್ರಜ್ಞಾನಗಳನ್ನು ಪರಿಚಯಿಸುವುದು (ಉದಾ. ಬಯೋಫ್ಲೋಕ್, ರೀ ಸರ್ಕುಲೇಟರಿ ಅಕ್ವಾಕಲ್ಚರ್ ಸಿಸ್ಟಮ್, ಇಂಟಿಗ್ರೇಟೆಡ್ ಮಲ್ಟಿ–ಟ್ರೋಫಿಕ್ ಅಕ್ವಾಕಲ್ಚರ್ ಅಥವಾ ಐಎಂಟಿಎ, ಇತ್ಯಾದಿ); ಜಾನುವಾರು, ಕೋಳಿ, ಡೈರಿ, ತೋಟಗಾರಿಕೆ, ಬೆಳೆ ಇತ್ಯಾದಿ ಕೃಷಿ ಚಟುವಟಿಕೆಗಳೊಂದಿಗೆ ಮೀನು ಸಾಕಾಣಿಕೆಯ ಏಕೀಕರಣ; ಉತ್ತಮ ಗುಣಮಟ್ಟದ ಮೀನುಮರಿ, ಆಹಾರ, ಮೀನಿನ ಆರೋಗ್ಯ ಮತ್ತು ನೀರಿನ ಗುಣಮಟ್ಟ ನಿರ್ವಹಣೆಗೆ ವಿಸ್ತರಣೆ ಮತ್ತು ತಾಂತ್ರಿಕ ಸೇವೆಗಳ ಲಭ್ಯತೆ; ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳ (ಎಫ್‌ಎಫ್‌ಪಿಒ) ಸ್ಥಾಪನೆ; ಇತ್ಯಾದಿ. ಜಲಕೃಷಿಕರು ಇತರ ಬಳಕೆದಾರರಿಂದ ಸಿಹಿನೀರಿಗೆ ಸ್ಪರ್ಧಾತ್ಮಕ ಬೇಡಿಕೆಯನ್ನು ಸಹ ಎದುರಿಸಬೇಕಾಗುತ್ತದೆ ಮತ್ತು ಮೀನು ಕೃಷಿಕರಿಗೆ ನೀರಿನ ಸಂಪನ್ಮೂಲಗಳನ್ನು ಪಡೆಯಲು ನೀತಿಯ ಸಹಾಯಕತೆ ಅಗತ್ಯವಾಗಿರುತ್ತದೆ. ಇಂತಹ ಸುಧಾರಣೆಗಳು ಜಾರಿ ಮಾಡಿದಾಗ ಸುಸ್ಥಿರತೆಯನ್ನು ದುರ್ಬಲಗೊಳಿಸದೆ, ಸಿಹಿನೀರಿನ ಕೃಷಿಯಿಂದ ಉತ್ಪಾದನಾ ಹೆಚ್ಚಳವನ್ನು 4–5 ವರ್ಷಗಳ ಕಡಿಮೆ ಅವಧಿಯಲ್ಲಿ ನಿರೀಕ್ಷಿಸಬಹುದು.

ಸಿಹಿನೀರಿನ ಜಲಕೃಷಿಗಳಂತಲ್ಲದೆ, ದೇಶದ ಶೀತ ಪ್ರದೇಶಗಳಲ್ಲಿ ಮೀನು ಸಾಕಾಣಿಕೆ ಕಡಿಮೆ ಗಮನ ಸೆಳೆದಿದೆ. ಬೃಹತ್ ಹಿಮಾಲಯ ಪ್ರದೇಶ ಮತ್ತು ಇತರ ಪರ್ವತ ಶ್ರೇಣಿಗಳು ಮೀನುಗಳನ್ನು ಸಾಕಲು ಹೆಚ್ಚಿನ ಅವಕಾಶ ನೀಡುತ್ತಿದ್ದರೂ, ಹಿಮಾಚಲ ಪ್ರದೇಶ ಮತ್ತು ಜಮ್ಮು ಮತ್ತು ಕಾಶ್ಮೀರದ ಕೆಲವು ಪ್ರದೇಶಗಳಲ್ಲಿ ಟ್ರೌಟ್

ಮೀನು ಕೃಷಿಗೆ ಅಭಿವೃದ್ಧಿಯನ್ನು ಸೀಮಿತಗೊಳಿಸಲಾಗಿದೆ. ಗುಡ್ಡಗಾಡು ಪ್ರದೇಶಗಳಲ್ಲಿ ರಸ್ತೆ, ಮೂಲಭೂತ ಸೌಕರ್ಯ, ಸಾರಿಗೆ, ವಿದ್ಯುತ್ ಸರಬರಾಜು ಮತ್ತು ಸಂವಹನದ ಸುಧಾರಣೆಗಳೊಂದಿಗೆ, ದೇಶದ ಮಧ್ಯಮ ಮತ್ತು ಎತ್ತರದ ಪ್ರದೇಶಗಳಲ್ಲಿ ಟ್ರೌಟ್ ಮೀನು ಕೃಷಿಗೆ ಉತ್ತೇಜನ ನೀಡುವ ಸಮಯ ಬಂದಿದೆ. ಇದರಿಂದ ಲಭ್ಯವಿರುವ ಸಂಪನ್ಮೂಲಗಳನ್ನು ಆಹಾರ ಸರಬರಾಜುಗಾಗಿ ಮಾತ್ರವಲ್ಲದೆ ದೇಶದ ಪರ್ವತ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಬಳಸಬಹುದಾಗಿದೆ. ಈ ನಿಟ್ಟಿನಲ್ಲಿನ ನೀತಿ ಮಾರ್ಗಗಳಲ್ಲಿ ಮೀನು ಕೃಷಿಗೆ ಅನುಕೂಲಕರವಾದ ತಣ್ಣೀರು (Cold water) ಸಂಪನ್ಮೂಲಗಳ ಸಂಪೂರ್ಣ ಮೌಲ್ಯಮಾಪನ ಮತ್ತು ದೇಶದಲ್ಲಿ ತಣ್ಣೀರು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿಗೆ ಮಾಸ್ಟರ್ ಪ್ಲ್ಯಾನ್ ತಯಾರಿಸುವುದು; ರೈನ್ ಬೋ ಮತ್ತು ಕಂದು ಬಣ್ಣದ ಟ್ರೌಟ್‌ನ ಜರ್ಮ್‌ಪ್ಲಾಸಂ ಅನ್ನು ಮರುಪೂರಣಗೊಳಿಸುವುದು ಮತ್ತು ಉತ್ತರಾಖಂಡ್, ಮೇಘಾಲಯ ಮತ್ತು ಅರುಣಾಚಲ ಪ್ರದೇಶದಂತಹ ಕಡಿಮೆ ಎತ್ತರದಲ್ಲಿ ಕೃಷಿ ಮಾಡಲು ಸಾಮಾನ್ಯಗೆಂಡೆ ಮತ್ತು ಹೆಚ್ಚಿನ ಎತ್ತರದ ಸರೋವರಗಳನ್ನು ಸಂಗ್ರಹಿಸಲು ಆರ್ಕ್ಟಿಕ್ ಚಾರ್ ಸೇರಿದಂತೆ ಇತರ ಸಂಭಾವ್ಯ ವಿದೇಶಿ ಜಾತಿಗಳ ಮೀನುಗಳನ್ನು ಪರಿಚಯಿಸುವುದು; ಗುಣಮಟ್ಟದ ಮರಿ ಮತ್ತು ಆಹಾರ ಸುಲಭವಾಗಿ ಲಭ್ಯವಾಗಲು ಟ್ರೌಟ್ ಮೊಟ್ಟೆಕೇಂದ್ರಗಳು ಮತ್ತು ಆಹಾರ ಗಿರಣಿಗಳನ್ನು ಸ್ಥಾಪಿಸುವುದು ಮೊದಲಾದವು ಸೇರಿವೆ. ಇದಲ್ಲದೆ ನದಿ ಮತ್ತು ತೊರೆಗಳಲ್ಲಿ ಬಿತ್ತನೆ ಮಾಡುವುದು ಮೀನು ಕೃಷಿ ವ್ಯವಸ್ಥೆಯ ಅಭಿವೃದ್ಧಿಯೊಂದಿಗೆ ರೈನ್ ಬೋ ಮತ್ತು ಬ್ರೂಕ್ ಟ್ರೌಟ್‌ಗಳನ್ನು ಮಾಧ್ಯಮ ಮತ್ತು ಹೆಚ್ಚಿನ ಎತ್ತರದ ಪ್ರದೇಶಗಳಲ್ಲಿ ಹೋಂಸ್ಟೇಗಳೊಂದಿಗೆ ಆಂಗ್ಲಿಂಗ್ ಮತ್ತು ಆಂಗ್ಲಿಂಗ್ ಆಧಾರಿತ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ. ಜೊತೆಗೆ ಸ್ಥಳೀಯರಿಗೆ ಜೀವನಾವಕಾಶವನ್ನು ದೊರಕಿಸಿಕೊಟ್ಟು ತೊರೆಗಳ ಸಂರಕ್ಷಣೆಗೆ ಸಹಾಯಕವಾಗುತ್ತದೆ.

ದೇಶದಲ್ಲಿ ಆಧುನಿಕ ಮೀನು ಸಾಕಾಣಿಕೆ ಪದ್ಧತಿಗಳನ್ನು ಅಭಿವೃದ್ಧಿಪಡಿಸಿರುವ ಕಳೆದ ಆರು ದಶಕಗಳಲ್ಲಿ, ಅಗತ್ಯವಿರುವ ಪ್ರಮಾಣದಲ್ಲಿ ಗುಣಮಟ್ಟದ ಮೀನುಮರಿ ಉತ್ಪಾದನೆ ಮತ್ತು ರಾಷ್ಟ್ರವ್ಯಾಪಿ ಲಭ್ಯತೆ ಮತ್ತು ಸರಬರಾಜು ಒಂದು ಸವಾಲಾಗಿ ಉಳಿದಿದೆ. ಮೀನುಮರಿ ಉತ್ಪಾದನೆ ಮತ್ತು ವಿತರಣೆಯು ದೇಶದಲ್ಲಿ ಸೀಮಿತ ಪ್ರದೇಶದಲ್ಲಿ ಲಭ್ಯವಾಗಿದೆ. ಕೊಳ ಮತ್ತು ಆವರಣ ಆಧಾರಿತ ಜಲಕೃಷಿಯ ವಿಸ್ತರಣೆ ಮತ್ತು ತೀವ್ರ ಹಾಗೂ ಕೃಷಿ ಆಧಾರಿತ ಮತ್ತು ವರ್ಧಿತ ಒಳನಾಡಿನ ಮೀನುಗಾರಿಕೆಗೆ ಇದು ಪ್ರಮುಖ ಕುಂದಾಗಿದೆ. ಐಎಂಸಿಗಳಲ್ಲದೆ, ಪಬ್ಡಾ, ಸಿಂಘಿ, ಸ್ಥಳೀಯ ಮ್ಯಾಗುರ್, ಕ್ಲೈಂಬಿಂಗ್ ಪರ್ಚ್, ಸ್ಕ್ಯಾಂಪಿ, ಏಡಿ, ಸೀ ಬಾಸ್, ಮಲ್ಲೆಟ್ಸ್ ಇತರ ಉನ್ನತ ಮೌಲ್ಯದ ಪ್ರಭೇದಗಳ ವಾಣಿಜ್ಯ-ಪ್ರಮಾಣದ ಮರಿ ಉತ್ಪಾದನೆ ಇನ್ನೂ ನಡೆಯಬೇಕಾಗಿಲ್ಲದೆ, ಜಲಕೃಷಿ ವ್ಯವಸ್ಥೆಗಳು ಹೆಚ್ಚಾಗಿ ಕಾರ್ಪ್ ಪಂಗಾಸಿಯಸ್ ಆಧಾರಿತವಾಗಿದೆ.

ದೇಶದ ಮುಂದಿನ 'ಅಕ್ವಾಪ್ಲೋಶನ್'ಗೆ ಮೀನಿನ ಜಾತಿಗಳ ವೈವಿಧ್ಯೀಕರಣ ಪ್ರಮುಖವಾಗಲಿದೆ. ಇದು ವಾಣಿಜ್ಯಿಕವಾಗಿ ಜಲಕೃಷಿ ಮಾಡಬಹುದಾದ ಫಿನ್ ಮತ್ತು ಚಿಪ್ಪುಮೀನು ಪ್ರಭೇದಗಳ ಸಂಖ್ಯೆಯನ್ನು

ಹೆಚ್ಚಿಸುವುದಲ್ಲದೆ ಸೀಮಿತ ಪ್ರಭೇದಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಮತ್ತು ಜಲಕೃಷಿಯ ಆರ್ಥಿಕ ಕಾರ್ಯಸಾಧ್ಯತೆಯನ್ನು ಹೆಚ್ಚಿಸುತ್ತದೆ. ಕೃಷಿ ಕ್ಷೇತ್ರದ ಆನುವಂಶಿಕ ಸುಧಾರಣೆಗಳು ರೈತರಿಗೆ ಹೆಚ್ಚಿನ ಇಳುವರಿ ನೀಡುವ ಪ್ರಭೇದಗಳನ್ನು ಕೃಷಿ ಮಾಡಲು ಮತ್ತು ಪ್ರತಿ ಹೆಕ್ಟೇರ್‌ಗೆ ಇಳುವರಿಯನ್ನು ಹೆಚ್ಚಿಸಲು ಅವಕಾಶ ಮಾಡಿಕೊಟ್ಟಿದೆ ಮತ್ತು ಇದರಿಂದಾಗಿ ಆದಾಯವು ಹೆಚ್ಚಿದೆ. ಭಾರತೀಯ ಜಲಕೃಷಿಯಲ್ಲಿ ಇದೇ ರೀತಿಯ ಪರಿಸ್ಥಿತಿ ಇನ್ನೂ ಸಂಭವಿಸಬೇಕಾಗಿದೆ ಮತ್ತು ಆನುವಂಶಿಕ ಸುಧಾರಣೆಯು ಒಂದೆರಡು ಪ್ರಭೇದಗಳಿಗೆ ಸೀಮಿತವಾಗಿದೆ. ನೀತಿ ಉಪಕ್ರಮಗಳು ಜಲಚರ ಸಾಕಣೆಗೆ ಅನುಕೂಲಕರವಾದ ವಾಣಿಜ್ಯಿಕವಾಗಿ ಪ್ರಮುಖ ಪ್ರಭೇದಗಳ ಆನುವಂಶಿಕ ಸುಧಾರಣೆಗೆ ಒತ್ತು ನೀಡುತ್ತವೆ ಮತ್ತು ಅಲ್ಲಿ ವೈಜ್ಞಾನಿಕ ಪ್ರೋಟೋಕಾಲ್ಗಳು ಮತ್ತು ಪ್ರಕ್ರಿಯೆಗಳೊಂದಿಗೆ ಖಾಸಗಿ ವಲಯದೊಂದಿಗೆ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಒತ್ತು ನೀಡುತ್ತದೆ.

ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) ಸಂಬಂಧಪಟ್ಟ ಸಂಶೋಧನಾ ಸಂಸ್ಥೆ (ಗಳು) ಗಳಲ್ಲಿ ಅನೇಕ ಜಾತಿಯ ಮೀನಿನ ತಂತ್ರಜ್ಞಾನ ಲಭ್ಯವಿದ್ದರೂ, ಅದರ ವಾಣಿಜ್ಯೀಕರಣವು ಸೀಮಿತವಾಗಿದೆ. ಅಂತಹ ಒಂದು ಸನ್ನಿವೇಶದಲ್ಲಿ ಸಂಶೋಧನಾ ಸಂಸ್ಥೆಗಳು ಖಾಸಗಿ ವಲಯದೊಂದಿಗೆ ಕೈಜೋಡಿಸಿ ವಾಣಿಜ್ಯೀಕರಣದ ಪ್ರಕ್ರಿಯೆಯನ್ನು ಹೆಚ್ಚಿಸುವುದು ಬಹಳ ಮುಖ್ಯ, ಇದರಿಂದ ಮೀನುಮರಿ ಲಭ್ಯತೆ ಸುಧಾರಿಸುತ್ತದೆ. ಈ ನಿಟ್ಟಿನಲ್ಲಿ ದೇಶದ ಮೀನುಮರಿ ಕೊರತೆಯ ಪ್ರದೇಶಗಳಿಗೆ ಆದ್ಯತೆ ಸಿಗಲಿದೆ. ಹಾಗೆ ಮಾಡುವಾಗ, ಗುಣಮಟ್ಟದ ಮೀನುಮರಿ ಕೃಷಿಕರಿಗೆ ಸಮಂಜಸವಾದ ದರದಲ್ಲಿ ಲಭ್ಯವಿದೆ ಎಂದು ಪರಿಗಣಿಸುವುದು ಸಹ ಮುಖ್ಯವಾಗಿದೆ.

ನೀತಿ ಉಪಕ್ರಮಗಳು ರಾಷ್ಟ್ರೀಯ ಉಪಕ್ರಮಗಳ ಮೂಲಕ ಅಥವಾ ಬೇರೆಡೆಗಳಿಂದ ತಂತ್ರಜ್ಞಾನಗಳ ವರ್ಗಾವಣೆಯ ಮೂಲಕ ಮೇಲಿನ ಪ್ಯಾರಾಗಳಲ್ಲಿ ಉಲ್ಲೇಖಿಸಲಾದ ಹೆಚ್ಚಿನ ಸಂಖ್ಯೆಯ ಸ್ಥಳೀಯ ಪ್ರಭೇದಗಳ ವಾಣಿಜ್ಯಿಕವಾಗಿ ಕಾರ್ಯಸಾಧ್ಯವಾದ ಮೀನುಮರಿ ಉತ್ಪಾದನಾ ತಂತ್ರಜ್ಞಾನಗಳ ಅಳವಡಿಕೆಯನ್ನು ಬೆಂಬಲಿಸುತ್ತದೆ. ಈ ನಿಟ್ಟಿನಲ್ಲಿ, ಸಂಭಾವ್ಯ ಪ್ರದೇಶಗಳಲ್ಲಿ ವಿವಿಧ ಜಾತಿಯ ಮೀನಿನಮರಿ ಉತ್ಪಾದನಾ ಕೇಂದ್ರಗಳು, ಮರಿ ಸಾಕಣೆ ಕೇಂದ್ರಗಳು ಮತ್ತು ಬ್ರೂಡ್ ಬ್ಯಾಂಕುಗಳನ್ನು ಐಸಿಎಆರ್ ಸಂಶೋಧನಾ ಸಂಸ್ಥೆಗಳ ಖಾಸಗಿ ವಲಯದೊಂದಿಗಿನ ಅವರ ಸಹಯೋಗವು ಸ್ಥಾಪಿಸುವುದು ನಿರ್ಣಾಯಕವಾಗಿರುತ್ತದೆ. ಮೀನಿನ ಜಾತಿಗಳ ವೈವಿಧ್ಯೀಕರಣ ಮತ್ತು ಮರಿ ಉತ್ಪಾದನೆಯನ್ನು ಉತ್ತೇಜಿಸುವಾಗ, ನೀತಿ ಉಪಕ್ರಮಗಳು ಮೀನುಮರಿ ಉತ್ಪಾದನಾ ಕೇಂದ್ರಗಳ ಮಾನ್ಯತೆ, ಮರಿ ಪ್ರಮಾಣೀಕರಣ ಮತ್ತು ಗುಣಮಟ್ಟದ ನಿಯಂತ್ರಣದ ಮೂಲಕ ಮೀನು ಕೃಷಿಕರಿಗೆ ಗುಣಮಟ್ಟದ ಮೀನುಮರಿ ಲಭ್ಯತೆಯನ್ನು ಖಚಿತಪಡಿಸುತ್ತದೆ. ಅದೇ ರೀತಿಯಲ್ಲಿ ರೈತರಿಗೆ ಗುಣಮಟ್ಟದ ಮತ್ತು ಪ್ರಮಾಣೀಕೃತ ಮೀನು ಆಹಾರ ಲಭ್ಯವಾಗುವಂತೆ ನೋಡಿಕೊಳ್ಳುವುದು ಅಗತ್ಯ.

**ತಕ್ಷಣ ಕ್ರಮಕೈಗೊಳ್ಳಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಅಗತ್ಯವಿರುವ ಮೀನಿನ ಪ್ರಭೇದಗಳು, ಆರೋಗ್ಯವಂತ ಮರಿಗಳು, ಸೂಕ್ತ ತಂತ್ರಜ್ಞಾನಗಳು ಮತ್ತು ಬೆಂಬಲ ಸೇವೆಗಳು ಲಭ್ಯತೆಯನ್ನು ಖಾತರಿಪಡಿಸುವ ಮೂಲಕ ಮೀನಿನ ವಿವಿಧ ಜಾತಿಗಳ ಲಭ್ಯತೆಯನ್ನು ವೈವಿಧ್ಯಗೊಳಿಸುವುದು ಮತ್ತು ವಿಸ್ತರಿಸುವುದು.*
- *ಬ್ರೂಡ್ ಬ್ಯಾಂಕುಗಳ ಸ್ಥಾಪನೆ ಸೇರಿದಂತೆ ದೇಶದಲ್ಲಿ ಮೀನುಮರಿ ಉತ್ಪಾದನೆಗೆ ಸಮಯ-ನಿಗದಿತ ಮತ್ತು ಕ್ರಿಯಾಶೀಲ ಆಧಾರಿತ ಯೋಜನೆಯನ್ನು ಸಿದ್ಧಪಡಿಸುವುದು.*
- *ಸ್ಕ್ಯಾಂಪಿ (ಮ್ಯಾಕ್ರೋಬ್ರಾಡಿಯಂ ರೋಸೆನ್‌ಬರ್ಗಿ) ಕೃಷಿಯ ಪುನಃಶ್ಚೇತನ.*
- *ಮೀನು ಕೃಷಿಕರಿಗೆ ನೀರಿನ ಸಂಪನ್ಮೂಲಗಳ ಲಭ್ಯತೆಯನ್ನು ಭದ್ರಪಡಿಸುವುದು ಮತ್ತು ಮೀನು ಕೃಷಿಕರ ಸಂಘಟನೆಗಳನ್ನು ಸ್ಥಾಪಿಸುವುದು.*
- *ಮೀನು ಕೃಷಿಗೆ ಅನುಕೂಲಕರವಾದ ತಣ್ಣೀರು (Cold water) ಸಂಪನ್ಮೂಲಗಳ ಮೌಲ್ಯಮಾಪನ ಮತ್ತು ದೇಶದಲ್ಲಿ ತಣ್ಣೀರು ಮೀನುಗಾರಿಕೆ ಮತ್ತು ಮೀನುಕೃಷಿ ಅಭಿವೃದ್ಧಿಗೆ ಮಾಸ್ಟರ್ ಪ್ಲ್ಯಾನ್ ತಯಾರಿಸುವ ಮೂಲಕ ದೇಶದಲ್ಲಿ ಎತ್ತರ ಪ್ರದೇಶಗಳಲ್ಲಿ ಟ್ರೌಟ್ ಕೃಷಿಯನ್ನು ಉತ್ತೇಜಿಸುವುದು.*
- *ಉತ್ತಮ ಗುಣಮಟ್ಟದ ಮೀನುಮರಿ ಮತ್ತು ಮೀನು ಆಹಾರ ಲಭ್ಯತೆಯಂತಹ ಬೆಂಬಲ ಸೇವೆಗಳನ್ನು ಹೆಚ್ಚಿಸುವುದು.*
- *ಸಂಭಾವ್ಯ ಪ್ರದೇಶಗಳನ್ನು ಗುರುತಿಸುವುದು ಮತ್ತು ಅಗತ್ಯ ಬೆಂಬಲ ಸೇವೆಗಳೊಂದಿಗೆ ಸೂಕ್ತವಾದ ಜಲಕೃಷಿಗಾಗಿ ಅವುಗಳ ಲಭ್ಯತೆ ಮತ್ತು ಹಂಚಿಕೆಯನ್ನು ಭದ್ರಪಡಿಸುವುದು.*

### *6.3.2 ಉಪ್ಪುನೀರಿನ ಜಲಕೃಷಿ*

ಕಳೆದ ಎರಡು ದಶಕಗಳಲ್ಲಿ ಜಲಕೃಷಿ ಆಧಾರಿತ ಆಹಾರ ಉತ್ಪಾದನಾ ಕ್ಷೇತ್ರಗಳಲ್ಲಿ ಸೀಗಡಿ ಸಾಕಾಣಿಕೆಯ ಹೆಚ್ಚು ಚರ್ಚಿಸಲ್ಪಟ್ಟ ಚಟುವಟಿಕೆಯಾಗಿದೆ. ಉತ್ಕರ್ಷ, ಬಸ್ಟ್ ಮತ್ತು ಉತ್ಕರ್ಷದ ಚಕ್ರದೊಂದಿಗೆ, ಸೀಗಡಿ ಸಾಕಾಣಿಕೆಯು ಅಳಿವೆ ಪ್ರದೇಶಗಳಲ್ಲಿ ಕೈಗೊಂಡ ಸಾಂಪ್ರದಾಯಿಕ ಪದ್ಧತಿಗಳಲ್ಲಿ ನೀರು ಮತ್ತು ಮರಿಗಳಿಗೂ ಹೆಚ್ಚಿನ ಉಬ್ಬರದಲ್ಲಿ ಸೆಳೆದು ಮತ್ತು ಅಲ್ಪಾವಧಿಯ ಬೆಳೆಗಳಿಂದ ಪ್ರಾರಂಭಿಸಿ ವಾಣಿಜ್ಯ ಸಾಕಾಣಿಕೆ ಮೂಲಕ ಹೆಚ್ಚಿನ ಹೆಕ್ಟೇರ್ ಉತ್ಪಾದನೆ ಮತ್ತು ಉತ್ಪಾದಕತೆಯತ್ತ ಸಾಗಿದೆ. ಟೈಗರ್ ಸೀಗಡಿ (ಪಿನಿಯಸ್ ಮೊನೊಡಾನ್) ನ ವಾಣಿಜ್ಯ-ಪ್ರಮಾಣದ ಜಲಕೃಷಿಯೊಂದಿಗೆ ಪ್ರಾರಂಭವಾದ ಉತ್ಕರ್ಷದ ಮೊದಲ ಚಕ್ರವು ಹೆಚ್ಚು ಕಾಲ ಉಳಿಯಲಿಲ್ಲ. ವೈಟ್ ಸ್ಪಾಟ್ ಸಿಂಡ್ರೋಮ್ ಕಾಯಿಲೆ (ಡಬ್ಲ್ಯುಎಸ್‌ಎಸ್‌ಡಿ) ಮತ್ತು ಡಿಸೆಂಬರ್ 2016 ರ ಸುಪ್ರೀಂ ಕೋರ್ಟ್‌ನ ತೀರ್ಪು ಚಟುವಟಿಕೆಗಳನ್ನು ನಿಲ್ಲಿಸಿತು. ಉತ್ಕರ್ಷದ ಎರಡನೇ ಚಕ್ರವು 2000 ರ ಮಧ್ಯದಲ್ಲಿ ಪೆಸಿಫಿಕ್ ವೈಟ್‌ಲೆಗ್ ಸೀಗಡಿ (ಲಿಟೊಪೆನಿಯಸ್ ವನ್ನಾಮಿ)ಯನ್ನು ಪರಿಚಯಿಸುವುದರೊಂದಿಗೆ

ಪ್ರಾರಂಭವಾಯಿತು ಮತ್ತು ಉತ್ಪಾದನೆಯಲ್ಲಿ ಅಭೂತಪೂರ್ವ ಹೆಚ್ಚಳವನ್ನು ತಂದಿತು, ವೈಟ್‌ಲೆಗ್ ಸೀಗಡಿ ಉತ್ಪಾದನೆಯಲ್ಲಿ ಭಾರತವು ಎರಡನೇ ಸ್ಥಾನದಲ್ಲಿದೆ. ಈ ಉತ್ಪಾದನೆಯು ದೇಶದ ರಫ್ತು ಆದಾಯವನ್ನೂ ಹೆಚ್ಚಿಸಿದೆ.

ದೇಶವು ಕರಾವಳಿ ಪ್ರದೇಶಗಳಲ್ಲಿ ಸೀಗಡಿ ಸಾಕಾಣಿಕೆಗೆ ಅನುಕೂಲಕರವಾದ ಸುಮಾರು 1.24 ದಶಲಕ್ಷ ಹೆಕ್ಟೇರ್ ಭೂಮಿಯನ್ನು ಹೊಂದಿದೆ ಎಂದು ಅಂದಾಜಿಸಲಾಗಿದೆ. ಕಳೆದ ದಶಕದಲ್ಲಿ ಸಕಾರಾತ್ಮಕ ಬೆಳವಣಿಗೆಯೆಂದರೆ ಸೀಗಡಿ ಸಾಕಾಣಿಕೆ ಈಗ ಪೂರ್ವ ಕರಾವಳಿಯ ಸಾಂಪ್ರದಾಯಿಕ ಕೃಷಿ ಪ್ರದೇಶಗಳಿಂದ ಪಶ್ಚಿಮ ಕರಾವಳಿಗೆ ಸಾಗಿದೆ. ಈ ಬೆಳವಣಿಗೆಗೆ ಗುಜರಾತ್ ಅತ್ಯುತ್ತಮ ಉದಾಹರಣೆಯಾಗಿದೆ. ಈ ವಲಯದ ಪಾಲುದಾರರು ದೊಡ್ಡ ಉದ್ಯಮಿಗಳ, ಹೆಚ್ಚಾಗಿ ಇನ್ಪುಟ್ ಉತ್ಪಾದನೆ (ಮರಿ, ಆಹಾರ, ಆರೋಗ್ಯ ಪೂರಕಗಳು, ಇತ್ಯಾದಿ) ಮತ್ತು ಸರಾಸರಿ 3–4 ಹೆಕ್ಟೇರ್ ಹೊಂದಿರುವ ಸೀಗಡಿ ಕೃಷಿಕರ ಮಿಶ್ರಣವಾಗಿದೆ. ಕೆಲವು ಉದ್ಯಮಿಗಳು ಸಮಗ್ರ ಸೌಲಭ್ಯಗಳನ್ನು ಹೊಂದಿದ್ದು, ನೂರಾರು ಹೆಕ್ಟೇರ್ ಪ್ರದೇಶದ ದೊಡ್ಡಗಾತ್ರದ ಫಾರಂಗಳನ್ನು ಹೊಂದಿರುತ್ತಾರೆ.

ಕರಾವಳಿಯಲ್ಲಿ ಸೀಮಿತ ಆರ್ಥಿಕ ಬಳಕೆಯನ್ನು ಹೊಂದಿರುವ ಭೂಮಿಯಲ್ಲಿ ಸೂಕ್ತವಾದ ಭೂ–ಗುತ್ತಿಗೆ ನೀತಿಗಳು ಮತ್ತು ಸಾಕಣೆ ಕೇಂದ್ರಗಳು, ಮರಿಕೇಂದ್ರಗಳು, ಇತ್ಯಾದಿ ಅಗತ್ಯವಿರುವ ಮೂಲಭೂತಸೌಕರ್ಯಗಳನ್ನೂ ಸ್ಥಾಪಿಸಲು ಉತ್ತೇಜಿಸುವ ಮೂಲಕ ಜಲಕೃಷಿಯನ್ನು ಉತ್ತೇಜಿಸಲಾಗುವುದು. ಈ ಮೂಲಭೂತಸೌಕರ್ಯಗಳಲ್ಲಿ ಪ್ರವೇಶ ರಸ್ತೆಗಳು, ವಿದ್ಯುತ್ ಮತ್ತು ಶುದ್ಧ ನೀರು ಸರಬರಾಜು ಮತ್ತು ಚರಂಡಿ ಸೌಲಭ್ಯಗಳು ಮತ್ತು ಅಗತ್ಯವಿರುವ ಕಡೆಗಳಲ್ಲಿ ಇತರ ಪ್ರೋತ್ಸಾಹಗಳನ್ನು ಒಳಗೊಂಡಿರುತ್ತದೆ. ಸಿಹಿನೀರಿನ ಜಲಕೃಷಿಯಂತಲ್ಲದೆ ಉಪ್ಪುನೀರಿನ ಸೀಗಡಿ ಕೃಷಿ ಉದ್ಯಮವು ಮರಿ, ಆಹಾರ ಮತ್ತು ಬೆಳವಣಿಗೆಯ ಪ್ರವರ್ತಕಗಳ ವಿಷಯದಲ್ಲಿ ಹೆಚ್ಚು ಅಭಿವೃದ್ಧಿಗೊಂಡಿದೆ ಮತ್ತು ಉದ್ಯಮವು ಇನ್ಪುಟ್ ಸರಬರಾಜುಗಾಗಿ ಅತ್ಯುತ್ತಮ ವಿತರಣಾ ಮಾರ್ಗಗಳನ್ನು ಸ್ಥಾಪಿಸಿದೆ ಮತ್ತು ಸೀಗಡಿ ಸಂಸ್ಕರಣೆಗೆ ಸರಬರಾಜು ಮಾಡಲು ಹಿಡುವಳಿ ಮಾಡಿದ ಉತ್ಪನ್ನಗಳ ಸಂಗ್ರಹಣ ವ್ಯವಸ್ಥೆಯನ್ನೂ ಹೊಂದಿದೆ. ಬಹು–ರಾಷ್ಟ್ರೀಯ ಸಂಸ್ಥೆಗಳ ಪಾಲುಗೊಳ್ಳುವಿಕೆಯಿಂದ ಈ ವಲಯದ ಅಭಿವೃದ್ಧಿ ಪ್ರಕ್ರಿಯೆಯು ವೇಗವನ್ನೂ ವರ್ಧಿಸಿದೆ.

ದೇಶದ ಕರಾವಳಿಯ ಜಲಕೃಷಿ ಮತ್ತು ಇತರ ಜಲಚರ ಸಾಕಣೆ ಚಟುವಟಿಕೆಗಳನ್ನು ಒಳಗೊಂಡಿರುವ ಕರಾವಳಿಯ ಜಲಕೃಷಿಯನ್ನು ಕರಾವಳಿ ಅಕ್ವಾಕಲ್ಚರ್ ಅಥಾರಿಟಿ ಆಕ್ಟ್, 2005 ಬೆಂಬಲಿಸುತ್ತದೆ, ಇದು ಕರಾವಳಿಯ ಪರಿಸರ ಮತ್ತು ವಾತಾವರಣದ ಮೇಲೆ ಪ್ರತಿಕೂಲ ಪರಿಣಾಮ ಬೀರದಂತೆ ಸುಸ್ಥಿರ ಕೃಷಿ ಪದ್ಧತಿಗಳನ್ನು ಖಚಿತಪಡಿಸಿಕೊಳ್ಳಲು ಕಡ್ಡಾಯವಾಗಿದೆ. ಈ ಕಾಯಿದೆಯಡಿ ರೂಪಿಸಲಾದ ನಿಯಮಗಳು ಮತ್ತು ಮಾರ್ಗಸೂಚಿಗಳು, ಸೀಗಡಿ ಸಾಕಾಣಿಕೆ ಕೇಂದ್ರಗಳನ್ನು ಸ್ಥಾಪಿಸಲು ಮತ್ತು ಅವುಗಳ ಕಾರ್ಯಾಚರಣೆಗೆ

ಅಗತ್ಯವಾದ ಮಾರ್ಗದರ್ಶನ ನೀಡುತ್ತವೆ. ಆದಾಗ್ಯೂ, ಸೀಗಡಿ ಉದ್ಯಮವು ಒಂದೇ ಪ್ರಭೇದಕ್ಕೆ (ಎಲ್. ವನ್ನಮೇಯಿ) ಅದೂ ವಿದೇಶಿ ಮೂಲದ, ಸೀಮಿತವಾಗಿ ಕೃಷಿ ಮಾಡುತ್ತಿರುವುದು ಅಪಾಯಕಾರಿಯಾಗಿದೆ. ಈ ಪರಿಸ್ಥಿತಿಯು ಒಂದು ಬಿಲಿಯನ್ ಡಾಲರ್ ನಷ್ಟು ದೊಡ್ಡದಾದ ಉದ್ಯಮಕ್ಕೆ ಪೂರಕವಾಗಿಲ್ಲ. ಮರಿ, ಆಹಾರ, ಸಂಸ್ಕರಣೆ ಮತ್ತು ಇತರ ಇನ್ಪುಟ್ ಸರಬರಾಜುಗಳನ್ನು ಉತ್ಪಾದಿಸುವ ಸೀಗಡಿ ಉದ್ಯಮದ ಗಾತ್ರವು ಅನೇಕ ಪಟ್ಟು ಹೆಚ್ಚಾಗಿದೆ ಮತ್ತು ಒಂದೇ ಜಾತಿಯ ಸೀಗಡಿ ಮೇಲೆ ಅತಿಯಾದ ಅವಲಂಬನೆಯು ಉದ್ಯಮವನ್ನು ಹೆಚ್ಚಿನ ಅಪಾಯಕ್ಕೆ ದೂಡುತ್ತದೆ. ವೈಟ್‌ಲೆಗ್ ಸೀಗಡಿಯ ಅದ್ಭುತ ಯಶಸ್ಸು ಟೈಗರ್ ಸೀಗಡಿಯನ್ನು ಮರೆತುಹೋದ ಜಾತಿಯನ್ನಾಗಿ ಮಾಡಿದೆ ಮತ್ತು ಟೈಗರ್ ಸೀಗಡಿಯನ್ನು ಪುನರುಜ್ಜೀವನಗೊಳಿಸಲು ಕಳೆದ ಒಂದೂವರೆ ದಶಕದಲ್ಲಿ ಯಾವುದೇ ಪ್ರಯತ್ನಗಳು ನಡೆದಿಲ್ಲ. ಅಂತೆಯೇ, ಸ್ಥಳೀಯ ಪ್ರಭೇದವಾದ ಪೆನಿಯಸ್ ಇಂಡಿಕಸ್‌ನ ಕೃಷಿಯು ಪ್ರಾಮುಖ್ಯತೆಯನ್ನು ಗಳಿಸಿಲ್ಲ. ಆದ್ದರಿಂದ, ಸೀಗಡಿ ಜಾತಿಗಳ ವೈವಿಧ್ಯೀಕರಣ ಮತ್ತು ಉದ್ಯಮವು ಈಗ ಎದುರಿಸುತ್ತಿರುವ ಅಪಾಯಗಳನ್ನು ಕಡಿಮೆ ಮಾಡುವ ತುರ್ತು ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿನ ನೀತಿ ನಿರ್ದೇಶನಗಳು ಟೈಗರ್ ಸೀಗಡಿಗಳ ಪುನರುಜ್ಜೀವನ ಮತ್ತು ಪಿ. ಇಂಡಿಕಸ್ ಸೀಗಡಿ ಮರಿ ಕೇಂದ್ರ ಮತ್ತು ಕೃಷಿ ತಂತ್ರಜ್ಞಾನಗಳ ಪ್ರಮಾಣೀಕರಣದ (Standradization) ಗುರಿಯನ್ನು ಹೊಂದಿವೆ. ಸೀ ಬಾಸ್, ಮಿಲ್ಕ್‌ಫಿಶ್ ಮತ್ತು ಮಲ್ಲೆಟ್ ಮುಂತಾದ ಫಿನ್ ಫಿಶ್‌ಗಳನ್ನು ಸೇರಿಸುವುದರಿಂದ ಜಾತಿಯ ಪಟ್ಟಿಯನ್ನು ವಿಸ್ತರಿಸುತ್ತದೆ. ಈ ನಿಟ್ಟಿನಲ್ಲಿ, ಸಾಂಪ್ರದಾಯಿಕವಲ್ಲದ ಪ್ರಭೇದಗಳಾದ ಚಿಪ್ಪು ಮೀನುಗಳನ್ನು ಸಹ ಪರಿಗಣಿಸಲಾಗುತ್ತದೆ ಮತ್ತು ಫಿಲ್ಟರ್–ಫೀಡರ್ ಆಗಿ ಅವುಗಳ ಪಾತ್ರವು ಕೃಷಿ ಪದ್ಧತಿಗಳ ಸುಸ್ಥಿರತೆಯನ್ನು ಹೆಚ್ಚಿಸುತ್ತದೆ. ಇದಲ್ಲದೆ, ಜಲಕೃಷಿ ಸುಸ್ಥಿರವಾಗಿ ಉಳಿಯಬೇಕಾದ ಸುಧಾರಿತ ಜೈವಿಕ ಸುರಕ್ಷತೆ ಮತ್ತು ಆರೋಗ್ಯ ನಿರ್ವಹಣೆ, ಹೆಚ್ಚುವರಿ ಕ್ವಾರನ್‌ಟೈನ್ ಸೌಲಭ್ಯಗಳು ಮತ್ತು ಅತ್ಯುತ್ತಮ ನಿರ್ವಹಣಾ ಅಭ್ಯಾಸಗಳು (ಬಿಎಂಪಿ) / ಉತ್ತಮ ಜಲಕೃಷಿ ಅಭ್ಯಾಸಗಳ (ಜಿಎಪಿ) ಪ್ರಚಾರವನ್ನೂ ನೀತಿ ಉಪಕ್ರಮಗಳು ಗುರಿಯಾಗಿರಿಸಿಕೊಳ್ಳುತ್ತವೆ. ಜಲಕೃಷಿ ಕಾರ್ಯಾಚರಣೆಗಳಿಂದ ಉಂಟಾಗುವ ತ್ಯಾಜ್ಯನೀರಿನ ನಿರ್ವಹಣೆ ಒಂದು ಪ್ರಮುಖ ವಿಷಯವಾಗಿದೆ ಮತ್ತು ತ್ಯಾಜ್ಯನೀರು ಕೊಲ್ಲಿಗಳು ಅಥವಾ ಕರಾವಳಿ ನೀರಿನಲ್ಲಿ ಪ್ರವೇಶಿಸುವ ಮೊದಲು ಮಾಲಿನ್ಯಕಾರಕಗಳ ಪ್ರಮಾಣವನ್ನು ಕಡಿಮೆ ಮಾಡುವ ಮೂಲಭೂತ ಸೌಕರ್ಯಗಳ ರಚನೆಗೆ ಬೆಂಬಲ ನೀಡುವತ್ತ ನೀತಿಯನ್ನು ನಿರ್ದೇಶಿಸಲಾಗುವುದು. ಸಣ್ಣ ಪ್ರಮಾಣದ ಜಲಕೃಷಿಗಾಗಿ ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ವ್ಯವಸ್ಥೆಗಳನ್ನು ಬೆಂಬಲಿಸಲಾಗುತ್ತದೆ ಇದರಿಂದ ಜಲಕೃಷಿ ಕಾರ್ಯಸಾಧ್ಯ ಮತ್ತು ಲಾಭದಾಯಕವಾಗಿರುತ್ತದೆ. ಸಮುದ್ರ ಸಸ್ಯ ಮತ್ತು ಮಸ್ಸೆಲ್ಸ್(Mussels) ಮತ್ತು ಇತರ ಕೃಷಿಯೋಗ್ಯ ಮೃದ್ವಂಗಿಗಳ ಸಾಕಾಣಿಕೆಯನ್ನು ತ್ಯಾಜ್ಯ ನೀರು ತೆರೆದ ನೀರಿನ ವ್ಯವಸ್ಥೆಗೆ ಪ್ರವೇಶಿಸುವ ಮೊದಲು ನೀರನ್ನು ಶುದ್ಧೀಕರಿಸಲು ಉತ್ತೇಜಿಸಲಾಗುತ್ತದೆ. ಒಳನಾಡಿನ ಪ್ರದೇಶಗಳಲ್ಲಿ ಸ್ಥಾಪಿಸಲಾದ ಪೆಸಿಫಿಕ್ ವೈಟ್‌ಲೆಗ್ ಸೀಗಡಿ ಸಾಕಾಣಿಕೆ ಕೇಂದ್ರಗಳಿಗೆ ಉಪ್ಪು ನೀರನ್ನು ಬಳಸಲು ಅನುಮತಿಸಲಾಗುವುದಿಲ್ಲ.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಕಂಡಂತಿವೆ:**

- *ಟೈಗರ್ ಸೀಗಡಿ, ಪಿ. ಇಂಡಿಕಸ್‌ನ ಪುನರುಜ್ಜೀವನದ ಮೂಲಕ ಜಾತಿಯ ವೈವಿಧ್ಯೀಕರಣವನ್ನು ಉತ್ತೇಜಿಸುವುದು ಮತ್ತು ಸೀಬಾಸ್, ಮಲ್ಲೆಟ್‌ಗಳು ಮುಂತಾದ ಫಿನ್‌ಫಿಶ್‌ಗಳನ್ನು ಜಲಕೃಷಿಗೆ ಸೇರಿಸುವುದು.*
- *ಟೈಗರ್ ಸೀಗಡಿ ಮತ್ತು ಪಿ. ಇಂಡಿಕಸ್‌ನ ಪಳಗಿಸುವಿಕೆಯನ್ನು (domestication) ಬೆಂಬಲಿಸುವುದು ಮತ್ತು ನಿರ್ದಿಷ್ಟ ರೋಗಾಣು ಮುಕ್ತ ಜರ್ಮ್‌ಪ್ಲಾಸಂ ಉತ್ಪಾದನೆಯತ್ತ ಸಾಗುವುದು.*
- *ಕರಾವಳಿ ಪ್ರದೇಶಗಳ ಸದ್ ಬಳಕೆಗಾಗಿ ಸೀಗಡಿ ಸಾಕಾಣಿಕೆಯನ್ನು ಮತ್ತಷ್ಟು ವಿಸ್ತರಿಸಿ, ಉದ್ಯೋಗ ಸೃಷ್ಟಿ, ಮತ್ತು ಆಹಾರ ಮತ್ತು ಪೌಷ್ಠಿಕಾಂಶದ ಸುರಕ್ಷತೆಯನ್ನು ಹೆಚ್ಚಿಸುವುದು.*
- *ಜೈವಿಕ ಸುರಕ್ಷತೆ ಮತ್ತು ಆರೋಗ್ಯ ನಿರ್ವಹಣೆಯನ್ನು ಸುಧಾರಿಸುವುದು, ನಿಷೇಧಿತ ಪ್ರತಿಜೀವಕಗಳ (antibodies) ಬಳಕೆಯನ್ನು ತಡೆಯುವುದು ಹೆಚ್ಚುವರಿ ಕ್ವಾರಂಟೈನ್ ಒದಗಿಸುವುದು ಮತ್ತು ಬಿಎಂಪಿ / ಜಿಎಪಿ ಪ್ರೋತ್ಸಾಹಿಸುವುದು.*

### *6.3.3 ಸಮುದ್ರ ಜಲಕೃಷಿ*

ವರ್ಷದಿಂದ ವರ್ಷಕ್ಕೆ ಸಮುದ್ರಾಹಾರದ ಬೇಡಿಕೆ ಹೆಚ್ಚಾಗಲಿದೆ ಎಂದು ಗುರುತಿಸಿದ ಭಾರತ ಸರ್ಕಾರ, ಸಮುದ್ರ ಹಿಡುವಳಿ ಮೀನುಗಾರಿಕೆ (capture fisheries) ಯಿಂದ ಮಾತ್ರ ಹೆಚ್ಚುವರಿ ಸಮುದ್ರಾಹಾರ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗದಿರಬಹುದು ಎಂಬುದನ್ನು ಮನಗಂಡು, ದೇಶದ ಕರಾವಳಿ ಪ್ರದೇಶಗಳಲ್ಲಿ ಕೃಷಿ ಸಂಸ್ಕೃತಿಯ ಅಭಿವೃದ್ಧಿಗೆ ನಾಂದಿ ಹಾಡಿದೆ. ದೇಶದಲ್ಲಿ ಸಮುದ್ರ ಕೃಷಿ ಅಭಿವೃದ್ಧಿಗೆ ಲಭ್ಯವಿರುವ ಸಂಭಾವ್ಯ ಪ್ರದೇಶಗಳ ಆಧಾರದ ಮೇಲೆ, ವಾರ್ಷಿಕ 4–8 ಎಂಎಂಟಿ ಉತ್ಪಾದನೆಯನ್ನು ಯೋಜಿಸಲಾಗಿದೆ.

ದೇಶದಲ್ಲಿ ಸಮುದ್ರ ಕೃಷಿ ಅಭಿವೃದ್ಧಿಯು ಪ್ರಾರಂಭಿಕ ಹಂತದಲ್ಲಿರುವ ಕಾರಣ, ಸಮುದ್ರ ಪ್ರಾದೇಶಿಕ ಯೋಜನೆ (ಎಂಎಸ್‌ಪಿ) ವಿಧಾನವನ್ನು ಅನುಸರಿಸಿ ಗುತ್ತಿಗೆ ನೀತಿಯೊಂದಿಗೆ ಭಾರತೀಯ ಕರಾವಳಿಯುದ್ದಕ್ಕೂ ಸೂಕ್ತವಾದ ತಾಣಗಳು / ಪ್ರದೇಶಗಳ ನೀಲನಕ್ಷೆಯ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಸಮುದ್ರ ಜಲ ಕೃಷಿಗೆ ಸೂಕ್ತವಾದ ಮೀನಿನ ಜಾತಿಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಮತ್ತು ಸಮುದ್ರದಲ್ಲಿ ಪಂಜರ ಕೃಷಿಗಾಗಿ ಸಣ್ಣ ಮತ್ತು ಸಾಂಪ್ರದಾಯಿಕ ಮೀನುಗಾರರಿಗೆ ಆದ್ಯತೆಯ ಆಧಾರದ ಮೇಲೆ ಜಾಗವನ್ನು ಹಂಚಿಕೆ ಮಾಡಲು ನೀತಿಯು ಅನುವು ಮಾಡಿಕೊಡುತ್ತದೆ. ಸಂಭಾವ್ಯ ಮೀನಿನ ಜಾತಿಗಳ ಮರಿಗಳ ವಾಣಿಜ್ಯ–ಪ್ರಮಾಣದ ಉತ್ಪಾದನೆ ಮತ್ತು ಅವುಗಳ ಪಂಜರ ಕೃಷಿಯನ್ನು ನಿರ್ದಿಷ್ಟವಾಗಿ ಗುರುತಿಸಲಾದ ಸಮುದ್ರ ಸ್ಥಳಗಳಲ್ಲಿ ಅದರಲ್ಲೂ ಮುಖ್ಯವಾಗಿ 12 ನಾಟಿಕಲ್ ಮೈಲಿಗಿಂತ ಹೆಚ್ಚಿನ ದೂರದಲ್ಲಿ ಉತ್ತೇಜಿಸಬಹುದು, ಆದರೆ ಸಾಕಷ್ಟು ಸುರಕ್ಷತೆಗಳೊಂದಿಗೆ

ಮತ್ತು ಸಾಮಾನ್ಯ ಮೀನುಗಾರಿಕೆ, ಹಡಗು ಮತ್ತು ಇತರ ಕಡಲ ಚಟುವಟಿಕೆಗಳಿಗೆ ಧಕ್ಕೆಯಾಗದಂತೆ ಕ್ರಮವಹಿಸಬೇಕಾಗಿದೆ. ಭಾರತದ ಕರಾವಳಿಯಲ್ಲಿ ಸರ್ಫ್ ಮತ್ತು ಉಬ್ಬರವಿಳಿತದ ಪ್ರಭಾವಕ್ಕೆ ಒಳಗಾಗಿರುವ ವಿಸ್ತಾರ ಪ್ರದೇಶಗಳಲ್ಲಿ, ಪ್ರಕೃತಿಯ ಅಂಶಗಳಿಗೆ ಒಡ್ಡಿಕೊಂಡು ಪಂಜರಗಳನ್ನು ತೆರೆದ ನೀರಿನಲ್ಲಿ ಸ್ಥಾಪಿಸಬೇಕಾಗಿದೆ. ಆದರೆ ಕೊಲ್ಲಿಗಳು, ಕೋವ್ಸ್ನಲ್ಲಿರುವ ತಾಣಗಳಿಗೆ ಮತ್ತು ಆಶ್ರಯ ಪ್ರದೇಶಗಳು ಗಾಳಿ ಮತ್ತು ಪ್ರವಾಹಗಳಿಗೆ ಕಡಿಮೆ ಗುರಿಯಾಗುತ್ತವೆ. ಆದ್ದರಿಂದ, ಕಡಲ ಕೃಷಿಯನ್ನು ಜನಪ್ರಿಯಗೊಳಿಸುವ ಪ್ರಮುಖ ಅವಶ್ಯಕತೆಗಳಲ್ಲಿ ಗಟ್ಟಿಮುಟ್ಟಾದ ಪಂಜರಗಳ ಲಭ್ಯತೆ ಮತ್ತು ಕಠಿಣ ಸಮುದ್ರ ಪರಿಸರವನ್ನು ತಡೆದುಕೊಳ್ಳಬಲ್ಲ ಅವುಗಳ ಮೂರಿಂಗ್‌ಗಳು ಪ್ರಮುಖವಾಗಿವೆ.

ಹಲವಾರು ಪ್ರಭೇದಗಳ ಮೀನಿನ ಸಂತಾನೋತ್ಪತ್ತಿ ಮತ್ತು ಲಾರ್ವಾ ಪಾಲನೆಗಾಗಿ ತಂತ್ರಜ್ಞಾನಗಳ ಅಭಿವೃದ್ಧಿಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಿದೆ (ಉದಾ. ಕೋಬಿಯಾ, ಸಿಲ್ವರ್ ಪೊಂಪಾನೊ, ಇಂಡಿಯನ್ ಪೊಂಪಾನೊ, ಕಿತ್ತಳೆ–ಚುಕ್ಕೆಗಳ ಗ್ರುಪರ್, ಎಂಪರರ್ ಸಿಬ್ರಿಮ್, ಜಾನ್ಸ್ ಸ್ನಾಪರ್ ಮತ್ತು ವರ್ಮಿಕ್ಯುಲೇಟೆಡ್ ಸ್ಪೈನ್‌ಫೂಟ್, ಹಸಿರು ಮತ್ತು ಕಂದು ಮಸ್ಸೆಲ್ಸ್ ಮತ್ತು ಖಾದ್ಯ ಆಯಿಸ್ಟರ್), ಸಾಕಷ್ಟು ಪ್ರಮಾಣದಲ್ಲಿ ಗುಣಮಟ್ಟದ ಬಿತ್ತನೆ ಮರಿಗಳ ಲಭ್ಯತೆಯು ದೊಡ್ಡ ಪ್ರಮಾಣದಲ್ಲಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ. ಮತ್ತು ಕೃಷಿಯನ್ನು ವೆಚ್ಚ–ಪರಿಣಾಮಕಾರಿಯನ್ನಾಗಿ ಮಾಡುತ್ತದೆ. ಕಡಲ ಕೃಷಿಕರು ಮತ್ತು ಉದ್ಯಮಿಗಳ ಅಗತ್ಯತೆಗಳನ್ನು ಪೂರೈಸುವಲ್ಲಿ ಆರ್ & ಡಿ ಮತ್ತು ಉದ್ಯಮದ ಪಾತ್ರವು ಈ ವಿಷಯದಲ್ಲಿ ಪ್ರಮುಖವಾಗಿದೆ. ನೀತಿ ಉಪಕ್ರಮಗಳಲ್ಲಿ ವಾಣಿಜ್ಯಿಕವಾಗಿ ಕಾರ್ಯಸಾಧ್ಯವಾದ ಬಿತ್ತನೆಮರಿ ಉತ್ಪಾದನಾ ತಂತ್ರಜ್ಞಾನಗಳ ಉತ್ತೇಜನ, ಅಭ್ಯರ್ಥಿ ಪ್ರಭೇದಗಳಿಗೆ ಬ್ರೂಡ್ ಬ್ಯಾಂಕುಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಮರಿ ಉತ್ಪಾದನೆ ಮತ್ತು ರೈತರ ಅಗತ್ಯತೆಗಳನ್ನು ಪೂರೈಸುವ ಲಭ್ಯತೆಯನ್ನು ಹೆಚ್ಚಿಸಲು ಹ್ಯಾಚರಿಗಳನ್ನು ಅಭಿವೃದ್ಧಿಪಡಿಸುವುದು ಸೇರಿವೆ. ಪಿಪಿಪಿ (PPP) ಪದ್ಧತಿಯು ಸಮುದ್ರ ಕೃಷಿ ಅಭಿವೃದ್ಧಿಯಲ್ಲಿ ಪ್ರಮುಖ ಕಾರ್ಯನಿರ್ವಹಿಸಲಿದೆ. ಕಡಲತೀರವನ್ನು ಪರಿಸರ ಸ್ನೇಹಿ ರೀತಿಯಲ್ಲಿ ಉತ್ತೇಜಿಸಲು ಸೂಕ್ತವಾದ ಮಾರ್ಗದರ್ಶಿ ನಿಯಮಗಳ ಮೂಲಕ, ಮೀನುಗಾರಿಕೆ ಸಮುದ್ರಕ್ಕೆ ಪ್ರವೇಶ ಮತ್ತು ಮೀನುಗಾರಿಕೆ ಪ್ರದೇಶಗಳ ಅತಿಕ್ರಮಣ ಮುಂತಾದ ಸಮಸ್ಯೆಗಳನ್ನು ಬಗೆಹರಿಸುವುದನ್ನು ನೀತಿಯು ಒತ್ತಾಯಿಸುತ್ತದೆ. ಇದರಿಂದ ಮೀನುಗಾರರ ಮತ್ತು ಮೀನು ಕೃಷಿಕರ ನಡುವೆ ಸಂಘರ್ಷವನ್ನು ತಡೆಯಬಹುದು. ದೇಶದ ಕರಾವಳಿ ನೀರಿನಲ್ಲಿ ಸುಸ್ಥಿರ ಕಡಲ ಕೃಷಿಯನ್ನು ಉತ್ತೇಜಿಸಲು ಕೃಷಿ ಸಾಮರ್ಥ್ಯ ಅಧ್ಯಯನಗಳು ಮತ್ತು ಪರಿಸರ ಪ್ರಭಾವದ ಮೌಲ್ಯಮಾಪನಗಳನ್ನು ಕೈಗೊಳ್ಳಲಾಗುತ್ತದೆ.

**ತಕ್ಷಣದ ಕೈಗೊಳ್ಳಬೇಕಾದ ಪ್ರಮುಖ ಕಾರ್ಯಗಳು ಕೆಳಗಿನಂತಿವೆ:**

- *ಕರಾವಳಿ ರಾಜ್ಯಗಳು ಮತ್ತು ಯುಟಿಗಳೊಂದಿಗೆ ಸಮಾಲೋಚಿಸಿ ಕಡಲ ಕೃಷಿಗೆ ಸೂಕ್ತವಾದ ಟೆರಿಟೋರಿಯಲ್ ಪ್ರದೇಶದ ಒಳಗಿನ ಮತ್ತು ಹೊರಗಿನ ಪ್ರದೇಶಗಳು, ಸೂಕ್ತವಾದ ಪ್ರಭೇದಗಳು, ಗುತ್ತಿಗೆ*

*ನೀತಿ ಮತ್ತು ಬೆಂಬಲ ಸೇವೆಗಳನ್ನು ಗಣನೆಗೆ ತೆಗೆದುಕೊಂಡು ಕಡಲ ಕೃಷಿಗೆ ಅಭಿವೃದ್ಧಿಗೆ ನೀಲನಕ್ಷೆಯನ್ನು ಸಿದ್ಧಪಡಿಸುವುದು.*

- *ಮರಿ ಉತ್ಪಾದನೆಗಾಗಿ ಬ್ರೂಡ್ ಬ್ಯಾಂಕುಗಳು ಮತ್ತು ವಾಣಿಜ್ಯ-ಪ್ರಮಾಣದ ಮೀನುಮರಿ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವುದನ್ನು ಉತ್ತೇಜಿಸುವುದು.*
- *ಸ್ಥಳೀಯ ತಂತ್ರಜ್ಞಾನವನ್ನು ಆಧರಿಸಿದ ಮತ್ತು ಸ್ಥಳೀಯ ಮೀನುಗಾರರ ಅಗತ್ಯತೆಗಳನ್ನು ಪೂರೈಸಲು ವೆಚ್ಚ-ಪರಿಣಾಮಕಾರಿಯಾದ ಪಂಜರ ತಯಾರಿಕೆಗಾಗಿ ಆರ್ & ಡಿ ಅನ್ನು ಬೆಂಬಲಿಸುವುದು.*

### 6.3.4 ಕಡಲ ಜಲಸಸ್ಯ ಕೃಷಿ

ಜಲಕೃಷಿ ಮತ್ತು ಸಮುದ್ರ ಜಲಕೃಷಿಯಂತೆ ದೇಶದಲ್ಲಿ ಕಡಲ ಜಲಸಸ್ಯ ಕೃಷಿಯಲ್ಲಿಯೂ ಸಹ ಅಪರಿಮಿತ ಸಾಮರ್ಥ್ಯವಿದೆ. ಜಾಗತಿಕವಾಗಿ, ಹೈಡ್ರೋಕೊಲಾಯ್ಡ್ಗಳು, ಸೌಂದರ್ಯವರ್ಧಕಗಳು ಮತ್ತು ಆಹಾರ ಪೂರಕಗಳಿಗೆ ಮತ್ತು ಸಂಭಾವ್ಯ ಜೈವಿಕ ಇಂಧನ ಮೂಲವಾಗಿ ಕಡಲ ಸಸ್ಯಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಈ ಉಪ-ವಲಯವು ಮೌಲ್ಯ ವರ್ಧನೆಗೆ ಅಪಾರ ವ್ಯಾಪ್ತಿಯನ್ನು ನೀಡುತ್ತದೆ ಮತ್ತು ದೇಶದ ಕರಾವಳಿ ಪ್ರದೇಶಗಳಲ್ಲಿನ ಆರ್ಥಿಕತೆಗೆ ಗಮನಾರ್ಹ ಕೊಡುಗೆ ನೀಡುತ್ತದೆ.

ಭಾರತದಲ್ಲಿ ಸುಮಾರು 844 ಕಡಲ ಜಲಸಸ್ಯಗಳ ಪ್ರಭೇದಗಳಿವೆ ಮತ್ತು ಸುಮಾರು 58,715 ಮೆ.ಟನ್ನಷ್ಟು ಜಲಸಸ್ಯಗಳ ಸಂಪತ್ತಿದೆ. ತಮಿಳುನಾಡು, ಗುಜರಾತ್ ಮತ್ತು ಡಿಯು ತೀರಗಳಲ್ಲಿ ಮತ್ತು ಲಕ್ಷದ್ವೀಪ ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಸುತ್ತಲೂ ಕಡಲ ಜಲಸಸ್ಯ ಹೇರಳವಾಗಿದೆ. ಮುಂಬೈ, ರತ್ನಾಗಿರಿ, ಗೋವಾ, ಕಾರವಾರ, ವರ್ಕಲಾ, ವಿಜಿಂಜಮ್ ಮತ್ತು ಪುಲಿಕಾಟ್ (ತಮಿಳುನಾಡು, ಆಂಧ್ರಪ್ರದೇಶ) ಮತ್ತು ಒರಿಸ್ಸಾದ ಚಿಲ್ಕಾ ಸುತ್ತಲೂ ಶ್ರೀಮಂತ ಕಡಲ ಜಲಸಸ್ಯಗಳ ತಾಣಗಳು ಕಂಡುಬರುತ್ತವೆ. ಆದಾಗ್ಯೂ, ನಿರಂತರ, ವಿವೇಚನೆಯಿಲ್ಲದ ಮತ್ತು ಅಸಂಘಟಿತ ಹಿಡುವಳಿಯಿಂದ ನೈಸರ್ಗಿಕ ಕಡಲ ಜಲಸಸ್ಯಗಳ ಸಂಪನ್ಮೂಲಗಳ ಕ್ಷೀಣತೆಗೆ ಕಾರಣವಾಗಿದೆ.

1980 ರ ದಶಕದ ಆರಂಭದಲ್ಲಿ ಮತ್ತು ಮಧ್ಯದಲ್ಲಿ ಕಡಲ ಜಲಸಸ್ಯದ ಕೃಷಿಯ ಆರಂಭಿಕ ಪ್ರಯೋಗವನ್ನು ನಡೆಸಲಾಗಿದ್ದರೂ, ಈ ಚಟುವಟಿಕೆಯು ಇನ್ನೂ ಜನಪ್ರಿಯವಾಗಿಲ್ಲ. ಇತರ ಮೀನುಗಾರಿಕೆ ಚಟುವಟಿಕೆಗಳಿಗಿಂತ ಭಿನ್ನವಾಗಿ, ಆಹಾರ ಉದ್ದೇಶಗಳಿಗಾಗಿ ಕಡಲ ಜಲಸಸ್ಯಕ್ಕೆ ಸ್ಥಳೀಯ ಬೇಡಿಕೆ ಅಸ್ತಿತ್ವದಲ್ಲಿಲ್ಲ. ದೇಶೀಯ ಕಡಲ ಜಲಸಸ್ಯ ಉತ್ಪಾದನೆಯನ್ನು ಸಂಪೂರ್ಣವಾಗಿ ಕೈಗಾರಿಕಾ ವಲಯದಲ್ಲಿ ಬಳಸಲಾಗುತ್ತದೆ ಮತ್ತು ಆದ್ದರಿಂದ, ಉತ್ಪಾದನೆಯು ಬಲವಾದ ಬ್ಯಾಕ್‌ವರ್ಡ್ ಮತ್ತು ಫಾರ್ವರ್ಡ್ ಸಂಪರ್ಕವನ್ನು ಬಯಸುತ್ತದೆ. ಬಳಸಲು ಸಿದ್ಧವಾದ ತಂತ್ರಜ್ಞಾನಗಳು, ಇತರ ಇನ್‌ಪುಟ್‌ಗಳ ಲಭ್ಯತೆಯನ್ನು ಮತ್ತು ಅಗತ್ಯ ಸಂಪರ್ಕಗಳನ್ನು ಅಭಿವೃದ್ಧಿಪಡಿಸಲು ನೀತಿಯು ಉದ್ದೇಶಿಸಿದೆ.

ಕಡಲ ಜಲಸಸ್ಯ ಕೃಷಿಗೆ ಸೂಕ್ತವಾದ ಪ್ರದೇಶಗಳನ್ನು ಗುಜರಾತ್, ಡಿಯು, ಲಕ್ಷದ್ವೀಪ, ತಮಿಳುನಾಡು ಮತ್ತು ಆಂಧ್ರಪ್ರದೇಶದ ಕರಾವಳಿಯಲ್ಲಿ ದೇಶದ ಸಂಶೋಧನಾ ಸಂಸ್ಥೆಗಳು ಗುರುತಿಸಿವೆ. ಕಡಲ ಜಲಸಸ್ಯ ಕೃಷಿಯನ್ನು ಉತ್ತೇಜಿಸಲು ಮತ್ತು ಮೀನುಗಾರರನ್ನು ಆಕರ್ಷಿಸಲು, ಆರಂಭದಲ್ಲಿ, ಸೆಕ್ಸುಯಲ್ ಸಂತಾನೋತ್ಪತ್ತಿ ವಿಧಾನಗಳನ್ನು ಅವಲಂಬಿಸಿರುವ ಕಡಲ ಜಲಸಸ್ಯ ಬೀಜಬ್ಯಾಂಕ್‌ಗಳನ್ನು ಪ್ರಸ್ತುತ ಅಳವಡಿಸಿಕೊಂಡಿರುವ ವ್ಯಾಪಕವಾಗಿ ಜನಪ್ರಿಯವಾಗಿರುವ ಸಸ್ಯಕ / ಅಲೈಂಗಿಕ ಪ್ರಸರಣ ವಿಧಾನಗಳಿಗೆ ಪೂರಕವಾಗಿ, ಪ್ರಸ್ತುತ ಗರಿಷ್ಠ ಕಡಲ ಜಲಸಸ್ಯ ಸಾಕಾಣಿಕೆ ನಡೆಸಲಾಗುತ್ತಿರುವ ತಮಿಳುನಾಡಿನ ಕರಾವಳಿಯಲ್ಲಿ ಸ್ಥಾಪಿಸಬಹುದಾಗಿವೆ. ನಂತರ, ಇದನ್ನು ಗುಜರಾತ್ ತೀರಗಳು ಮತ್ತು ಕರಾವಳಿಯ ಇತರ ಸ್ಥಳಗಳಿಗೆ ವಿಸ್ತರಿಸಬಹುದು. ದೊಡ್ಡ ಪ್ರಮಾಣದಲ್ಲಿ ಉತ್ತೇಜಿಸಬಹುದಾದ ಪ್ರಭೇದವೆಂದರೆ ಕಪ್ಪಾಫಿಕಸ್ ಅಲ್ವಾರೆಜಿ ಮತ್ತು ಸ್ಥಳೀಯ ಕಡಲ ಜಲಸಸ್ಯ ಸಂಭಾವ್ಯ ಪ್ರಭೇದಗಳು (ಅಗರೊಫೈಟ್‌ಗಳು ಮತ್ತು ಆಲ್ಜಿನೋಫೈಟ್‌ಗಳು).

ಕಡಲಾಚೆಯ ಪ್ರದೇಶದಲ್ಲಿ ವಿಶೇಷವಾಗಿ ಇಂಟಿಗ್ರೇಟೆಡ್ ಮಲ್ಟಿ–ಟ್ರೋಫಿಕ್ ಅಕ್ವಾಕಲ್ಚರ್ ಸಿಸ್ಟಮ್ಸ್ (ಐಎಂಟಿಎ) ನಲ್ಲಿ ಕಡಲ ಜಲಸಸ್ಯಗಳನ್ನು ಕೋಬಿಯಾದಂತಹ ಮೀನಿನ ಪ್ರಭೇದಗಳೊಂದಿಗೆ ಬೆಳೆಸಬಹುದು. ದೊಡ್ಡ ಪ್ರಮಾಣದ ಕಡಲ ಜಲಸಸ್ಯ ಕೃಷಿಯತ್ತ ಸಾಗುತ್ತಿರುವಾಗ, ಸುಸ್ಥಿರ ನಿರ್ವಹಣಾ ಯೋಜನೆಗಳು ಜಾರಿಯಲ್ಲಿಲ್ಲದಿದ್ದರೆ, ನೈಸರ್ಗಿಕ ಕಡಲ ಜಲಸಸ್ಯಗಳ ಕೊಯ್ಲು ಮಾಡುವುದನ್ನು ನಿರುತ್ಸಾಹಗೊಳಿಸಬೇಕಾಗುತ್ತದೆ. ಮೀನುಗಾರ ಮತ್ತು ಇತರ ಗ್ರಾಮೀಣ ಮಹಿಳೆಯರಿಗೆ ಜೀವನೋಪಾಯವನ್ನು ಸೃಷ್ಟಿಸಲು ಕಡಲ ಜಲಸಸ್ಯ ಸಾಕಾಣಿಕೆ ಪ್ರಮುಖ ಪಾತ್ರ ವಹಿಸುತ್ತದೆ. ತರಬೇತಿ, ಸಾರ್ವಜನಿಕ ಹಣಕಾಸು ಅವಕಾಶ ಮತ್ತು ಮಾರುಕಟ್ಟೆ ಬೆಂಬಲದ ಮೂಲಕ ಕಡಲ ಜಲಸಸ್ಯ ಉತ್ಪಾದನೆ ಮತ್ತು ಸಂಸ್ಕರಣೆಯನ್ನು ಕೈಗೊಳ್ಳಲು ಸ್ವ–ಸಹಾಯ ಗುಂಪುಗಳು / ಸಹಕಾರಿ / ಉತ್ಪಾದಕರ ಸಂಘಗಳನ್ನು ರಚಿಸಲು ಮಹಿಳೆಯರನ್ನು ಪ್ರೋತ್ಸಾಹಿಸಲಾಗುತ್ತದೆ.

**ತಕ್ಷಣದ ಕ್ರಮಕೈಗೊಳ್ಳಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಕಡಲತೀರದಲ್ಲಿ ಮತ್ತು ಕಡಲಾಚೆಯ ನೀರಿನಲ್ಲಿ, ಮತ್ತು ಇಂಟಿಗ್ರೇಟೆಡ್ ಮಲ್ಟಿ–ಟ್ರೋಫಿಕ್ ಅಕ್ವಾಕಲ್ಚರ್ (ಐಎಂಟಿಎ) ವ್ಯವಸ್ಥೆಗಳಲ್ಲಿ ಕಡಲ ಜಲಸಸ್ಯದ ಕೃಷಿಯನ್ನು ಉತ್ತೇಜಿಸುವುದು.*
- *ಕಡಲ ಜಲಸಸ್ಯ ಬೆಳೆಸಲು ಕಚ್ಚಾ ವಸ್ತುಗಳನ್ನು ಒದಗಿಸಲು ಕರಾವಳಿಯುದ್ದಕ್ಕೂ ಕಡಲ ಜಲಸಸ್ಯಗಳ ಬೀಜದ ಬ್ಯಾಂಕ್ ಸ್ಥಾಪಿಸುವುದು.*
- *ಕಡಲ ಜಲಸಸ್ಯದ ಕೃಷಿಗೆ ಮೀನುಗಾರರನ್ನು ಆಕರ್ಷಿಸಲು ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವುದು.*
- *ಕಡಲ ಜಲಸಸ್ಯದ ಕೃಷಿಯನ್ನು ಕೈಗೊಳ್ಳಲು ಕರಾವಳಿ ಪ್ರದೇಶದ ಮೀನುಗಾರರು ಮತ್ತು ಇತರ ಮಹಿಳೆಯರನ್ನು ಬೆಂಬಲಿಸುವುದು.*

- *ಕಡಲ ಜಲಸಸ್ಯದಿಂದ ಉತ್ಪನ್ನಗಳನ್ನು ತಯಾರಿಸಲು ಸಣ್ಣ ಮತ್ತು ಮಧ್ಯಮ ಗಾತ್ರದ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಉದ್ಯಮಿಗಳನ್ನು ಪ್ರೋತ್ಸಾಹಿಸುವುದು.*
- *ಉದ್ಯಮವನ್ನು ಪ್ರೋತ್ಸಾಹಿಸಲು ಉತ್ಪನ್ನಗಳ ಮಾರಾಟಕ್ಕೆ ಅನುಕೂಲ ಕಲ್ಪಿಸುವುದು.*

### *6.3.5 ಅಲಂಕಾರಿಕ ಮೀನು ಸಾಕಾಣಿಕೆ*

ಅಲಂಕಾರಿಕ ಮೀನುಗಳು ಅಂತರರಾಷ್ಟ್ರೀಯ ಮೀನು ವ್ಯಾಪಾರದಲ್ಲಿ ತುಲನಾತ್ಮಕವಾಗಿ ಸಣ್ಣ ಆದರೆ ಸಕ್ರಿಯ ಅಂಗವಾಗಿದೆ. ಅಕ್ವೇರಿಯಂ ಅನ್ನು ನಿರ್ವಹಿಸುವುದು ಬಹಳ ಜನಪ್ರಿಯ ಹವ್ಯಾಸವಾಗಿದೆ ಮತ್ತು ಅಲಂಕಾರಿಕ ಮೀನುಗಳ ಜಾಗತಿಕ ವ್ಯಾಪಾರವು ವರ್ಷಕ್ಕೆ US $ 18–20 ಬಿಲಿಯನ್ ಎಂದು ಅಂದಾಜಿಸಲಾಗಿದೆ. ಭಾರತವು ವೈವಿಧ್ಯಮಯ ಜೈವಿಕ ಸಂಪನ್ಮೂಲಗಳಿಂದಾಗಿ, ಹಲವಾರು ರೀತಿಯ ವಾಣಿಜ್ಯ ಮತ್ತು ಉತ್ತಮ ಅಲಂಕಾರಿಕ ಮೀನಿನ ಸಂಪನ್ಮೂಲಗಳನ್ನು ಹೊಂದಿದೆ. ಅಲಂಕಾರಿಕ ಮೀನುಗಾರಿಕೆಗೆ ಸೂಕ್ತವಾದ ಸುಮಾರು 374 ಸಿಹಿನೀರಿನ ಪ್ರಭೇದಗಳು ಮತ್ತು 300 ಕ್ಕೂ ಹೆಚ್ಚು ಸಮುದ್ರ ಪ್ರಭೇದಗಳಿವೆ.

ಅಲಂಕಾರಿಕ ಮೀನುಗಾರಿಕೆಯ ದೇಶೀಯ ಮಾರುಕಟ್ಟೆಯ ಮೌಲ್ಯ ಸುಮಾರು ರೂ. 500 ಕೋಟಿ ಎಂದು ಅಂದಾಜಿಸಲಾಗಿದ್ದು, ಈ ಚಟುವಟಿಕೆ ಪಶ್ಚಿಮ ಬಂಗಾಳ, ತಮಿಳುನಾಡು, ಮಹಾರಾಷ್ಟ್ರ, ಈಶಾನ್ಯ ರಾಜ್ಯಗಳು ಮತ್ತು ದ್ವೀಪಗಳಲ್ಲಿನ ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಸೀಮಿತವಾಗಿದೆ. ಅಲಂಕಾರಿಕ ಮೀನುಗಳ ಉತ್ಪಾದನೆಯನ್ನು ಹೆಚ್ಚಿಸಲು ದೇಶೀಯ ಘಟಕಗಳನ್ನು ಸ್ಥಾಪಿಸಲು ಗ್ರಾಮೀಣ ಜೀವನೋಪಾಯವನ್ನು ಹೆಚ್ಚಿಸಲು ಸರಬರಾಜು ಸರಪಳಿಯ ಅಭಿವೃದ್ಧಿ ಮತ್ತು ಆವಾಸಸ್ಥಾನಗಳ ನಿರ್ವಹಣೆಗೆ ಈ ನೀತಿಯು ಉತ್ತೇಜನ ನೀಡುತ್ತದೆ. ಈ ನೀತಿಯು ಅಕ್ವೇರಿಯಂ ಅನ್ನು ನಿರ್ವಹಿಸುವುದರ ಪ್ರಯೋಜನಗಳ ಬಗ್ಗೆ ಗ್ರಾಹಕರ ಶಿಕ್ಷಣವನ್ನು ಉತ್ತೇಜಿಸುತ್ತದೆ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಅಕ್ವೇರಿಯಾವನ್ನು ಸ್ಥಾಪಿಸಲು ಉತ್ತೇಜಿಸುತ್ತದೆ. ಮಹಿಳೆಯರು ಮತ್ತು ಯುವಕರಿಗೆ ಸೂಕ್ತ ಕ್ರಮಗಳ ಮೂಲಕ ಪ್ರೋತ್ಸಾಹ ನೀಡಲಾಗುವುದು.

ಪ್ರಸ್ತುತ, ಅಂದಾಜು 85 ಪ್ರತಿಶತದಷ್ಟು ಅಲಂಕಾರಿಕ ಮೀನುಗಳನ್ನು ನೈಸರ್ಗಿಕ ಸಂಪನ್ಮೂಲಗಳಿಂದ ಮುಖ್ಯವಾಗಿ ಈಶಾನ್ಯ ರಾಜ್ಯಗಳ ಬೆಟ್ಟದ ತೊರೆಗಳಿಂದ ಅಥವಾ ಕರಾವಳಿಯ ಕೆಲವು ಪ್ರದೇಶಗಳಲ್ಲಿ ಮತ್ತು ಎರಡು ದ್ವೀಪ ಪ್ರಾಂತ್ಯಗಳಲ್ಲಿರುವ ಪ್ರಮುಖ ಹವಳದ ಆವಾಸಸ್ಥಾನಗಳಿಂದ ಹಿಡಿಯಲಾಗುತ್ತಿದೆ. ಈ ರೀತಿ ನೈಸರ್ಗಿಕ ಸಂಪನ್ಮೂಲಗಳಿಂದ ಹಿಡಿದ ಮೀನಿಗೆ ಹೆಚ್ಚಿನ ಬೆಲೆ ದೊರೆಯುವುದರಿಂದ ಅವುಗಳ ಸಂತತಿಯ ಮೇಲೆ ತೀವ್ರ ಒತ್ತಡವಿದೆ ಮತ್ತು ಇದು ಹೆಚ್ಚುತ್ತಿದೆ. ನೀತಿ ಮಾರ್ಗದರ್ಶಿಗಳು ಅಂತಹ ಸಂಪನ್ಮೂಲಗಳನ್ನು ಸುಸ್ಥಿರವಾಗಿ ಹಿಡುವಳಿ ಮಾಡುವುದನ್ನು ಖಚಿತಪಡಿಸುತ್ತದೆ ಮತ್ತು ನಿಸರ್ಗದ ಅಲಂಕಾರಿಕ ಮೀನಿನ ಜರ್ಮ್ ಪ್ಲಾಸಂನ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯ ನಿಯಂತ್ರಣಗಳನ್ನು ಜಾರಿಗೆ ತರಲಾಗುತ್ತದೆ.

**ತಕ್ಷಣ ಕ್ರಮಕೈಗೊಳ್ಳಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಅಲಂಕಾರಿಕ ಮೀನುಗಳಿಗಾಗಿ ಸಮಗ್ರ ಸರಬರಾಜು ಸರಪಳಿಯನ್ನು ಸ್ಥಾಪಿಸುವುದು.*
- *ವಿದೇಶದಿಂದ ಬ್ರೂಡ್‌ಸ್ಟಾಕ್ ಪಡೆಯಲು ಅನುಕೂಲ ಒದಗಿಸುವುದು.*
- *ಖರೀದಿ ಖಾತರಿ ವ್ಯವಸ್ಥೆಗಳೊಂದಿಗೆ ಮನೆಗಳಲ್ಲಿ ಮೀನುಮರಿ ಸಾಕಲು ಅನುಕೂಲವಾಗುವಂತೆ ವಾಣಿಜ್ಯ-ಪ್ರಮಾಣದ ಸಂತಾನೋತ್ಪತ್ತಿ ಮತ್ತು ಸರಬರಾಜುದಾರರನ್ನು ಪ್ರೋತ್ಸಾಹಿಸುವುದು.*
- *ಮನೆಗಳು ಮತ್ತು ಕೆಲಸದ ಸ್ಥಳಗಳಲ್ಲಿ ಅಕ್ವೇರಿಯಾವನ್ನು ಸ್ಥಾಪಿಸಲು ಉತ್ತೇಜಿಸುವುದು.*
- *ಮಧ್ಯಮ ಮತ್ತು ಸಣ್ಣ ಪ್ರಮಾಣದ ಅಲಂಕಾರಿಕ ಉದ್ಯಮಗಳನ್ನು ಸ್ಥಾಪಿಸಲು ಗ್ರಾಮೀಣ ಮಹಿಳೆಯರು ಮತ್ತು ಯುವಕರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವುದು.*
- *ಅಲಂಕಾರಿಕ ಮೀನುಗಾರಿಕೆಯ ಅಭಿವೃದ್ಧಿಗೆ ಅಕ್ವೇರಿಯಾ ಮತ್ತು ಇತರ ಸಾಮಗ್ರಿಗಳನ್ನು ನಿರ್ಮಿಸಲು ಮಧ್ಯಮ ಮತ್ತು ಸಣ್ಣ-ಪ್ರಮಾಣದ ಉದ್ಯಮಗಳನ್ನು ಬೆಂಬಲಿಸುವುದು.*

### *6.3.6 ಒಳನಾಡಿನ ಲವಣಯುಕ್ತ ಮಣ್ಣಿನ ಉಪಯುಕ್ತ ಬಳಕೆ:*

ದೇಶದಲ್ಲಿ ಸುಮಾರು 6.73 ಮಿಲಿಯನ್ ಹೆಕ್ಟೇರ್ ವಿಸ್ತಾರದ ಲವಣಯುಕ್ತ ಮಣ್ಣಿನ ಪ್ರದೇಶವಿದ್ದು, ಇದರಲ್ಲಿ ಗುಜರಾತ್ (2.23 mha), ಉತ್ತರ ಪ್ರದೇಶ (1.37 mha), ಮಹಾರಾಷ್ಟ್ರ (0.61 mha), ಪಶ್ಚಿಮ ಬಂಗಾಳ (0.44 mha) ಮತ್ತು ರಾಜಸ್ಥಾನ (0.38 mha) ರಾಜ್ಯಗಳು ಒಟ್ಟಾರೆ ಶೇ. 75 ರಷ್ಟು ದೇಶದ ಲವಣಯುಕ್ತ ಮತ್ತು ಸೋಡಿಕ್ ಮಣ್ಣಿನ ಪ್ರದೇಶವನ್ನು ಹೊಂದಿದೆ. ಅಂತಹ ಲವಣಯುಕ್ತ ಮಣ್ಣನ್ನು ಹೊಂದಿರುವ ಇತರ ರಾಜ್ಯಗಳಲ್ಲಿ ಪಂಜಾಬ್ ಮತ್ತು ಹರಿಯಾಣ ಸೇರಿವೆ. ನೀರಾವರಿ ಕಾಲುವೆ ನೀರನ್ನು ನೀರಾವರಿ ಉದ್ದೇಶಗಳಿಗಾಗಿ ಅತಿಯಾಗಿ ಬಳಸುವುದು ಮಣ್ಣಿನ ಲವಣಾಂಶದ ಹೆಚ್ಚಳ ಪ್ರಮುಖ ಕಾರಣಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಲವಣಯುಕ್ತ ಮಣ್ಣು ಉತ್ಪಾದಕತೆಯನ್ನು ತಗ್ಗಿಸುವುದಲ್ಲದೆ, ಕೃಷಿ ಮತ್ತು ಕಟ್ಟಡ ನಿರ್ಮಾಣದಂತಹ ಇತರ ಉದ್ದೇಶಗಳಿಗಾಗಿ ಮಣ್ಣನ್ನು ನಿಷ್ಪ್ರಯೋಜಕವಾಗಿಸುತ್ತದೆ. ಆದಾಗ್ಯೂ, ಫಿನ್ ಮತ್ತು ಶೆಲ್ ಮೀನುಗಳ ಕೃಷಿಯ ಮೂಲಕ ಅಂತಹ ಭೂಮಿಯನ್ನು ಬಳಸಿಕೊಳ್ಳಲು ಪರೀಕ್ಷಿತ ತಂತ್ರಜ್ಞಾನಗಳು ಲಭ್ಯವಿದೆ. ಇಂತಹ ತಂತ್ರಜ್ಞಾನಗಳು ಲವಣಯುಕ್ತ ಮಣ್ಣಿಗೆ ಸೂಕ್ತವಾಗಿರುವುದನ್ನು ಹರಿಯಾಣ, ಪಂಜಾಬ್, ರಾಜಸ್ಥಾನ ಮತ್ತು ಉತ್ತರಪ್ರದೇಶಗಳಲ್ಲಿ ಮೀನು ಕೃಷಿಕರು ಯಶಸ್ವಿಯಾಗಿ ಟೈಗರ್ ಸೀಗಡಿ (ಪಿ. ಮೊನೊಡಾನ್) ಮತ್ತು ಪೆಸಿಫಿಕ್ ವೈಟ್‌ಲೆಗ್ ಸೀಗಡಿ (ಎಲ್. ವೆನಾಮಿ)ಗಳನ್ನು ಬೆಳೆಯುವುದರ ಮೂಲಕ ತೋರಿಸಿದ್ದಾರೆ. ಕರಾವಳಿ ಲವಣಯುಕ್ತ ಪ್ರದೇಶಗಳಿಗಿಂತ ಭಿನ್ನವಾಗಿ, ಒಳನಾಡಿನ ಲವಣಯುಕ್ತ ಪ್ರದೇಶಗಳು ಕಡಿಮೆ ಪರ್ಯಾಯ ಉಪಯೋಗಗಳನ್ನು ಹೊಂದಿರುವುದರಿಂದ ಅಲ್ಪ ಪ್ರಮಾಣದ ಪರಿಸರದ ಮೇಲಿನ ಪರಿಣಾಮವನ್ನು ಹೊಂದಿದೆ. ಆದಾಗ್ಯೂ, ಜಲಕೃಷಿ ತ್ಯಾಜ್ಯನೀರನ್ನು ವಿಲೇವಾರಿ ಮಾಡುವುದರಿಂದ

ಯಾವುದೇ ದೀರ್ಘಕಾಲೀನ ಪರಿಣಾಮಗಳನ್ನು ತಡೆಗಟ್ಟಲು ಸರಿಯಾದ ಕ್ರಮಗಳ ಅಗತ್ಯವಿರುತ್ತದೆ. ಪ್ರಮುಖ ನೀತಿ ಉಪಕ್ರಮವು ಸಂಭಾವ್ಯ ಪ್ರದೇಶಗಳ ಗುರುತಿಸುವಿಕೆ ಮತ್ತು ಜಲಕೃಷಿಗೆ ಅವುಗಳ ಹಂಚಿಕೆ; ಅಗತ್ಯವಿರುವ ಕಡೆ ಅಂತರ್ಜಲವನ್ನು ಸುಸ್ಥಿರವಾಗಿ ಬಳಸುವುದು ಸೇರಿದಂತೆ ರೈತರಿಗೆ ಉತ್ತಮ ತಂತ್ರಜ್ಞಾನಗಳನ್ನು ನೀಡುವುದು; ವಿಸ್ತರಣೆ ಬೆಂಬಲ ಮತ್ತು ಅಗತ್ಯ ಸಹಕಾರ ನೀಡುವುದು; ಅಪಾಯವನ್ನು ಕಡಿಮೆ ಮಾಡಲು ಸೀ ಬಾಸ್ ಮತ್ತು ಮಲ್ಲೆಟ್‌ಗಳಂತಹ ಸಂಭಾವ್ಯ ಫಿನ್‌ಫಿಶ್ ಜಾತಿಗಳನ್ನು ಅಳವಡಿಸುವುದು ಜಲಕೃಷಿಯ ತ್ಯಾಜ್ಯ ನೀರನ್ನು ಸಂಸ್ಕರಿಸಲು ಮತ್ತು ವಿಲೇವಾರಿ ಮಾಡಲು ಉತ್ತಮ ಕಾರ್ಯವಿಧಾನಗಳು; ಮತ್ತು ಪೆಸಿಫಿಕ್ ವೈಟ್‌ಲೆಗ್ ಸೀಗಡಿ, ಮಲ್ಲೆಟ್ ಮತ್ತು ಸೀಬಾಸ್‌ಗಳ ಮರಿ ಮತ್ತು ಆಹಾರ ಉತ್ಪನ್ನಗಳ ಮಾರಾಟದಲ್ಲಿ ನೆರವಿಗಾಗಿ ಮುಂದೆ(Forward) ಮತ್ತು ಹಿಂದೆ (Backward) ಸಂಪರ್ಕಗಳನ್ನು ಸ್ಥಾಪಿಸುವುದು ಇವುಗಳನ್ನು ಒಳಗೊಂಡಿರುತ್ತದೆ. ಜಲಕೃಷಿಗೆ ಸೂಕ್ತವಾದ ಲವಣಯುಕ್ತ ಮಣ್ಣಿನ ವಿಶಾಲ ಪ್ರದೇಶಗಳು ಲಭ್ಯವಿದ್ದಲ್ಲಿ, ಪಿಪಿಪಿ ವ್ಯವಸ್ಥೆಯ ಮೂಲಕ ವಿಶೇಷ ಜಲಕೃಷಿ ವಲಯಗಳ ಅಭಿವೃದ್ಧಿಯನ್ನು ಸಹ ಪರಿಗಣಿಸಲಾಗುತ್ತದೆ.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಜಲಕೃಷಿ ಸಂಭಾವ್ಯ ಪ್ರದೇಶಗಳನ್ನು ಗುರುತಿಸುವುದು ಮತ್ತು ಕ್ಲಸ್ಟರ್ ಆಧಾರದ ಮೇಲೆ ಅಗತ್ಯ ಬೆಂಬಲ ಸೇವೆಗಳೊಂದಿಗೆ ಸೂಕ್ತವಾದ ಜಲಕೃಷಿ ತೆಗೆದುಕೊಳ್ಳಲು ಅವುಗಳನ್ನು ರೈತರಿಗೆ ಹಂಚಿಕೆ ಮಾಡುವುದು.*
- *ಲವಣಯುಕ್ತ ಪ್ರದೇಶಗಳಲ್ಲಿ ಸೀಗಡಿ ಸಾಕಾಣಿಕೆ ಕೈಗೊಳ್ಳುವ ರೈತರಿಗೆ ಗುಣಮಟ್ಟದ ಮರಿ ಮತ್ತು ಆಹಾರದ ಲಭ್ಯತೆಯನ್ನು ಒದಗಿಸುವುದು.*
- *ರೈತರ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿಗೆ ಸಹಕರಿಸುವುದು ಮತ್ತು ಉತ್ಪನ್ನದ ಮಾರಾಟದಲ್ಲೂ ಸಹಕರಿಸುವುದು.*

### *6.3.7 ಜಲವಾಸಿ ಪ್ರಾಣಿಗಳ ಆರೋಗ್ಯ ಮತ್ತು ಜೈವಿಕ ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು*

ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ವೈಜ್ಞಾನಿಕ ಮೀನು ಸಾಕಾಣಿಕೆ ಪದ್ಧತಿಗಳು ದೇಶದಲ್ಲಿ ಪ್ರಾರಂಭವಾದ ನಂತರ ಜಲಕೃಷಿಯ ಬೆಳವಣಿಗೆ ಅಸಾಧಾರಣವಾಗಿದೆ. ಮೀನಿನ ಪ್ರಭೇದಗಳ ಸಾಮಾನ್ಯ ಆರೋಗ್ಯ ನಿರ್ವಹಣಾ ಕಾಳಜಿಗಳಲ್ಲದೆ, ಸಿಹಿನೀರಿನ ಮೀನುಗಳಲ್ಲಿನ ಎಪಿಜೂಟಿಕ್ ಅಲ್ಸರೇಟಿವ್ ಸಿಂಡ್ರೋಮ್ (ಇಯುಎಸ್) ಮತ್ತು ಸೀಗಡಿ ಜಲಚರಗಳಲ್ಲಿನ ವೈಟ್ ಸ್ಪಾಟ್ ಸಿಂಡ್ರೋಮ್ ಕಾಯಿಲೆ (ಡಬ್ಲ್ಯುಎಸ್‌ಎಸ್ಡಿ)ಗಳು ಈ ಹಿಂದೆ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಸೀಗಡಿ/ಮೀನಿನ ಮರಣಗಳಿಗೆ ಪ್ರಮುಖ ಕಾರಣಗಳಾಗಿವೆ. ಜಲಕೃಷಿಯು ಮುಂಬರುವ ವರ್ಷಗಳಲ್ಲಿ ಹೆಚ್ಚಿನ ಬೆಳವಣಿಗೆಗೆ ಮತ್ತು ಜನರಿಗೆ ಆಹಾರ

ಮತ್ತು ಪೌಷ್ಠಿಕಾಂಶದ ಅಗತ್ಯಗಳನ್ನು ಪೂರೈಸಲು ಶಕ್ತವಾಗಿರುವುದರಿಂದ ಆರೋಗ್ಯ ನಿರ್ವಹಣೆ ಸೇರಿದಂತೆ ಜಲಕೃಷಿ ವ್ಯವಸ್ಥೆಯ ಎಲ್ಲಾ ಅಂಶಗಳನ್ನು ಸಮರ್ಪಕವಾಗಿ ನೋಡಿಕೊಳ್ಳುವುದು ಸಹ ಅಗತ್ಯವಾಗಿದೆ.

ಇತ್ತೀಚಿನ ದಿನಗಳಲ್ಲಿ, ತೀವ್ರ ಸಾಂದ್ರತೆಯ ಜಲಕೃಷಿ, ವಿದೇಶದಿಂದ ಯೋಜಿತವಲ್ಲದ ರೀತಿಯಲ್ಲಿ ಮೀನು/ಸೀಗಡಿ ತಂದು ಸಾಕಾಣಿಕೆ ಮಾಡುತ್ತಿರುವುದು ಮತ್ತು ಜೀವಂತ ಜಲ ಪ್ರಾಣಿಗಳ ಅನಿಯಂತ್ರಿತ ಟ್ರಾನ್ಸ್ ಬೌಂಡರಿ ಚಲನೆಯು ಡಬ್ಲ್ಯುಎಸ್ಎಸ್‌ಡಿಯಂತಹ ಅನೇಕ ಸಾಂಕ್ರಾಮಿಕ ರೋಗಗಳ ಹರಡುವಿಕೆಗೆ ಪ್ರಮುಖ ಕಾರಣಗಳಾಗಿವೆ. ಇದಲ್ಲದೆ, ಅಸಮರ್ಪಕ ವೈಜ್ಞಾನಿಕ ಜ್ಞಾನ ಮತ್ತು ಅಂತಹ ಆಕಸ್ಮಿಕಗಳನ್ನು ನಿಭಾಯಿಸುವಲ್ಲಿ ಕೌಶಲ್ಯ ಮತ್ತು ಸಾಮರ್ಥ್ಯಗಳ ಕೊರತೆಗಳು ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಸಿವೆ. ಜಲ ಪ್ರಾಣಿಗಳ ಆರೋಗ್ಯ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಇತ್ತೀಚಿನ ವರ್ಷಗಳಲ್ಲಿ ಅನೇಕ ಪರಿಹಾರ ಕ್ರಮಗಳು, ಪ್ರೋಟೋಕಾಲ್ಗಳು ಮತ್ತು ಅಭ್ಯಾಸಗಳನ್ನು ಅಭಿವೃದ್ಧಿಪಡಿಸಲಾಗಿದ್ದರೂ, ಉತ್ತಮ ಜಲಕೃಷಿ ನಿರ್ವಹಣಾ ಅಭ್ಯಾಸಗಳು, ಜಲಕೃಷಿ ವ್ಯವಸ್ಥಾಪಕರು ಮತ್ತು ಕಾರ್ಮಿಕರ ಸುಧಾರಿತ ಕೌಶಲ್ಯ ಮತ್ತು ಸಾಮರ್ಥ್ಯಗಳನ್ನು ಒಳಗೊಂಡ ಹೆಚ್ಚು ಸಂಘಟಿತ ಪ್ರಯತ್ನಗಳು, ರಾಷ್ಟ್ರೀಯ ಜಲವಾಸಿ ಪ್ರಾಣಿಗಳ ಆರೋಗ್ಯ ಮೇಲ್ವಿಚಾರಣೆ ಮತ್ತು ವರದಿ ವ್ಯವಸ್ಥೆ, ರೋಗ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಸಿದ್ಧತೆ, ಜಲವಾಸಿ ಪ್ರಾಣಿಗಳ ಆರೋಗ್ಯ ನಿರ್ವಹಣೆಗೆ ಆದ್ಯತೆಯ ಸಂಶೋಧನಾ ಅವಶ್ಯಕತೆಗಳು, ಯೋಗ್ಯ ರೋಗನಿರೋಧಕ ಮತ್ತು ರೋಗ ನಿಯಂತ್ರಣ ಕ್ರಮಗಳು, ನೈರ್ಮಲ್ಯ ಮತ್ತು ಫೈಟೊ–ನೈರ್ಮಲ್ಯ ಅಂಶಗಳು, 'ಆಮದು ಅಪಾಯದ ಮೌಲ್ಯಮಾಪನ'ದ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಸುಧಾರಿತ ಸಾಮರ್ಥ್ಯ ಮತ್ತು ಅಂತಿಮವಾಗಿ ಪರಿಣಾಮಕಾರಿ ಸಮುದಾಯ ನೆಟ್‌ವರ್ಕಿಂಗ್ ಗಳು ಪರಿಸ್ಥಿತಿಯನ್ನು ಸುಧಾರಿಸಲು ಅಗತ್ಯವಾಗಿದೆ.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳಲ್ಲಿ ಇವುಗಳು ಒಳಗೊಂಡಿವೆ:**

- *ಪೂರ್ವ ಎಚ್ಚರಿಕೆ ವ್ಯವಸ್ಥೆಯನ್ನು ಸ್ಥಾಪಿಸುವುದು, ಅಪಾಯದ ಮೌಲ್ಯಮಾಪನ ನಡೆಸುವುದು, ಕಣ್ಗಾವಲು ಮತ್ತು ಆಕಸ್ಮಿಕ ಯೋಜನೆಗಳನ್ನು ಸ್ಥಾಪಿಸುವುದು ಮತ್ತು ರೋಗ ಏಕಾಏಕಿ ಸಂಭವಿಸಿರುವ ಬಗ್ಗೆ ದೃಢ ವರದಿ ಮಾಡುವುದು.*
- *ರಾಷ್ಟ್ರೀಯ ಮತ್ತು ರಾಜ್ಯ ನಿಯಂತ್ರಕ ಸಾಮರ್ಥ್ಯಗಳನ್ನು ಬಲಪಡಿಸುವುದು.*
- *ಜಲವಾಸಿ ಪ್ರಾಣಿಗಳ ಆರೋಗ್ಯ ನಿರ್ವಹಣೆಗೆ ಉತ್ತಮ ಅಭ್ಯಾಸಗಳನ್ನು ಉತ್ತೇಜಿಸುವುದು.*
- *ಕ್ವಾರಂಟೈನ್ ಸೌಕರ್ಯ (ಸಾರ್ವಜನಿಕ ವಲಯದಲ್ಲಿ) ಮತ್ತು ಜಲವಾಸಿ ಪ್ರಾಣಿ ಆರೋಗ್ಯ ಪ್ರಯೋಗಾಲಯಗಳು ಮತ್ತು ರೋಗ ನಿರ್ಣಯ ಸಾಮರ್ಥ್ಯ ವಿಷಯದಲ್ಲಿ ಮೂಲಭೂತ ಸೌಕರ್ಯಗಳನ್ನು ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಸ್ಥಾಪಿಸುವುದು.*
- *ಸಂಶೋಧನೆ ಮತ್ತು ಅಭಿವೃದ್ಧಿ ಅಗತ್ಯಗಳನ್ನು ಬೆಳೆಸುವುದು (ಜಲ ಪ್ರಾಣಿಗಳ ಆರೋಗ್ಯ ನಿರ್ವಹಣೆಯಲ್ಲಿ ಪಿಪಿಪಿ ಅಭಿವೃದ್ಧಿ ಸೇರಿದಂತೆ).*

- *ಜಲವಾಸಿ ಪ್ರಾಣಿಗಳ ಆರೋಗ್ಯ ನಿರ್ವಹಣೆಯಲ್ಲಿ ಟ್ರಾನ್ಸ್‌ಬೌಂಡರಿ ಸಮಸ್ಯೆಗಳ ಅಪಾಯಗಳನ್ನು ಕಡಿಮೆ ಮಾಡಲು ಪ್ರಾದೇಶಿಕ ಸಮನ್ವಯಕ್ಕಾಗಿ ಕಾರ್ಯವಿಧಾನಗಳನ್ನು ಸ್ಥಾಪಿಸುವುದು.*
- *ಎಲ್ಲಾ ಹಂತಗಳಲ್ಲಿ ಸಾಮರ್ಥ್ಯಗಳನ್ನು (ಮಾನವ ಸಂಪನ್ಮೂಲ) ಅಭಿವೃದ್ಧಿ ಪಡಿಸುವುದು.*
- *ಐಸಿಎಆರ್ ಸಂಸ್ಥೆಗಳು, ರಾಜ್ಯ ಮೀನುಗಾರಿಕೆ ಇಲಾಖೆಗಳ ಮತ್ತು ಮೀನುಗಾರಿಕಾ ಕಾಲೇಜುಗಳ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಮೀನು ರೋಗ ಮತ್ತು ಆರೋಗ್ಯ ಮೇಲ್ವಿಚಾರಣಾ ಜಾಲವನ್ನು ಬಲಪಡಿಸುವುದು.*
- *ನೆಟ್‌ವರ್ಕಿಂಗ್ ಮತ್ತು ಮಾಹಿತಿ ಪ್ರಸಾರಕ್ಕಾಗಿ ಯೋಗ್ಯ ಕಾರ್ಯವಿಧಾನಗಳನ್ನು ರೂಪಿಸುವುದು.*

## 6.4 ಮೂಲಭೂತ ಸೌಕರ್ಯ

ಭಾರತದಲ್ಲಿ ಮೀನುಗಾರಿಕೆ ಬಂದರುಗಳು (ಎಫ್‌ಹೆಚ್) ಮತ್ತು ಮೀನುಗಾರಿಕೆ ಇಳಿದಾಣ ಕೇಂದ್ರಗಳನ್ನು (ಎಫ್‌ಎಲ್‌ಸಿ) ಅರವತ್ತರ ದಶಕದ ಮಧ್ಯದಿಂದ ನಿರ್ಮಿಸಲು ಪ್ರಾರಂಭಿಸಲಾಯಿತು. ಮತ್ತು ಹಿಂದಿನ ದಶಕಗಳಲ್ಲಿ ಹೆಚ್ಚಿನ ಸಂಖ್ಯೆಯ ಪ್ರಮುಖ ಮತ್ತು ಸಣ್ಣ ಬಂದರುಗಳನ್ನು ಮತ್ತು ಇಳಿದಾಣಗಳನ್ನು ನಿರ್ಮಿಸಲಾಗಿದೆ. ಆದಾಗ್ಯೂ, ಹೆಚ್ಚುತ್ತಿರುವ ದೋಣಿಗಳ ಸಂಖ್ಯೆಗಳು ಮತ್ತು ಗಾತ್ರಗಳು ಇಲ್ಲಿಯವರೆಗೆ ರಚಿಸಲಾದ ಸೌಲಭ್ಯಗಳನ್ನು ಮೀರಿಸಿದೆ ಮತ್ತು ಪ್ರಸ್ತುತ ಮೂಲಭೂತ ಸೌಕರ್ಯವು ದೇಶದ ಶೇಕಡಾ 25–30ರಷ್ಟು ದೋಣಿಗಳ ಅಗತ್ಯತೆಯನ್ನು ಮಾತ್ರ ಪೂರೈಸುತ್ತದೆ ಎಂದು ಅಂದಾಜಿಸಲಾಗಿದೆ.

ಈ ಪರಿಸ್ಥಿತಿಯು ಲ್ಯಾಂಡಿಂಗ್ ಪಾಯಿಂಟ್‌ಗಳಲ್ಲಿ ದೋಣಿಗಳ ದಟ್ಟಣೆಯನ್ನು ತಂದಿದೆ ಮತ್ತು ಹಿಡಿದ ಮೀನನ್ನು ಲೋಡ್ ಮಾಡುವಲ್ಲಿ ಮತ್ತು ನಂತರದ ಮೀನುಗಾರಿಕೆ ಪ್ರವಾಸಗಳಿಗೆ ದೋಣಿಗಳನ್ನು ಸಿದ್ದಪಡಿಸಲು ವಿಳಂಬವಾಗಿದೆ. ಇದಕ್ಕಿಂತ ಹೆಚ್ಚಾಗಿ ಮೀನುಗಾರಿಕೆ ಬಂದರು ಮತ್ತು ಇಳಿದಾಣಗಳಲ್ಲಿ ನೈರ್ಮಲ್ಯತೆಯ ದೃಷ್ಟಿಯಿಂದ ಸೌಲಭ್ಯಗಳ ಕೊರತೆ ಕಾಡುತ್ತಿದೆ. ಒಟ್ಟಾರೆಯಾಗಿ, ಈ ಎಲ್ಲಾ ನ್ಯೂನತೆಗಳು ಮೀನುಗಳು ಹೆಚ್ಚಾಗಿ ಹಾಳಾಗಲು ಕಾರಣವಾಗುತ್ತವೆ.

ಮೀನುಗಳನ್ನು ಹಿಡಿದು ಹಡಗಿನಲ್ಲಿ ಇಳಿಸಿದ ಕ್ಷಣದಿಂದ ಹಿಡುವಳಿ ನಂತರದ ಚಟುವಟಿಕೆಗಳು ಪ್ರಾರಂಭವಾಗುತ್ತದೆ. ಈ ನೀತಿಯು ತುರ್ತು ವಿಷಯವಾಗಿ, ಇದುವರೆಗೆ ಸ್ಥಾಪಿಸಲಾದ ಸಂಪೂರ್ಣ ಮೂಲಭೂತ ಸೌಕರ್ಯ ಸೌಲಭ್ಯಗಳು ಮತ್ತು ಕ್ಷೇತ್ರದ ಅಗತ್ಯತೆಗಳನ್ನು ಪೂರೈಸಲು ಅವುಗಳ ಆಧುನೀಕರಣದ ಬಗ್ಗೆ ಗಮನ ಹರಿಸಲಿದೆ. ಮೀನುಗಳ ಮಾಲಿನ್ಯ ಅಥವಾ ಹಾಳಾಗುವುದನ್ನು ತಪ್ಪಿಸುವ ರೀತಿಯಲ್ಲಿ ದೋಣಿಗಳನ್ನು ನಿರ್ವಹಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳುವ ವಿಧಾನಗಳ ಬಗ್ಗೆಯೂ ನೀತಿಯು ಪರಿಶೀಲಿಸುತ್ತದೆ. ಇಡೀ ದೇಶದ ಮೂಲಸೌಕರ್ಯ ಅಗತ್ಯತೆಗಳಿಗಾಗಿ ಮಾಸ್ಟರ್ ಪ್ಲ್ಯಾನ್ ಆಧರಿಸಿ, ಅಗತ್ಯವಿರುವ ಕಡೆ ಹೆಚ್ಚುವರಿ ಮೂಲಭೂತ ಸೌಲಭ್ಯಗಳನ್ನು ರಚಿಸಲಾಗುವುದು ಇದರಿಂದ ಮೀನುಗಾರಿಕಾ

ದೋಣಿಗಳಿಗೆ ಸಾಕಷ್ಟು ಲ್ಯಾಂಡಿಂಗ್ ಮತ್ತು ಬೆರ್ಥಿಂಗ್ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಏಂಗಡಣೆ, ಶುಚಿಗೊಳಿಸುವಿಕೆ, ಹರಾಜು ಮತ್ತು ಪ್ಯಾಕಿಂಗ್ ಮತ್ತು ಇತರ ಮೂಲಭೂತ ಸೌಕರ್ಯ ಅಗತ್ಯಗಳಾದ ಶುದ್ಧ ಕುಡಿಯುವ ನೀರಿನ ಲಭ್ಯತೆ ಮತ್ತು ಗುಣಮಟ್ಟದ ಮಂಜುಗಡ್ಡೆ ಈ ಎಲ್ಲಾ ಸೌಲಭ್ಯಗಳನ್ನು ಮಾಸ್ಟರ್ ಪ್ಲ್ಯಾನ್ ಗಣನೆಗೆ ತೆಗೆದುಕೊಳ್ಳುತ್ತದೆ. ಸರ್ಕಾರಿ, ಖಾಸಗಿ, ಸರ್ಕಾರಿ–ಖಾಸಗಿಗಳ ಸಮನ್ವಯ ಅನುದಾನ ನೀಡಿಕೆಯನ್ನು ಗಮನದಲ್ಲಿರಿಸಿಕೊಂಡು ಬಿಲ್ಡ್– ಓನ್– ಆಪರೇಟ್ (BOO), ಬಿಲ್ಡ್– ಆಪರೇಟ್ ಟ್ರಾನ್ಸ್‌ಫರ್ (BOT), ಬಿಲ್ಡ್– ಓನ್– ಆಪರೇಟ್– ಟ್ರಾನ್ಸ್‌ಫರ್ (BOOT) ಮೊದಲಾದ ಅನುಷ್ಠಾನ ವಿಧಾನಗಳ ಕುರಿತು ನೀತಿಯು ಪರಿಶೀಲಿಸಲಿದೆ.

ಮೀನುಗಾರಿಕೆ ಬಂದರು ಮತ್ತು ಇಳಿದಾಣಗಳು ಸಮುದ್ರದಲ್ಲಿ ಹಿಡಿಯುವ ಮೀನುಗಾರಿಕೆಯ ನರ ಕೇಂದ್ರವಾಗಿರುವುದರಿಂದ ಮುಂದಿನ (Forward) ಮತ್ತು ಹಿಂದಿನ (Backward) ಸಂಪರ್ಕಗಳು ಕೂಡಿಕೊಳ್ಳುತ್ತವೆ. ಇದು ರಾಷ್ಟ್ರೀಯ ಮೀನುಗಾರಿಕೆ ಬಂದರು ಪ್ರಾಧಿಕಾರವನ್ನು ಸ್ಥಾಪಿಸುವ ಸರ್ಕಾರದ ಪ್ರಯತ್ನವಾಗಿರುತ್ತದೆ ಮತ್ತು ಮಧ್ಯಂತರ ಅವಧಿಯಲ್ಲಿ ಮಾಸ್ಟರ್‌ಪ್ಲಾನ್ ಮತ್ತು ಮೂಲಭೂತ ಸೌಕರ್ಯ ಸೌಲಭ್ಯಗಳ ಪರಿಣಾಮಕಾರಿ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ಕೇಂದ್ರ ಸರ್ಕಾರ ಮತ್ತು ಕರಾವಳಿ ರಾಜ್ಯಗಳು / ಯುಟಿಗಳಲ್ಲಿನ ಸಂಬಂಧಪಟ್ಟ ಸಚಿವಾಲಯಗಳು / ಇಲಾಖೆಯನ್ನು ಒಳಗೊಂಡ ಅಂತರ ಸಚಿವಾಲಯ/ ಇಲಾಖೆ ಸಮಿತಿಯನ್ನು ಸ್ಥಾಪಿಸಲಾಗುತ್ತದೆ.

ಅಸ್ತಿತ್ವದಲ್ಲಿರುವ ಮೀನುಗಾರಿಕೆ ಬಂದರುಗಳು ಮತ್ತು ಇಳಿದಾಣಗಳ ಅಗತ್ಯತೆಗಳನ್ನು ಪೂರೈಸುವುದರ ಜೊತೆಗೆ, ಬೀಚ್ ಲ್ಯಾಂಡಿಂಗ್ ಕೇಂದ್ರಗಳಿಗೆ (ಬಿಎಲ್‌ಸಿ) ಮೂಲಭೂತ ಸೌಕರ್ಯ ಸೌಲಭ್ಯಗಳ ಅವಶ್ಯಕತೆಗಳನ್ನು ಸಹ ನೀತಿಯು ಪರಿಶೀಲಿಸುತ್ತದೆ. ದೇಶವು ಸುಮಾರು 3,400 ಮೀನುಗಾರಿಕಾ ಹಳ್ಳಿಗಳನ್ನು ಹೊಂದಿದೆ ಮತ್ತು ಶೇ. 90 ಕ್ಕಿಂತ ಹಳ್ಳಿಗಳಲ್ಲಿ ಸಾಂಪ್ರದಾಯಿಕ ಮತ್ತು ಮೋಟಾರಿಕೃತ ದೋಣಿಗಳಿವೆ. ಅಂತಹ ಅನೇಕ ಹಳ್ಳಿಗಳಲ್ಲಿ ಹೆಚ್ಚಿನ ಸಂಖ್ಯೆಯ ದೋಣಿಗಳಿದ್ದು, ಆರೋಗ್ಯಕರ ಪರಿಸ್ಥಿತಿಗಳಲ್ಲಿ ಮೀನುಗಳನ್ನು ಇಳಿಸಲು ಅಥವಾ ನೆಡ್ ಮೆಂಡಿಂಗ್ ಅಥವಾ ಎಂಜಿನ್ ರಿಪೇರಿಗಾಗಿ ಶೆಡ್ ಮತ್ತು ಲಂಗರು ಹಾಕುವ ಸ್ಥಳಗಳಲ್ಲಿ ಮೀನುಗಳನ್ನು ಇಳಿಸಲು ಯಾವುದೇ ಸೌಲಭ್ಯವಿಲ್ಲ. ವಿಶದವಾದ ಸಮೀಕ್ಷೆ ಮತ್ತು ಅಂತಹ ಬಿಎಲ್‌ಸಿಗಳ ಅಗತ್ಯತೆಗಳ ಮೌಲ್ಯಮಾಪನದ ಆಧಾರದ ಮೇಲೆ, ಅಗತ್ಯ ಸಹಾಯವನ್ನು ಪರಿಗಣಿಸಲಾಗುತ್ತದೆ.

ಒಳನಾಡಿನ ವಲಯದಲ್ಲಿ ಜಲಾಶಯಗಳು, ಸರೋವರಗಳು ಮತ್ತು ನದಿ ಮುಂಭಾಗಗಳಲ್ಲಿರುವ ಪ್ರಮುಖ ಲ್ಯಾಂಡಿಂಗ್ ತಾಣಗಳಿಗೆ ಪ್ಲಾಟ್ ಫಾರಂಗಳು, ಸಣ್ಣ ಹರಾಜು ಪ್ರಾಂಗಣ ಮತ್ತು ಪ್ಯಾಕಿಂಗ್ ಪ್ರದೇಶಗಳ ವಿಷಯದಲ್ಲಿ ಮೂಲಭೂತ ಸೌಕರ್ಯ ಸೌಲಭ್ಯಗಳು ಬೇಕಾಗುತ್ತವೆ. ಹಿಡುವಳಿ ಮಾಡಿದ ಮೀನುಗಳನ್ನು ಮಾರುಕಟ್ಟೆಗಾಗಿ ಹೆಚ್ಚು ದೂರದವರೆಗೆ ಸಾಗಿಸಬೇಕಾದ ಲ್ಯಾಂಡಿಂಗ್ ತಾಣಗಳಿಗೆ ಇಂತಹ

ಸೌಲಭ್ಯಗಳು ಹೆಚ್ಚು ಅಗತ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ, ಸಾರಿಗೆ ಸೌಲಭ್ಯಗಳ ರಚನೆಗೆ ಸಾಕಷ್ಟು ಬೆಂಬಲವನ್ನು ನೀಡಲಾಗುವುದು, ಹಿಡುವಳಿಯಾದ ಮೀನು ಸರಿಯಾದ ಸ್ಥಿತಿಯಲ್ಲಿ ಮತ್ತು ವೇಗವಾಗಿ ತಲುಪಲು ಅನುವು ಮಾಡಿಕೊಡುತ್ತದೆ.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಮೀನುಗಾರಿಕಾ ದೋಣಿಗಳ ಅಗತ್ಯತೆಗಳನ್ನು ಪೂರೈಸಲು ಬ್ಯಾಕ್-ಅಪ್ ಮೂಲಸೌಕರ್ಯದೊಂದಿಗೆ ಅಗತ್ಯ ಸಂಖ್ಯೆಯ ಆಧುನಿಕ ಮೀನುಗಾರಿಕೆ ಬಂದರುಗಳು ಮತ್ತು ಇಳಿದಾಣ ಕೇಂದ್ರಗಳನ್ನು ಒದಗಿಸುವುದು.*
- *ಅಸ್ತಿತ್ವದಲ್ಲಿರುವ ಸೌಲಭ್ಯಗಳನ್ನು ಆಧುನೀಕರಿಸುವುದು.*
- *ಮೀನುಗಳನ್ನು ಇಳಿಯಲು ಮತ್ತು ಸಾಗಿಸಲು ಅನುಕೂಲವಾಗುವಂತೆ ಜಲಾಶಯಗಳು, ಸರೋವರಗಳು ಮತ್ತು ನದಿ ದಡದಲ್ಲಿ ಅಗತ್ಯವಾದ ಮೂಲಭೂತ ಸೌಕರ್ಯ ಸೌಲಭ್ಯಗಳನ್ನು ರಚಿಸುವುದು.*
- *ರಾಷ್ಟ್ರೀಯ ಮೀನುಗಾರಿಕೆ ಬಂದರು ಪ್ರಾಧಿಕಾರವನ್ನು ಸ್ಥಾಪಿಸುವುದು*
- *ಮಾಸ್ಟರ್‌ಪ್ಲಾನ್ ಮತ್ತು ಮೂಲಸೌಕರ್ಯ ಸೌಲಭ್ಯಗಳ ಪರಿಣಾಮಕಾರಿ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ಕೇಂದ್ರ ಸರ್ಕಾರ ಮತ್ತು ರಾಜ್ಯಗಳು / ಯುಟಿಗಳು ಮತ್ತು ಇತರ ಸಂಬಂಧಪಟ್ಟ ಸಚಿವಾಲಯಗಳು / ಇಲಾಖೆಗಳು ಇತರೇ ಪಾಲುದಾರರನ್ನು ಒಳಗೊಂಡ ಅಂತರ-ಸಚಿವಾಲಯ / ಇಲಾಖಾ ಸಮಿತಿಯನ್ನು ರಚಿಸುವುದು*

## 6.5 ಹಿಡುವಳಿ ನಂತರದ ಚಟುವಟಿಕೆ ಮತ್ತು ವ್ಯಾಪಾರ

ಆಹಾರ ಮೌಲ್ಯ ಸರಪಳಿ (ಎಫ್‌ವಿಸಿಯು) ಆಹಾರ ಉತ್ಪನ್ನಗಳನ್ನು ತಯಾರಿಸಲು ಅಗತ್ಯವಿರುವ ಸಂಘಟಿತ ಉತ್ಪಾದನೆ ಮತ್ತು ಮೌಲ್ಯವರ್ಧನೆ ಚಟುವಟಿಕೆಗಳಲ್ಲಿ ಭಾಗವಹಿಸುವ ಎಲ್ಲ ಪಾಲುದಾರರನ್ನು ಒಳಗೊಂಡಿದೆ. ಸುಸ್ಥಿರ ಆಹಾರ ಮೌಲ್ಯ ಸರಪಳಿ (ಎಫ್‌ವಿಸಿ)ಯ ಪ್ರಮುಖ ಗುಣಲಕ್ಷಣಗಳು (i) ಅದರ ಎಲ್ಲಾ ಹಂತಗಳಲ್ಲಿ ಲಾಭದಾಯಕವೆಂದು ಖಚಿತಪಡಿಸುತ್ತದೆ (ಆರ್ಥಿಕ ಸುಸ್ಥಿರತೆ); (ii) ಸಮಾಜಕ್ಕೆ ವಿಶಾಲ ಆಧಾರಿತ ಪ್ರಯೋಜನಗಳನ್ನು ಹೊಂದಿದೆ (ಸಾಮಾಜಿಕ ಸುಸ್ಥಿರತೆ); ಮತ್ತು (iii) ನೈಸರ್ಗಿಕ ಪರಿಸರದ ಮೇಲೆ ಧನಾತ್ಮಕ ಅಥವಾ ತಟಸ್ಥ ಪರಿಣಾಮವನ್ನು ಬೀರುತ್ತದೆ (ಪರಿಸರ ಸುಸ್ತಿರತೆ). ಪ್ರಸ್ತುತ, ಸಮುದ್ರ ಮತ್ತು ಒಳನಾಡಿನ ವಲಯಗಳಲ್ಲಿನ ಹಿಡುವಳಿ ನಂತರದ ನಷ್ಟಗಳು ಅಗಾಧವಾಗಿವೆ ಮತ್ತು ಅಂತಹ ನಷ್ಟವನ್ನು ಕಡಿಮೆ ಮಾಡುವ ತುರ್ತು ಅವಶ್ಯಕತೆಯಿದೆ ಇದರಿಂದ ಗ್ರಾಹಕರಿಗೆ ಹೆಚ್ಚುವರಿ ಮತ್ತು ಸುರಕ್ಷಿತ ಮೀನುಗಳು ಲಭ್ಯವಾಗುತ್ತದೆ. ಈ ಉದ್ದೇಶಗಳನ್ನು ಪೂರೈಸಲು, ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲು ನೀತಿಯು ಉದ್ದೇಶಿಸಿದೆ.

### *6.5.1 ಪೂರೈಕೆ ಸರಪಳಿ (Supply chain) ಮತ್ತು ಮೌಲ್ಯ ಸರಪಳಿ (Value chain)ಯನ್ನು ಸುಧಾರಿಸುವುದು*

ಪೂರೈಕೆ ಸರಪಳಿಯು ಬಹುಶಃ ಭಾರತದ ಮೀನುಗಾರಿಕಾ ಕ್ಷೇತ್ರದ ಸಂಪೂರ್ಣ ಸರಣಿ ಕಾರ್ಯಾಚರಣೆಯ ದುರ್ಬಲ ಕೊಂಡಿಯಾಗಿದೆ ಮತ್ತು ಇದು ನಿರ್ವಾಹಕರಿಗೆ ಮತ್ತು ರಾಷ್ಟ್ರೀಯ ಆರ್ಥಿಕತೆಗೆ ಭಾರಿ ನಷ್ಟವನ್ನುಂಟು ಮಾಡುತ್ತದೆ. 'ಬೋಟ್ ಟು ಪ್ಲೇಟ್' ಮತ್ತು 'ಫಾರ್ಮ್ ಟು ಫೋರ್ಕ್' ಪೂರೈಕೆ ಸರಪಳಿಯನ್ನು ಸುಧಾರಿಸುವುದರಿಂದ ಮೀನು ಹಿಡುವಳಿ ಮಾಡುವವರು, ಕೃಷಿಕರು, ಸಂಸ್ಕರಣೆದಾರರು ಮತ್ತು ಅಂತಿಮವಾಗಿ ಗ್ರಾಹಕರಿಗೆ ಅನೇಕ ಪ್ರಯೋಜನಗಳನ್ನು ತರಬಹುದು. ಈ ಒಂದು ಪ್ರದೇಶವು ತೀವ್ರವಾಗಿ ನಿರ್ಲಕ್ಷಿಸಲ್ಪಟ್ಟಿದೆ ಮತ್ತು ಹಿಡುವಳಿಯ ನಂತರದ ನಷ್ಟವನ್ನು ಕಡಿಮೆ ಮಾಡಲು, ಜನರಿಗೆ ಸುರಕ್ಷಿತ ಆಹಾರವನ್ನು ಒದಗಿಸಲು ಮತ್ತು ಸರಪಳಿಯಲ್ಲಿ ಭಾಗವಹಿಸುವವರ ಆರ್ಥಿಕತೆಯನ್ನು ಸುಧಾರಿಸಲು ಗಮನಾರ್ಹವಾಗಿ ಸುಧಾರಿಸಬೇಕಾಗಿದೆ. ಪೂರೈಕೆ ಸರಪಳಿಯಲ್ಲಿನ ಸುಧಾರಣೆಗೆ ಈ ಕೆಳಗಿನ ಪ್ರಮುಖ ನೀತಿ ಉಪಕ್ರಮಗಳ ಅಗತ್ಯವಿರುತ್ತದೆ.

**ಶೂನ್ಯ ನಷ್ಟ:** ಭೌತಿಕ ಮತ್ತು ಗುಣಮಟ್ಟದ ನಷ್ಟದ ದೃಷ್ಟಿಯಿಂದ ಮೀನು ವ್ಯರ್ಥವಾಗುವುದನ್ನು ಕಡಿಮೆ ಮಾಡಲು, ದೋಣಿಯಲ್ಲಿ ಮೀನುಗಳ ನಿರ್ವಹಣೆ ಮತ್ತು ಶೇಖರಣೆಯಲ್ಲಿನ ಸುಧಾರಣೆಗಳತ್ತ ನೀತಿ ಉಪಕ್ರಮಗಳನ್ನು ನಿರ್ದೇಶಿಸಲಾಗುವುದು. ದೋಣಿಯ ಡೆಕ್ ಮೀನಿನ ಸಂಪರ್ಕದ ಮೊದಲ ಬಿಂದುವಾಗಿದೆ, ಮತ್ತು ಮೀನುಗಳನ್ನು ಸರಿಯಾಗಿ ನಿರ್ವಹಿಸಿದರೆ ಮತ್ತು ಸಂಗ್ರಹಿಸಿದರೆ ಮಾಲಿನ್ಯದ ಸಾಧ್ಯತೆಗಳು ಕಡಿಮೆಯಾಗುತ್ತವೆ. ಸ್ವಚ್ಛವಾದ ಮಂಜುಗಡ್ಡೆಯ ಬಳಕೆ ಮತ್ತು ಶೈತ್ಯೀಕರಿಸಿದ ಸಮುದ್ರದ ನೀರು / ಸ್ಲರಿ ಐಸ್ ಸೌಲಭ್ಯಗಳು ಅತ್ಯಗತ್ಯ ಮತ್ತು ಮೀನುಗಾರಿಕಾ ದೋಣಿಗಳಿಗೆ ಶುದ್ಧವಾದ ಮಂಜುಗಡ್ಡೆ ಮತ್ತು ಇತರ ತಂಪಾಗಿಸುವ ಸೌಲಭ್ಯಗಳನ್ನು ಒದಗಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲಾಗುತ್ತದೆ.

ಹಿಡಿದ ಮೀನು ದಡಕ್ಕೆ ಬಂದ ನಂತರ, ನೀತಿ ಉಪಕ್ರಮಗಳು ಗ್ರಾಹಕರಿಗೆ ಕಡಿಮೆ ಸಮಯದಲ್ಲಿ ಹಿಡಿದ ಮೀನನ್ನು ವಿತರಿಸಲು ಉತ್ತಮವಾಗಿ ಅಭಿವೃದ್ಧಿ ಹೊಂದಿದ ವಿತರಣಾ ಮಾರ್ಗಗಳು ಮತ್ತು ಕೋಲ್ಡ್ ಚೈನ್ ವ್ಯವಸ್ಥೆಗಳನ್ನು ಗುರಿಯಾಗಿರಿಸಿಕೊಳ್ಳುತ್ತವೆ. ಪೂರೈಕೆ ಸರಪಳಿಯಲ್ಲಿ ನೋಡಲ್ ಪಾಯಿಂಟ್‌ಗಳ ಸಂಖ್ಯೆಯನ್ನು ಕಡಿಮೆ ಮಾಡುವುದು ಮತ್ತು ವಿತರಣಾ ಮಾರ್ಗಗಳನ್ನು ಕಡಿಮೆ ಮಾಡುವುದು ಸಹ ಮುಖ್ಯವಾಗಿದೆ. ಮೌಲ್ಯ ಸರಪಳಿಯ ಪಾಲುದಾರರ ಸಹಭಾಗಿತ್ವವನ್ನು ಸ್ಥಾಪಿಸುವುದು ಉತ್ಪನ್ನಗಳಿಗೆ ಉತ್ತಮ ಬೆಲೆಗಳನ್ನು ಪಡೆಯಲು ಅಗತ್ಯವಾಗಿದೆ. ಮೀನುಗಾರರು ಮತ್ತು ಮೀನು ಕೃಷಿಕರಿಗೆ ಸಾಕಷ್ಟು ಪರಿಹಾರವನ್ನು ಖಾತ್ರಿಪಡಿಸುವ ಮತ್ತು ಅವರ ಜೀವನೋಪಾಯವನ್ನು ರಕ್ಷಿಸುವ ಸೂಕ್ತವಾದ ಆದಾಯ ರಚನೆಗಳು ಸಹ ಮೌಲ್ಯ ಸಾಕ್ಷಾತ್ಕಾರದಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾಗಿವೆ.

ಸಮುದ್ರದಲ್ಲಿ ಹಿಡಿಯುವ ಮೀನಿನ ಪ್ರಮಾಣ ಹೆಚ್ಚಳವಾಗದಿರುವುದು ಮತ್ತು ಪೂರೈಕೆ ಸರಪಳಿಯಲ್ಲಿ ಮೀನುಗಳ ಹಾಳಾಗುವ ಪ್ರಮಾಣ ಕಡಿಮೆಯಾಗದಿರುವುದರಿಂದ ಮುಂಬರುವ ವರ್ಷಗಳಲ್ಲಿ, ರಫ್ತು ಮಾಡಲು ಕಚ್ಚಾ ವಸ್ತುಗಳ ಕೊರತೆ ಉಂಟಾಗಬಹುದು. ಸುಂಕ ಸೇರಿದಂತೆ ವ್ಯಾಪಾರ ನೀತಿಗಳು ಮೀನು ಉತ್ಪಾದನೆ ಮತ್ತು ಅಂತರರಾಷ್ಟ್ರೀಯ ವ್ಯಾಪಾರವನ್ನು ಗಮನಾರ್ಹವಾಗಿ ರೂಪಿಸುತ್ತವೆ. ದೇಶೀಯ ಮಾರುಕಟ್ಟೆಯಲ್ಲಿ (ರಫ್ತಿಗೆ ಸಹ) ಮೌಲ್ಯ ಸರಪಳಿಯನ್ನು ಸುಧಾರಿಸಲು ಅಗತ್ಯವಾದ ನೀತಿ ಕ್ರಮಗಳಲ್ಲಿ ಸುಸಂಘಟಿತ ಪೂರೈಕೆ ಸರಪಳಿಯನ್ನು ಸ್ಥಾಪಿಸುವುದು ಮತ್ತು ಲ್ಯಾಂಡಿಂಗ್ ತಾಣಗಳಲ್ಲಿ ಶುದ್ಧ ನೀರು, ಶುದ್ಧ ಮಂಜುಗಡ್ಡೆ ಮತ್ತು ಅಗತ್ಯವಾದ ಶೇಖರಣೆ ಸೌಲಭ್ಯವನ್ನು ಒದಗಿಸುವುದು ಸೇರಿವೆ. ಸರಬರಾಜು ಸರಪಳಿಯ ವಿವಿಧ ಹಂತಗಳಲ್ಲಿ ಸೂಕ್ಷ್ಮ ಜೀವಿಗಳಿಂದ ಅಪಾಯಗಳು ಅಸ್ತಿತ್ವದಲ್ಲಿವೆ ಎಂಬ ಆಧಾರದ ಮೇಲೆ ಕ್ರಿಟಿಕಲ್ ಕಂಟ್ರೋಲ್ ಪಾಯಿಂಟ್ನ ಅಪಾಯದ ವಿಶ್ಲೇಷಣೆ (ಎಚ್ಎಸಿಸಿಪಿ) ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ನೀತಿ ಕ್ರಮಗಳನ್ನು ಜಾರಿಗೆ ತರಲಾಗುತ್ತದೆ.

**<u>ಮೌಲ್ಯ ಸೇರ್ಪಡೆ (Value addition):</u>** ಮೀನು ನೀರಿನಿಂದ ಹೊರಬಂದ ತಕ್ಷಣ ಮೌಲ್ಯವರ್ಧನೆ ಪ್ರಾರಂಭವಾಗುತ್ತದೆ. ಮೊದಲೇ ಹೇಳಿದಂತೆ ಸರಿಯಾದ ದೋಣಿಯ ಆನ್–ಬೋರ್ಡ್ ನಿರ್ವಹಣೆ ಮತ್ತು ಆನ್–ಬೋರ್ಡ್ ಗಿಲ್ಲಿಂಗ್ ಮತ್ತು ಗಟಿಂಗ್ ಮತ್ತು ಸಾಕಷ್ಟು ಮಂಜುಗಡ್ಡೆಯೊಂದಿಗೆ ಮೀನುಗಳನ್ನು ಕ್ರೇಟ್ ಗಳಲ್ಲಿ ಇಡುವುದರಿಂದ ಮೀನು ಹಾಳಾಗುವುದು ತಪ್ಪುತ್ತದೆ. ಮೀನುಗಾರಿಕೆ ಬಂದರು ಮತ್ತು ಇಳಿದಾಣಗಳಲ್ಲಿ ಇಳಿಸಿದ ಮೀನಿನ ಶುದ್ಧಿಕರಣ ನಿರ್ವಾತ ಪ್ಯಾಕಿಂಗ್ ಇತ್ಯಾದಿಗಳು ಮತ್ತು ನಂತರ ಅದನ್ನು ಚಿಲ್ಲರೆ ಮಾರುಕಟ್ಟೆಗಳಿಗೆ ಸಾಗಿಸುವ ಮೂಲಕ ಮತ್ತಷ್ಟು ಮೌಲ್ಯವರ್ಧನೆ ನಡೆಯುತ್ತದೆ. ಪೌಷ್ಠಿಕಾಂಶದ ಮೌಲ್ಯವನ್ನು ಹೆಚ್ಚಿಸಲು ವಿಶೇಷ ಪದಾರ್ಥಗಳನ್ನು ಸೇರಿಸುವ ಮೂಲಕ, ಶೆಲ್ಫ್ ಅವಧಿಯನ್ನು ಹೆಚ್ಚಿಸುವ ಮೂಲಕ ಮತ್ತು ಮೀನು ಉತ್ಪನ್ನಗಳನ್ನು ಬಳಸುವ ಅನುಕೂಲತೆಯನ್ನು ಅರಿತುಕೊಳ್ಳುವ ಮೂಲಕ ಮೌಲ್ಯಗಳನ್ನು ಹೆಚ್ಚಿಸಬಹುದು. ಆಹಾರೇತರ, ಔಷಧಿಯ ಮತ್ತು ನ್ಯೂಟ್ರಾಸ್ಯುಟಿಕಲ್ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಅಪಾರ ಅವಕಾಶವಿದೆ.

**<u>ಮೌಲ್ಯ ರಚನೆ (Value creation):</u>** ಪರಿಸರ ಮತ್ತು ಸಾಮಾಜಿಕವಾಗಿ ಜವಾಬ್ದಾರಿಯುತ ಉತ್ಪಾದನೆಗೆ ಪ್ರಮಾಣೀಕರಣ ಮತ್ತು ಲೇಬಲಿಂಗ್ ಯೋಜನೆಗಳು ಮತ್ತು ಟ್ರೇಸಬಲಿಟಿ ವ್ಯವಸ್ಥೆಗಳು ಹೊಸ ಮಾರುಕಟ್ಟೆಗಳನ್ನು ಸೃಷ್ಟಿಸುತ್ತದೆ ಮತ್ತು ಉತ್ಪನ್ನಗಳನ್ನು ಜಾಗತಿಕವಾಗಿ ವ್ಯಾಪಾರ ಮಾಡಬಹುದು. ಈ ಕ್ರಮಗಳು ಪರಿಸರ ಕಾಳಜಿಯನ್ನು ಪರಿಹರಿಸಿ ಮತ್ತು ಮೀನುಗಾರಿಕೆಯಲ್ಲಿ ಸುಸ್ಥಿರತೆಯನ್ನು ಸಾಧಿಸಲು ಶ್ರಮಿಸುತ್ತವೆ. ಪ್ರಮಾಣೀಕರಣವು ಸುಧಾರಿತ ಅಥವಾ ನಿರ್ವಹಿಸಿದ ಮಾರುಕಟ್ಟೆ ಪ್ರವೇಶ, ಮತ್ತು

ಸಂಭಾವ್ಯವಾಗಿ ಬೆಲೆ ಸುಧಾರಣೆಗಳ ರೂಪದಲ್ಲಿ ಉತ್ಪಾದಕರಿಗೆ ಪ್ರಯೋಜನ ನೀಡುತ್ತದೆ. ಪರಿಣಾಮಕಾರಿ 'ಎಂಸಿಎಸ್' ಮತ್ತು ಬ್ಲಾಕ್ ಚೈನ್ ವಿಧಾನವು ಮೀನು ಸರಬರಾಜು ಸರಪಳಿಯನ್ನು ಪತ್ತೆಹಚ್ಚಲು, ದಾಖಲಿಸಲು, ಸುಸ್ಥಿರತೆ ಮತ್ತು ಆಹಾರ ಸುರಕ್ಷತೆಯ ಬಗ್ಗೆ ಸಾರ್ವಜನಿಕರಿಗೆ, ಕೈಗಾರಿಕೆ ಮತ್ತು ಗ್ರಾಹಕರಿಗೆ ಮನವರಿಕೆ ಮಾಡುವ ಮೂಲಕ ಈ ವಲಯದ ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ.

**ತಕ್ಷಣ ಕ್ರಮವಹಿಸಬೇಕಾದ ಪ್ರಮುಖ ವಿಷಯಗಳು ಕೆಳಗಿನಂತಿವೆ:**

- *ಮೀನಿನ ಶೂನ್ಯ ನಷ್ಟ ಕಡೆಗೆ ಸಾಗಲು ಮೀನು ವಿತರಣಾ ವ್ಯವಸ್ಥೆಯನ್ನು ಸುಧಾರಿಸುವುದು.*
- *ಮೌಲ್ಯ ಸರಪಳಿ (Value Chain) ಯಲ್ಲಿ ಭಾಗವಹಿಸುವವರನ್ನು ಪ್ರೋತ್ಸಾಹಿಸುವುದು ಮತ್ತು ಬೆಂಬಲಿಸುವುದು ಮತ್ತು ಮೌಲ್ಯವರ್ಧನೆ ಮತ್ತು ಮೌಲ್ಯ ರಚನೆಗಾಗಿ ಅವರ ಸಾಮರ್ಥ್ಯಗಳನ್ನು ಹೆಚ್ಚಿಸುವುದು.*
- *ಸಂಬಂಧಿತ ಪಾಲುದಾರರ ಪೂರ್ಣ ಭಾಗವಹಿಸುವಿಕೆಯೊಂದಿಗೆ ಆಯ್ದ ಮೀನುಗಾರಿಕೆಯ ಪರಿಸರ-ಲೇಬಲಿಂಗ್ ಅನ್ನು ಉತ್ತೇಜಿಸುವುದು.*

### *6.5.2 ದೇಶೀಯ ಮಾರುಕಟ್ಟೆ ಅಭಿವೃದ್ಧಿಪಡಿಸುವುದು*

ದೇಶವು ರಫ್ತು ಮಾರುಕಟ್ಟೆಗೆ ಪೂರೈಸುವ ಅತ್ಯಂತ ಆಧುನಿಕ ಸಂಸ್ಕರಣಾ ಮೂಲಭೂತ ಸೌಕರ್ಯವನ್ನು ಹೊಂದಿದ್ದರೂ, ದೇಶೀಯ ಮಾರುಕಟ್ಟೆ ವಿಷಯದಲ್ಲಿ ಈ ವ್ಯವಸ್ಥೆಯಿಲ್ಲ. ಮೀನುಗಳನ್ನು ಲ್ಯಾಂಡಿಂಗ್ ತಾಣಗಳಲ್ಲಿ ಮತ್ತು ಸಗಟು / ಚಿಲ್ಲರೆ ಮಾರುಕಟ್ಟೆಗಳಲ್ಲಿ ಅತ್ಯಂತ ಆರೋಗ್ಯಕರವಲ್ಲದ ರೀತಿಯಲ್ಲಿ ಮಾರಾಟ ಮಾಡಲಾಗುತ್ತಿದೆ. ಮೀನುಗಾರಿಕೆ ಬಂದರುಗಳು ಇಳಿದಾಣಗಳ ಮತ್ತು ಮೀನು ಮಾರುಕಟ್ಟೆಗಳನ್ನು ಸ್ಥಾಪಿಸಲು / ಸುಧಾರಿಸಲು ಸರ್ಕಾರವು ಸಾಕಷ್ಟು ಸಹಾಯವನ್ನು ನೀಡಿದ್ದರೂ, ಪರಿಸ್ಥಿತಿ ಸುಧಾರಿಸಿಲ್ಲ. ಇದು ನೆರೆಯ ರಾಷ್ಟ್ರಗಳಾದ ಬಾಂಗ್ಲಾದೇಶ, ಶ್ರೀಲಂಕಾ ಮತ್ತು ಥೈಲ್ಯಾಂಡ್‌ಗೆ ಹೋಲಿಸಿದರೆ ಭಾರತದಲ್ಲಿ ಮೀನುಗಳ ಮಾರಾಟ ಮತ್ತು ಬಳಕೆ ಹೆಚ್ಚಾಗದಿರಲು ಒಂದು ಕಾರಣವಾಗಿದೆ. ದುರದೃಷ್ಟವಶಾತ್, ಅತ್ಯಂತ ಆರೋಗ್ಯಕರವಲ್ಲದ ರೀತಿಯಲ್ಲಿ ನಿರ್ವಹಿಸಲಾದ ಮೀನುಗಳನ್ನು ಖರೀದಿಸಲು ಗ್ರಾಹಕರ ಪ್ರತಿರೋಧವೂ ಕಡಿಮೆ ಇದೆ. ಮೀನಿನ ಅಪಾರ ಆರೋಗ್ಯ ಮತ್ತು ಪೌಷ್ಠಿಕಾಂಶದ ಪ್ರಯೋಜನಗಳ ಹೊರತಾಗಿಯೂ, ದೇಶದಲ್ಲಿ ಮೀನು ಸೇವನೆಯ ಹೆಚ್ಚಳವು ಕಾಲಕಾಲಕ್ಕೆ ನಿಧಾನ ಗತಿಯಲ್ಲಿ ಬೆಳೆದಿದೆ. ಆದರೆ COVID-19 ಸಾಂಕ್ರಾಮಿಕ ರೋಗ ಹರಡಿದಾಗಿನಿಂದ ನಿಜವಾದ ತೊಂದರೆಯನ್ನು ಅನುಭವಿಸಲಾಗಿದೆ. ರಫ್ತು ಮಾರುಕಟ್ಟೆಗಳ ಮುಚ್ಚುವಿಕೆಯೊಂದಿಗೆ, ಉತ್ಪಾದಕರು ದೇಶೀಯ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸುವ ಅಗತ್ಯವನ್ನು ಮನಗೊಂಡಿದ್ದಾರೆ. ಇದರಿಂದ ರಫ್ತು ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬಹುದು.

ಈ ವಿಷಯದಲ್ಲಿ ನೀತಿ ಉಪಕ್ರಮಗಳು, ಗ್ರಾಹಕರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ, ದೇಶೀಯ ಪೂರೈಕೆ ಸರಪಳಿಯನ್ನು ಮತ್ತಷ್ಟು ಬಲಪಡಿಸುವುದು ಮತ್ತು ಚಿಲ್ಲರೆ ಮಾರಾಟ ಮಳಿಗೆಗಳು ಮೀನುಗಳನ್ನು ತಮ್ಮ ಉತ್ಪನ್ನಗಳ ಪಟ್ಟಿಯಲ್ಲಿ ಸೇರಿಸಲು ಪ್ರೋತ್ಸಾಹ ನೀಡುವುದಾಗಿದೆ. ಮೀನನ್ನು ಆಹಾರದ ನಿಯಮಿತ ಭಾಗವಾಗಿರುವ ಪ್ರದೇಶಗಳಲ್ಲಿ ಕೃಷಿ ಉತ್ಪನ್ನಗಳ ಸಾಗಾಣಿಕೆಯಂತೆ ಮೀನನ್ನು ರೈಲು, ವಿಮಾನ ಮತ್ತು ರಸ್ತೆಯ ಮೂಲಕ ರಿಯಾಯಿತಿ ದರದಲ್ಲಿ ಸಾಗಿಸಲು ಸಹಕರಿಸಲಾಗುವುದು. ಶಾಲಾ ಮಕ್ಕಳಿಗೆ ಒದಗಿಸುವ ಮಧ್ಯಾಹ್ನದ ಊಟದಲ್ಲಿ  ಮೀನುಗಳನ್ನು ಸೇರಿಸುವ ನೀತಿ ಉಪಕ್ರಮಗಳನ್ನು ಮಾಡಲಾಗುವುದು.

ಅಂತೆಯೇ, ನೀತಿ ಪ್ರೋತ್ಸಾಹವೂ ಸಹ ಸಣ್ಣ ಸಂಸ್ಕರಣ ಘಟಕಗಳ ಸ್ಥಾಪನೆಯ ಕಡೆಗೆ ಗಮನ ನೀಡಲಾಗುವುದು. ಅಂತಹ ಸಂಸ್ಕರಣೆದಾರರು ಮೀನು ಹಿಡುವಳಿದಾರರೊಂದಿಗೆ ಸಂಪರ್ಕವನ್ನು ಸ್ಥಾಪಿಸುತ್ತಾರೆ ಮತ್ತು ಮೂಲ ಮೌಲ್ಯವರ್ಧನೆಯೊಂದಿಗೆ ಉತ್ಪನ್ನವನ್ನು ನೇರವಾಗಿ ರೆಸ್ಟೋರೆಂಟ್‌ಗಳು ಅಥವಾ ಇತರ ಮಳಿಗೆಗಳಿಗೆ ಮಾರಾಟ ಮಾಡುತ್ತಾರೆ. ಈ ದಿಕ್ಕಿನಲ್ಲಿ, ಸಣ್ಣ–ಪ್ರಮಾಣದ ಸಂಸ್ಕರಣೆ ಮತ್ತು ಚಿಲ್ಲರೆ ವ್ಯಾಪಾರೋದ್ಯಮದಲ್ಲಿ ಮಹಿಳೆಯರ ಪಾತ್ರವನ್ನು ಬಲಪಡಿಸುವ ಗುರಿಯನ್ನು ನೀತಿಯು ಹೊಂದಿದ್ದು, ಅವರಿಗೆ ವ್ಯಾಪಾರ ಜ್ಞಾನಿಯಾಗಲು ಮತ್ತು ಈ ವಿಭಾಗದ ಮಾರ್ಕೆಟಿಂಗ್‌ನಲ್ಲಿ ಪ್ರಮುಖ ಪಾತ್ರ ವಹಿಸಲು ಅಗತ್ಯವಾದ ಬೆಂಬಲವನ್ನು ನೀಡುತ್ತದೆ.

ಅಂತಿಮವಾಗಿ, ಆನ್‌ಲೈನ್ ಮೀನು ಮಾರಾಟದ ಬೆಳವಣಿಗೆಯು ಹೆಚ್ಚಿನ ಸಂಖ್ಯೆಯ ಗ್ರಾಹಕರಿಗೆ ಲಾಭದಾಯಕವಾಗಿ ಸಂಸ್ಕರಿಸಿದ ಮೀನುಗಳನ್ನು ಪೂರೈಸಲು ಸಾಕಷ್ಟು ಅವಕಾಶಗಳನ್ನು ಸೃಷ್ಟಿಸಿದೆ. ಮೌಲ್ಯ ಸರಪಳಿಯನ್ನು ಸಂಕ್ಷಿಪ್ತಗೊಳಿಸುವ ಮೂಲಕ ಮೀನುಗಾರರಿಗೆ ಹೆಚ್ಚಿನ ಆದಾಯ ನೀಡುತ್ತದೆ. ಏಕೆಂದರೆ ಅವರು ಗ್ರಾಹಕರ ಖರೀದಿ ಬೆಲೆಯಲ್ಲಿ ಹೆಚ್ಚುತ್ತಿರುವ ಪಾಲನ್ನು ಹೊಂದಿರುತ್ತಾರೆ. ಮೀನುಗಾರರೊಂದಿಗೆ ನೇರ ಸಂಪರ್ಕದಿಂದಾಗಿ ಮೀನು ಸಂಸ್ಕರಣೆದಾರರು ಉತ್ತಮ ಮೌಲ್ಯ ಸರಪಳಿ ನಿಯಂತ್ರಣವನ್ನು ಹೊಂದಬಹುದಾಗಿದೆ. ಕಾಲಾನಂತರದಲ್ಲಿ, ಮೀನುಗಾರರು ಅಗತ್ಯವಾದ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಬಹುದಾದರೆ, ಅವರು ಪ್ರಾರಂಭದಿಂದ ಕೊನೆಯವರೆಗೆ ಸಂಪರ್ಕದೊಂದಿಗೆ ಆಂತರಿಕ ಮೌಲ್ಯ ಸರಪಳಿಗಳನ್ನು ಸ್ಥಾಪಿಸಬಹುದು. ನೀತಿಯು ಅಂತಹ ಉಪಕ್ರಮಗಳನ್ನು ಬೆಂಬಲಿಸುತ್ತದೆ ಮತ್ತು ಉತ್ತೇಜಿಸುತ್ತದೆ.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಮೀನು ಸೇವನೆಯ ಲಾಭದ ಬಗ್ಗೆ ಗ್ರಾಹಕರ ಜಾಗೃತಿ ಮೂಡಿಸುವುದು ಮತ್ತು ಮೀನು ಸೇವನೆಯನ್ನು ಜನಪ್ರಿಯಗೊಳಿಸಲು ನೂತನ ಮಾರ್ಗಗಳನ್ನು ಅನ್ವೇಷಿಸುವುದು.*
- *ಮೀನುಗಳ ಕೈಗೆಟುಕುವಿಕೆ ಮತ್ತು ಲಭ್ಯತೆಗೆ ಅನುಕೂಲವಾಗುವಂತೆ ಪೂರೈಕೆ ಸರಪಳಿಗಳನ್ನು ಸುಧಾರಿಸುವುದು.*

- *ಉತ್ಪನ್ನ ಅಭಿವೃದ್ಧಿ ಮತ್ತು ಆನ್‌ಲೈನ್ ಮಾರ್ಕೆಟಿಂಗ್‌ನಂತಹ ಹೊಸ ಮಾರ್ಕೆಟಿಂಗ್ ವಿಧಾನಗಳನ್ನು ಉತ್ತೇಜಿಸುವುದು.*
- *ಮಧ್ಯವರ್ತಿಗಳ ಪಾತ್ರವನ್ನು ಕಡಿಮೆ ಮಾಡಲು ಸ್ಥಳೀಯ ಉತ್ಪಾದಕ-ಸಂಸ್ಕರಣೆದಾರರ ಮೌಲ್ಯ ಸರಪಳಿಗಳನ್ನು ಬೆಂಬಲಿಸುವುದು.*

### *6.5.3 ವ್ಯಾಪಾರ ಮತ್ತು ಆಹಾರ ಸುರಕ್ಷತೆಯನ್ನು ಉತ್ತೇಜಿಸುವುದು*

ಭಾರತದ ಮೀನು ವ್ಯಾಪಾರವು ಸೀಗಡಿಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಸೀಗಡಿಯು ರಫ್ತಿನ ಪ್ರಮಾಣದ ಸುಮಾರು ಶೇ. 40 ರಷ್ಟು ಮತ್ತು ಮೌಲ್ಯದ ಶೇ. 68 ರಷ್ಟು ಒಳಗೊಂಡಿದೆ. ಈ ಸನ್ನಿವೇಶದಲ್ಲಿ, ಕಳವಳಕಾರಿ ಸಂಗತಿಯೆಂದರೆ, ಕಳೆದ 24 ವರ್ಷಗಳಲ್ಲಿ ವ್ಯಾಪಾರದ ಮೌಲ್ಯವು 13 ಪಟ್ಟು ಮತ್ತು ಪ್ರಮಾಣವು 5 ಪಟ್ಟು ಹೆಚ್ಚಾಗಿದ್ದರೂ, ಭಾರತದ ಮೀನಿನ ರಫ್ತಿನ ಸ್ವರೂಪ ಒಂದೇ ಆಗಿರುತ್ತದೆ. ದೀರ್ಘಕಾಲೀನ ಅಭಿವೃದ್ಧಿಗೆ, ಭಾರತದ ರಫ್ತು ಸಾಮರ್ಥ್ಯವು ವೈವಿಧ್ಯಮಯವಾಗಿಸಿ, ಮತ್ತು ಹಿಡಿಯುವ ಮತ್ತು ಜಲಕೃಷಿ ಮೀನುಗಾರಿಕೆಯನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದು ಅಗತ್ಯ. ಇದಲ್ಲದೆ, ಪ್ರಮುಖ ಮಾರುಕಟ್ಟೆಗಳ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ಸಂಸ್ಕರಣಾ ವಲಯವು ಉನ್ನತ ದರ್ಜೆಯ ಮೌಲ್ಯವರ್ಧನೆಗೆ ಹೋಗುವುದು ಸಹ ಅಗತ್ಯವಾಗಿದೆ.

ಮಾರುಕಟ್ಟೆಗಳ ವಿಷಯದಲ್ಲಿ, ಈ ಅವಧಿಯಲ್ಲಿ, ಯುಎಸ್ ಮಾರುಕಟ್ಟೆಯಲ್ಲಿ ಭಾರತವು ಯಶಸ್ವಿಯಾಗಿದೆ. ಆದರೆ ಇಯು (EU) ಮಾರುಕಟ್ಟೆಯಲ್ಲಿ ಅಷ್ಟೊಂದು ಯಶಸ್ವಿಯಾಗಲಿಲ್ಲ. ಚೀನಾ, ಮಧ್ಯಪ್ರಾಚ್ಯ ಮತ್ತು ಆಗ್ನೇಯ ಏಷ್ಯಾದಲ್ಲಿ ಹೊಸ ಮಾರುಕಟ್ಟೆಗಳನ್ನು ಪ್ರವೇಶಿಸುವಲ್ಲಿ ಭಾರತ ಯಶಸ್ವಿಯಾಗಿದೆ. ಸ್ಪರ್ಧಾತ್ಮಕ ವೈವಿಧ್ಯಮಯ ಕೊಡುಗೆ ಈ ಮಾರುಕಟ್ಟೆಗಳಲ್ಲಿ ಭಾರತದ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸಲು ಸಹಾಯ ಮಾಡುತ್ತದೆ.

ಆದಾಗ್ಯೂ, ಜಾಗತಿಕ ವ್ಯಾಪಾರವು ವಿಭಿನ್ನ ಅಡೆತಡೆಗಳು ಮತ್ತು ಪರಿಶೋಧನೆಗೆ ಹೆಚ್ಚು ಒಳಗಾಗುತ್ತಿದೆ. ವಿಶೇಷವಾಗಿ, ಯುಎಸ್, ಇಯು ಮತ್ತು ಜಪಾನ್‌ನ ಹೆಚ್ಚಿನ ಮೌಲ್ಯದ ಮಾರುಕಟ್ಟೆಗಳು ಹೆಚ್ಚುತ್ತಿರುವ ನಿರ್ಬಂಧಗಳಿಗೆ ಮುಖ್ಯವಾಗಿ ಸುರಕ್ಷತೆ, ನೈರ್ಮಲ್ಯ ಮತ್ತು ಜೀವವೈವಿಧ್ಯ ಸಂರಕ್ಷಣೆ ಒಳಗಾಗುತ್ತಿವೆ (ಉದಾ. ಆಮೆಗಳು ಮತ್ತು ಸಸ್ತನಿಗಳಿಗೆ ರಕ್ಷಣೆ). ಆದ್ದರಿಂದ, ನೀತಿ ಮಾರ್ಗದರ್ಶಿಗಳು ಸ್ಪರ್ಧಾತ್ಮಕತೆಯನ್ನು ಖಚಿತಪಡಿಸಿಕೊಳ್ಳಲು ಗುಣಮಟ್ಟದ ನಿಯಂತ್ರಣ ಮತ್ತು ಪೂರೈಕೆ ಸರಪಳಿಯಾದ್ಯಂತ ಪತ್ತೆಹಚ್ಚುವಿಕೆ (Treaceability) ಕಾಪಾಡಿಕೊಳ್ಳುವುದರ ಮೇಲೆ ಕೇಂದ್ರೀಕರಿಸುತ್ತವೆ. ಹೆಚ್ಚುತ್ತಿರುವ ಆರ್ಥಿಕ ಸ್ಥಿತಿ ಮತ್ತು ಇತರ ಅಂಶಗಳಿಂದಾಗಿ ಭಾರತವು ಹೆಚ್ಚಿನ ಆದ್ಯತೆಯ ಸುಂಕ ಒಪ್ಪಂದಗಳನ್ನು ಕಳೆದುಕೊಳ್ಳುವ / ಮರಳಿ ಪಡೆಯಲು ವಿಫಲವಾಗುವ ಸಾಧ್ಯತೆಯಿದೆ. ಆದ್ದರಿಂದ, ಹೊಸ ಅಭಿವೃದ್ಧಿಶೀಲ ರಾಷ್ಟ್ರಗಳ

ಹೊರಹೊಮ್ಮುವಿಕೆ, ಆದ್ಯತೆಯ ಸ್ಥಾನಮಾನವನ್ನು ಕಳೆದುಕೊಳ್ಳುವುದು ಅಥವಾ ಬೇರೆ ರೀತಿಯಲ್ಲಿ ಹೇಳುವುದಾದರೆ, ಜಾಗತಿಕ ಸಹಕಾರೇತರ ವ್ಯಾಪಾರ ವಾತಾವರಣದಲ್ಲಿ ಭಾರತವು ಸ್ಪರ್ಧಾತ್ಮಕವಾಗಿರಿಸುವತ್ತ ನೀತಿ ನಿಯಮಗಳನ್ನು ಗಮನ ನೀಡಲಾಗುವುದು.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ರಫ್ತು ಮಾರುಕಟ್ಟೆ ಮತ್ತು ರಫ್ತು ಮೌಲ್ಯವನ್ನು ವಿಸ್ತರಿಸಲು ಮೀನಿನ ಜಾತಿಗಳು ಮತ್ತು ಉತ್ಪನ್ನ ವೈವಿಧ್ಯತೆಯನ್ನು ಉತ್ತೇಜಿಸುವುದು.*
- *ಹೊಸ ಮಾರುಕಟ್ಟೆಗಳನ್ನು ಅನ್ವೇಷಿಸುವುದು ಮತ್ತು 'ಬ್ರಾಂಡ್ ಇಂಡಿಯಾ' ಸಮುದ್ರಾಹಾರವನ್ನು ಉತ್ತೇಜಿಸುವುದು.*
- *ಮೀನು ಮತ್ತು ಮೀನು ಉತ್ಪನ್ನಗಳನ್ನು ಅಂತರರಾಷ್ಟ್ರೀಯ ಗುಣಮಟ್ಟವನ್ನು ಹೊಂದಿರುವಂತೆ ಖಚಿತಪಡಿಸಿಕೊಳ್ಳಲು ಮೀನುಗಾರಿಕೆ, ಬಂದರುಗಳು ಮತ್ತು ಇಳಿದಾಣಗಳಲ್ಲಿ ನೈರ್ಮಲ್ಯವನ್ನು ಸುಧಾರಿಸುವುದು.*
- *ಸಂರಕ್ಷಣಾ ಸಾಧನಗಳ ಬಳಕೆಯನ್ನು ಉತ್ತೇಜಿಸುವ ಮೂಲಕ ಅಳಿವಿನಂಚಿನಲ್ಲಿರುವ ಪ್ರಭೇದಗಳ ರಕ್ಷಣೆಯನ್ನು ಖಚಿತಪಡಿಸುವುದು.*
- *ಪೂರೈಕೆ ಸರಪಳಿಯಲ್ಲಿ ಪತ್ತೆಹಚ್ಚುವಿಕೆಯನ್ನು (Traceability) ಅಳವಡಿಸುವುದು.*

## 6.6 ಪರಿಸರ ಮತ್ತು ಹವಾಮಾನ ಬದಲಾವಣೆ

### *6.6.1 ಹವಾಮಾನ ಬದಲಾವಣೆ*

ಹವಾಮಾನ ಬದಲಾವಣೆಯು ಇತ್ತೀಚಿನ ದಿನಗಳಲ್ಲಿ ಮೀನುಗಾರಿಕೆ ಕ್ಷೇತ್ರವು ಎದುರಿಸುತ್ತಿರುವ ದೊಡ್ಡ ಸವಾಲುಗಳಲ್ಲಿ ಒಂದಾಗಿದೆ ಮತ್ತು ದೇಶದಲ್ಲಿ ಮೀನುಗಾರಿಕೆ ಮತ್ತು ಜಲಕೃಷಿಯ ಬೆಳವಣಿಗೆಯ ವೇಗವನ್ನು ಉಳಿಸಿಕೊಳ್ಳಲು ಸಮಯಕ್ಕೆ ಅನುಗುಣವಾಗಿ ಹೊಂದಾಣಿಕೆ ಮತ್ತು ನಿರ್ವಹಣಾ ಯೋಜನೆಗಳು ಅಗತ್ಯವಾಗಿವೆ. ಸಮುದ್ರ ಮೀನುಗಾರಿಕೆಯ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳು ಭಾರತೀಯ ಇಇಜೆಡ್ ಮತ್ತು ಸುತ್ತಮುತ್ತಲಿನ ಸಮುದ್ರಗಳಲ್ಲಿ ಗೋಚರಿಸುತ್ತವೆ. ದೇಶದಲ್ಲಿ ಮೀನುಗಾರಿಕೆ ಸಂಶೋಧನಾ ಸಂಸ್ಥೆಗಳು ನಡೆಸಿದ ಹಲವಾರು ಅಧ್ಯಯನಗಳು ಹೆಚ್ಚುತ್ತಿರುವ ತಾಪಮಾನಕ್ಕೆ ಅಥವಾ ಸಾಗರಗಳಲ್ಲಿನ ಲವಣಾಂಶದ ಮಾದರಿಗಳಲ್ಲಿನ ಬದಲಾವಣೆಗೆ ಸಂಬಂಧಿಸಿ ಮೀನು ಪ್ರಭೇದಗಳ ವಿತರಣೆಯಲ್ಲಿನ ಅವುಗಳ ಸಮೃದ್ಧಿ, ಸಂತಾನೋತ್ಪತ್ತಿ ನಡವಳಿಕೆ ಮತ್ತು ಇತರ ಫಿನೊಲಾಜಿಕಲ್ ಗುಣಲಕ್ಷಣಗಳಲ್ಲಿ ಬದಲಾವಣೆಯನ್ನು ದಾಖಲಿಸಿವೆ. ಈ ನೀತಿಯು ಮೀನು ದಾಸ್ತಾನುಗಳ ಮೇಲೆ

ಹವಾಮಾನ ಬದಲಾವಣೆಯ ಪರಿಣಾಮಗಳ ಮೇಲೆ ಕೇಂದ್ರೀಕರಿಸಿದ ಅಧ್ಯಯನಗಳನ್ನು ಉತ್ತೇಜಿಸುತ್ತದೆ, ಅದು ಅಂತಹ ಹವಾಮಾನ-ಪ್ರೇರಿತ ಬದಲಾವಣೆಗಳ ಬಗ್ಗೆ ನಮ್ಮ ತಿಳುವಳಿಕೆಯನ್ನು ಸುಧಾರಿಸುತ್ತದೆ ಮತ್ತು ಮೀನುಗಾರಿಕೆ ಮತ್ತು ಕೃಷಿ ಸಮುದಾಯಗಳ ಜೀವನಕ್ಕೆ ತೊಂದರೆಯಾಗದಂತೆ ಸಮಯಕ್ಕೆ ತಕ್ಕಂತೆ ಹೊಂದಾಣಿಕೆಯ ಕಾರ್ಯವಿಧಾನಗಳನ್ನು ಒದಗಿಸುತ್ತದೆ, ಹವಾಮಾನ ವೈಪರೀತ್ಯದ ಬಗ್ಗೆ ಭಾರತದ ಅಂತರರಾಷ್ಟ್ರೀಯ ಬದ್ಧತೆಗಳ ಭಾಗವಾಗಿ, ಮೀನುಗಾರಿಕೆ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಿಂದ ಹೊರಸೂಸುವ ಹಸಿರು ಮನೆ ಅನಿಲಗಳನ್ನು (ಜಿಎಚ್‌ಜಿ) ಕಡಿಮೆ ಮಾಡುವ ಮೂಲಕ ಹಸಿರು ಮೀನುಗಾರಿಕೆಯ ಪರಿಕಲ್ಪನೆಯನ್ನು ವಿವಿಧ ಚಟುವಟಿಕೆಗಳ ಮೂಲಕ ಪ್ರೋತ್ಸಾಹಿಸಲಾಗುತ್ತದೆ.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಮೀನುಗಾರಿಕೆ ಮತ್ತು ಮೀನು ಸಾಕಾಣಿಕೆಯ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಅಧ್ಯಯನಕ್ಕೆ ಪ್ರೋತ್ಸಾಹ.*
- *ಮೀನುಗಾರರು ಮತ್ತು ಮೀನು ಕೃಷಿಕರಿಗೆ ಹವಾಮಾನ ಮತ್ತು ಅದಕ್ಕೆ ಸಂಬಂಧಿಸಿದ ನೈಸರ್ಗಿಕ ಘಟನೆಗಳಿಂದ ತಂದ ಬದಲಾವಣೆಗಳಿಗೆ ಹೊಂದಾಣಿಕೆ ಕುರಿತು ಪೈಲಟ್ ಯೋಜನೆಗಳನ್ನು ಜಾರಿಗೊಳಿಸುವುದು.*
- *ಮೀನುಗಾರಿಕೆ ದೋಣಿಗಳಲ್ಲಿ, ಮೀನುಗಾರಿಕೆ ಮೂಲಸೌಕರ್ಯಗಳಾದ ಮೀನುಗಾರಿಕೆ ಬಂದರು, ಇಳಿದಾಣಗಳು ಮತ್ತು ಮೀನು ಕೃಷಿ ಕಾರ್ಯಾಚರಣೆಗಳಲ್ಲಿ ಸೌರಶಕ್ತಿ ಬಳಕೆಯನ್ನು ಉತ್ತೇಜಿಸುವುದು.*
- *ಸಹ ಏಜೆನ್ಸಿಗಳು ಮತ್ತು ಖಾಸಗಿ ವಲಯದ ಸಹಕಾರ ಮತ್ತು ಸಮನ್ವಯದಲ್ಲಿ ಹವಾಮಾನ-ಸ್ಥಿತಿಸ್ಥಾಪಕ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು.*

### *6.6.2 ಪರಿಸರ ವ್ಯವಸ್ಥೆಯ ಆರೋಗ್ಯ ಮತ್ತು ಸಮಗ್ರತೆಯನ್ನು ಖಚಿತಪಡಿಸುವುದು*

ಭಾರತದ ಸಮುದ್ರ ಮತ್ತು ಒಳನಾಡಿನ ಪರಿಸರದಲ್ಲಿನ ಸ್ಥಿತಿಯು ಮಾಲಿನ್ಯದಿಂದಾಗಿ ಒತ್ತಡದಲ್ಲಿದೆ ಮತ್ತು ಇದು ಮೀನು ದಾಸ್ತಾನು ಕಡಿಮೆಯಾಗಲು ಒಂದು ಕಾರಣವಾಗಿದೆ. ಭೂಮಿಯಲ್ಲಿ ಹೆಚ್ಚುತ್ತಿರುವ ಮಾನವಜನ್ಯ ಚಟುವಟಿಕೆಗಳು ಮತ್ತು ಅಸಮರ್ಪಕ ಸಂಸ್ಕರಣೆಗೆ ಕಾರ್ಯವಿಧಾನಗಳಿಂದಾಗಿ ಘನತ್ಯಾಜ್ಯಗಳು ಅದರಲ್ಲೂ ನಿರ್ದಿಷ್ಟ ಪ್ಲಾಸ್ಟಿಕ್‌ಗಳಲ್ಲಿ (ವಿಶೇಷವಾಗಿ, ಸೂಕ್ಷ್ಮ-ಪ್ಲಾಸ್ಟಿಕ್ ಕಣಗಳು) ಸಮುದ್ರದಲ್ಲಿ ಮತ್ತು ಒಳನಾಡಿನ ನೀರಿನಲ್ಲಿ ಅನೇಕ ಪಟ್ಟು ಹೆಚ್ಚಾಗಿದೆ. ಇದು ಪ್ರಾಣಿ ಮತ್ತು ಸಸ್ಯಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಮೀನಿನ ಆಹಾರ ಚಕ್ರದ ಮೂಲಕ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳ ಮನುಷ್ಯನಿಗೆ ಮರಳಿ ಬರುತ್ತಿರುವ ಹಲವಾರು ಆತಂಕಕಾರಿ ಅಧ್ಯಯನಗಳಿವೆ.

ಉದ್ದೇಶ ಪೂರ್ವಕವಾಗಿ ಮತ್ತು ಉದ್ದೇಶ ರಹಿತವಾಗಿ ಸಮುದ್ರದಲ್ಲಿ ಮೀನುಗಾರಿಕಾ ಬಲೆಗಳನ್ನು ಬಿಡುತ್ತಿರುವುದು ಸೂಕ್ಷ್ಮ ಕಣಗಳ ವೃದ್ಧಿಗೆ ಮತ್ತು ಮೀನುಗಾರಿಕೆಗೆ (Ghost fishing) ಕಾರಣವಾಗಿ ಮೀನು ದಾಸ್ತಾನುಗಳ ಮೇಲೆ ಪರಿಣಾಮ ಬೀರುತ್ತದೆ. ಭೂ ಮತ್ತು ಸಮುದ್ರ ಆಧಾರಿತ ಮಾಲಿನ್ಯವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಮತ್ತು ಪರಿಸರ ವ್ಯವಸ್ಥೆಗಳ ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳಲು ನಿಯಂತ್ರಕ ಕಾರ್ಯವಿಧಾನಗಳನ್ನು ಬಲಪಡಿಸುವ ಉದ್ದೇಶವನ್ನು ನೀತಿ ನಿರ್ದೇಶನಗಳು ಹೊಂದಿವೆ. ಮೀನುಗಾರಿಕಾ ದೋಣಿಗಳ ವಿನ್ಯಾಸ, ನಿರ್ಮಾಣದಲ್ಲಿ ಮತ್ತು ತರುವಾಯ ಬಲೆ ಬಳಕೆಯಲ್ಲಿ ಅಗತ್ಯ ಕ್ರಮಗಳನ್ನು ಪರಿಗಣಿಸಿ ಮೀನುಗಾರಿಕಾ ದೋಣಿಗಳಿಂದ ಯಾವುದೇ ರೂಪದಲ್ಲಿ ಸಮುದ್ರ ಮಾಲಿನ್ಯಕ್ಕೆ ಕೊಡುಗೆ ನೀಡದಂತೆ ಖಚಿತಪಡಿಸಿಕೊಳ್ಳಲು ಮೀನುಗಾರರು ಎಲ್ಲ ಪ್ರಯತ್ನಗಳನ್ನು ಮಾಡುತ್ತಾರೆ.

ಒಳನಾಡಿನ ಮತ್ತು ಸಮುದ್ರ ಮೀನುಗಾರಿಕೆಯ ಮೇಲೆ ಪರಿಣಾಮ ಬೀರುವ ಆವಾಸಸ್ಥಾನಗಳ ಅವನತಿ (habitat degradation) ಮಾಲಿನ್ಯ ಮತ್ತು ಹವಾಮಾನ ಬದಲಾವಣೆಯಂತಹ ಬಾಹ್ಯ ಅಂಶಗಳನ್ನು ಸಹ ಈ ನೀತಿಯು ಪರಿಗಣಿಸುತ್ತದೆ. ಸುಧಾರಿತ ನಿರ್ವಹಣೆಯು ಮೀನು ದಾಸ್ತಾನುಗಳ ಕುಸಿತವನ್ನು ಹಿಮ್ಮೆಟ್ಟಿಸುವ ಸಾಮರ್ಥ್ಯವನ್ನು ಹೊಂದಿದೆ, ಇದು ಮೀನು ಜೀವರಾಶಿ ಮತ್ತು ಇಳುವರಿ ಹೆಚ್ಚಳಕ್ಕೆ ಕಾರಣವಾಗುತ್ತದೆ; ಒಳನಾಡು ಮತ್ತು ಸಮುದ್ರ ಮೀನುಗಾರಿಕೆಯ ವಾರ್ಷಿಕ ಆರ್ಥಿಕ ನಿವ್ವಳ ಲಾಭಗಳ ಹೆಚ್ಚಳಕ್ಕೆ ಮತ್ತು ಅಂತಿಮವಾಗಿ ಮೀನುಗಾರರು ಮತ್ತು ವಲಯದ ಇತರ ಪಾಲುದಾರರ ಆರ್ಥಿಕ ಆದಾಯವನ್ನು ಸುಧಾರಿಸುತ್ತದೆ. ಮೀನುಗಾರಿಕೆ ನಿರ್ವಹಣೆಗೆ ತೀವ್ರವಾಗಿ ಬದಲಾಯಿಸುವ ಮತ್ತು ಸುಸ್ಥಿರ ಬೆಳವಣಿಗೆಯನ್ನು ಸಾಧಿಸಲು ಸಹಾಯ ಮಾಡುವಂತಹ ಹೊಸ ಮಾಹಿತಿ ಮತ್ತು ತಂತ್ರಜ್ಞಾನಗಳ ಹರಿವನ್ನು ಉತ್ತೇಜಿಸಲು ನೀತಿ ನಿರಂತರವಾಗಿ ಪ್ರಯತ್ನಿಸುತ್ತದೆ.

ಮೂಲಭೂತ ಸೌಕರ್ಯಗಳಾದ ಬಂದರು ಮತ್ತು ಇಳಿದಾಣಗಳ ಅಭಿವೃದ್ಧಿಯು ಕೆಲವೊಮ್ಮೆ ಕರಾವಳಿಯುದ್ದಕ್ಕೂ ಕಡಲ ಕೊರೆತ ಮತ್ತು ಸಂಚಯಕ್ಕೆ ಕಾರಣವಾಗುತ್ತದೆ. ಈ ಬೆಳವಣಿಗೆಗಳು ಕರಾವಳಿ ಸಂರಚನೆಯಲ್ಲಿ ಬದಲಾವಣೆಗಳನ್ನು ತರಬಹುದು, ಇದು ಕರಾವಳಿ, ಪರಿಸರ ವಿಜ್ಞಾನ ಮತ್ತು ಅಂತಿಮವಾಗಿ ಮೀನುಗಾರಿಕೆಯ ಮೇಲೆ ಪರಿಣಾಮ ಬೀರಬಹುದು. ಕರಾವಳಿಯಲ್ಲಿ ಮೂಲಭೂತಸೌಕರ್ಯ ಅಭಿವೃದ್ಧಿಯನ್ನು ಪರಿಗಣಿಸುವಾಗ ಈ ಅಂಶಗಳನ್ನು ಪರಿಹರಿಸಲು ಸಾಕಷ್ಟು ಕಾರ್ಯವಿಧಾನಗಳನ್ನು ಸಿದ್ದಪಡಿಸಲು ಸರ್ಕಾರ ಪರಿಗಣಿಸುತ್ತದೆ.

ಕರಾವಳಿ ಮತ್ತು ಕಡಲ ತೀರದ ಪರಿಸರಗಳು ಮತ್ತು ಅದರಲ್ಲಿ ವಾಸಿಸುವ ಸಮುದ್ರ ಮೀನು ಸಂಪನ್ಮೂಲಗಳು ನದಿನೀರಿನ ಒಳಹರಿವು ಮತ್ತು ಪೋಷಕಾಂಶಗಳನ್ನು ತರುವ ಕೆಸರುಗಳ (sediments) ಮೇಲೆ ಹೆಚ್ಚು ಅವಲಂಬಿತವಾಗಿವೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಆದಾಗ್ಯೂ, ಈ

ಜಲಮೂಲಗಳು ಮಾನವಜನ್ಯ ಒತ್ತಡಗಳಿಗೆ ಒಳಪಟ್ಟಿರುತ್ತವೆ, ಇದರ ಪರಿಣಾಮವಾಗಿ ಪರಿಸರ ಗುಣಮಟ್ಟ ಕುಸಿಯುತ್ತದೆ ಮತ್ತು ನದಿ ನೀರಿನ ಒಳಹರಿವು ಕಡಿಮೆಯಾಗುತ್ತದೆ. ಇಂತಹ ಬದಲಾವಣೆಗಳು ಹಲವಾರು ಪ್ರಮುಖ ಅಳಿವೆಯ ಮತ್ತು ಸಮುದ್ರ ಮೀನುಗಾರಿಕಾ ಸಂಪನ್ಮೂಲಗಳ ದಾಸ್ತಾನುಗಳ ಮೇಲೆ ಪರಿಣಾಮ ಬೀರುತ್ತವೆ, ವಿಶೇಷವಾಗಿ ಹೆಚ್ಚಿನ ಮೌಲ್ಯದ ಸೀಗಡಿಗಳು ಒಳನಾಡಿನ ಕರಾವಳಿ ನೀರಿನಲ್ಲಿ ತಮ್ಮ ಜೀವನ ಚಕ್ರದ ಒಂದು ಹಂತವನ್ನು ಪೂರ್ಣಗೊಳಿಸುತ್ತವೆ. ಆದ್ದರಿಂದ, ಅಂತಹ ಕಡಲ ತೀರದ ಪರಿಸರ ವ್ಯವಸ್ಥೆಗಳ ಸಮಗ್ರತೆಯನ್ನು ಕಾಪಾಡಲು, ನದಿಗಳ ನೀರಿನ ನಿರ್ವಹಣೆ ಮತ್ತು ಕನಿಷ್ಠ ನೀರಿನ ಹರಿವಿಗೆ ನೀತಿಯು ಆದ್ಯತೆ ನೀಡುತ್ತದೆ.

ಒಳನಾಡಿನ ವಲಯದಲ್ಲಿ, ನದಿಗಳು ಮತ್ತು ಅವುಗಳ ಉಪನದಿಗಳ ಮೇಲೆ ನಿರ್ಮಿಸಲಾದ ಅಣೆಕಟ್ಟುಗಳು ಮತ್ತು ತಡೆಗೋಡೆಗಳು ತಮ್ಮ ಜೈವಿಕ ಜೀವನ ಚಕ್ರದ ಭಾಗಗಳನ್ನು ಪೂರ್ಣಗೊಳಿಸಲು ನದಿಯ ಮೇಲಕ್ಕೆ ಮತ್ತು ಕೆಳಕ್ಕೆ ಚಲಿಸುವ ಮೀನು ಪ್ರಭೇದಗಳ ವಲಸೆಯನ್ನು ನಿರ್ಬಂಧಿಸುತ್ತವೆ. ನೀತಿ ಮಾರ್ಗದರ್ಶಿಗಳ ನದಿಗಳು ಮತ್ತು ಅವುಗಳ ಉಪನದಿಗಳಲ್ಲಿನ ಭವಿಷ್ಯದ ಎಲ್ಲಾ ಮೂಲಭೂತ ಸೌಕರ್ಯ ಅಭಿವೃದ್ಧಿಯಲ್ಲಿ ಅಗತ್ಯ ಸುರಕ್ಷತೆಗಳು ಜಾರಿಯಲ್ಲಿವೆ ಎಂದು ಖಚಿತಪಡಿಸುತ್ತದೆ ಮತ್ತು ಕಾರ್ಯಸಾಧ್ಯವಾದಲ್ಲೆಲ್ಲಾ ಅಸ್ತಿತ್ವದಲ್ಲಿರುವ ರಚನೆಗಳಲ್ಲಿನ ಪರಿಸ್ಥಿತಿಯನ್ನು ಸರಿಪಡಿಸಲು ಪ್ರಯತ್ನಿಸುತ್ತದೆ.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಪ್ಲಾಸ್ಟಿಕ್ ಸೇರಿದಂತೆ ಮಾಲಿನ್ಯಕಾರಕಗಳನ್ನು ನಿಯಂತ್ರಿಸಲು ನಿಯಂತ್ರಕ ಕಾರ್ಯವಿಧಾನಗಳನ್ನು ಬಲಪಡಿಸುವುದು ಮತ್ತು ಮೀನುಗಾರಿಕೆಯಿಂದ ಮಾಲಿನ್ಯವನ್ನು ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಉದಾಹರಣೆಯಿಂದ ಮುನ್ನಡೆಸಲು ಪ್ರೋತ್ಸಾಹಿಸುವುದು.*
- *ಸುಧಾರಿತ ನಿರ್ವಹಣಾ ಕ್ರಮಗಳ ಮೂಲಕ ಆವಾಸಸ್ಥಾನದ (habitat) ಅವನತಿಯನ್ನು ತಡೆಯುವುದು, ಹವಾಮಾನ ಬದಲಾವಣೆಯ ವಿರುದ್ಧ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸುವುದು ಮತ್ತು ಲಭ್ಯವಿರುವಲ್ಲೆಲ್ಲಾ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು.*
- *ಮೀನುಗಾರಿಕೆ ಸಂಬಂಧಿತ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯ ಋಣಾತ್ಮಕ ಪರಿಣಾಮಗಳನ್ನು ಕಡಿಮೆ ಮಾಡುವುದು.*
- *ನದಿಗಳು ಮತ್ತು ಅವುಗಳ ಉಪನದಿಗಳ ಮೇಲೆ ನಿರ್ಮಿಸಲಾದ ಅಣೆಕಟ್ಟುಗಳು ಮತ್ತು ಬ್ಯಾರೇಜ್‌ಗಳಲ್ಲಿ ವಲಸೆ ಮೀನು ಪ್ರಭೇದಗಳ ಮುಕ್ತ ಚಲನೆಯನ್ನು ಖಚಿತಪಡಿಸುವುದು.*
- *ಒಳನಾಡು ಮತ್ತು ಕರಾವಳಿ ಪರಿಸರ ವ್ಯವಸ್ಥೆಯನ್ನು ರಕ್ಷಿಸಲು ಭೂದೃಶ್ಯದಿಂದ ಕಡಲತಡಿಯ (Land scape to Sea scape) ವಿಧಾನಗಳನ್ನು ಉತ್ತೇಜಿಸುವುದು.*

### *6.6.3 ಕೀಸ್ಟೋನ್ ಪ್ರಭೇದಗಳು ಮತ್ತು ಸಾಂಪ್ರದಾಯಿಕ ಪರಿಸರ ವ್ಯವಸ್ಥೆಗಳನ್ನು ರಕ್ಷಿಸುವುದು*

ಸುಸ್ಥಿರ ಮೀನುಗಾರಿಕೆಯ ಅಭಿವೃದ್ಧಿಯನ್ನು ಉತ್ತೇಜಿಸುವಾಗ, ಈ ನೀತಿಯು ಒಳನಾಡಿನ ಮತ್ತು ಸಮುದ್ರ ಪರಿಸರದ ಪರಿಸರ ಸಮಗ್ರತೆಯ ನಿರ್ವಹಣೆಗೆ ಒತ್ತು ನೀಡುತ್ತದೆ, ಇದರಿಂದಾಗಿ ಅಳಿವಿನಂಚಿನಲ್ಲಿರುವ, ಅಳಿವಿಗೆ ಒಳಗಾಗಿರುವ ಅಥವಾ ಸಂರಕ್ಷಿತ ಮೀನುಗಳ ಜಾತಿಗಳ ಮೇಲೆ ಯಾವುದೇ ದುಷ್ಪರಿಣಾಮಗಳಿಲ್ಲ ಎಂದು ಖಚಿತಪಡಿಸಿಕೊಳ್ಳಲಾಗುವುದು. ಮ್ಯಾಂಗ್ರೋವ್ಗಳು, ಕಡಲ ಜಲಸಸ್ಯಗಳ ಬೆಡ್ ಗಳು ಮತ್ತು ಹವಳದ ಬಂಡೆಗಳು ಕರಾವಳಿ ಸಮುದ್ರ ಪರಿಸರ ವ್ಯವಸ್ಥೆಗಳ ಅವಿಭಾಜ್ಯ ಅಂಗವಾಗಿದೆ ಮತ್ತು ಅನೇಕ ಮೀನು ಪ್ರಭೇದಗಳು ಮತ್ತು ಸಮುದ್ರ ಸಸ್ತನಿಗಳಿಗೆ (ಉದಾ. ಡುಗಾಂಗ್) ವಾಸಸ್ಥಾನ ಸೇರಿದಂತೆ ಹಲವಾರು ಪರಿಸರ ವ್ಯವಸ್ಥೆಯ ಸೇವೆಗಳನ್ನು ಒದಗಿಸುತ್ತವೆ. ಅಂತಹ ಪರಿಸರ ವ್ಯವಸ್ಥೆಗಳನ್ನು ಮಾನವಜನ್ಯ ಚಟುವಟಿಕೆಗಳ ಪರಿಣಾಮಗಳಿಂದ ರಕ್ಷಿಸಲಾಗುತ್ತದೆ. ಅಂತೆಯೇ, ಅಳಿವಿನಂಚಿನಲ್ಲಿರುವ ಅನೇಕ ಪ್ರಭೇದಗಳು ನದಿಗಳಲ್ಲಿ (ಗಂಗೆಯ ಡಾಲ್ಫಿನ್‌ಗಳು) ವಾಸಿಸುತ್ತವೆ ಮತ್ತು ಅವುಗಳ ಸಂಖ್ಯೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

### *6.6.4 ಮೀನಿನ ಮೀಲ್ (Fish meal) ಉತ್ಪಾದನೆ ಮತ್ತು ಚಿಕ್ಕ ಮೀನುಗಳ ಹಿಡುವಳಿಯನ್ನು ನಿಯಂತ್ರಿಸುವುದು*

ಮೀನಿನ ಮೀಲ್ ಉತ್ಪಾದನೆಯಲ್ಲಿ ಭಾರತ ಹೊಸದಾಗಿ ಪ್ರವೇಶಿಸಿರುತ್ತದೆ. ಈ ಎಲ್ಲಾ ವರ್ಷಗಳಲ್ಲಿ, ಮೀನಿನ ಮೀಲ್‌ನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು ಆದರೆ ಈಗ ದೇಶೀಯ ಅವಶ್ಯಕತೆಗಳನ್ನು ಪೂರೈಸಿದ ನಂತರ, ಭಾರತವು ಮೀನಿನ ಮೀಲ್‌ನ ನಿವ್ವಳ ರಫ್ತುದಾರ ದೇಶವಾಗಿದೆ. ಮೀನಿನ ಮೀಲ್ ಉತ್ಪಾದನೆ ಮತ್ತು ಮರಿ ಸಂಗ್ರಹಣೆಯ ಕುರಿತು ನೀತಿ ಮಾರ್ಗದರ್ಶಿಗಳು ಈ ವಲಯವನ್ನು ಉಳಿಸಿಕೊಳ್ಳಲು ತುರ್ತು ಅವಶ್ಯಕತೆಗಳಲ್ಲಿ ಒಂದಾಗಿದೆ. ಸಾಮಾನ್ಯವಾಗಿ ಜಲಕೃಷಿಗೆ ಮೀನಿನ ಮೀಲ್ ಮತ್ತು ಮರಿ ಉತ್ಪಾದನೆ ಸಂಬಂಧಪಟ್ಟದ್ದು, ವಾಸ್ತವದಲ್ಲಿ, ಹಿಡುವಳಿ ಮತ್ತು ಜಲಕೃಷಿ ಮೀನುಗಾರಿಕೆಯ ಅಂಚಿನಲ್ಲಿ ನಡೆಯುತ್ತದೆ ಮತ್ತು ಎರಡರ ಮೇಲೂ ಪರಿಣಾಮ ಬೀರಬಹುದು. ಕೃಷಿ ಕೊಳಗಳಲ್ಲಿ ಸಂಗ್ರಹಿಸಲು ಅಥವಾ ಸಮುದ್ರ ಕೃಷಿಗಾಗಿ ನಿಸರ್ಗದಿಂದ ಸಂಗ್ರಹಿಸಿದ ಮೀನುಮರಿಗಳನ್ನು ಉಳಿಸಿಕೊಳ್ಳುವಾಗ, ತಿರಸ್ಕರಿಸಲ್ಪಟ್ಟ ಅನೇಕ ಇತರ ಮೀನಿನ ಜಾತಿಗಳ ಸಂಖ್ಯೆಯ ಮೇಲೆ ಪರಿಣಾಮ ಬೀರುತ್ತದೆ. ಮೀನಿನ ಮೀಲ್‌ಗಳ ಉತ್ಪಾದನಾ ಘಟಕಗಳು, ಒಂದು ಕಡೆ 'ಕಸದ ಮೀನು'ಗಳ (Trash fish) ಉತ್ಪಾದಕ ಬಳಕೆಗೆ ಸಹಾಯ ಮಾಡಿವೆ. ಆದರೆ ಮೀನಿನ ಮೀಲ್ ಘಟಕಗಳ ಸಂಖ್ಯೆ ಹೆಚ್ಚಿದಾಗ ಅವುಗಳ ಬೇಡಿಕೆಗಳನ್ನು ಪೂರೈಸಲು ಗಾತ್ರ ಮತ್ತು ಸಂರಕ್ಷಣೆಯ ಸ್ಥಿತಿಯನ್ನು ಲೆಕ್ಕಿಸದೆ ದೊಡ್ಡ ಪ್ರಮಾಣದಲ್ಲಿ ಹಿಡಿಯಲು ಮೀನುಗಾರಿಕಾ ದೋಣಿಗಳು ಈಗ ವಿನಾಶಕಾರಿ

ಬಲೆಗಳನ್ನು ಬಳಸುತ್ತಿವೆ. ಕರ್ನಾಟಕದಲ್ಲಿರುವ ಘಟಕಗಳಲ್ಲಿ ಉತ್ಪತ್ತಿಯಾಗುವ ದೊಡ್ಡ ಪ್ರಮಾಣದ ಮೀನಿನ ಮೀಲ್‌ಗಳು ಸಣ್ಣ ಗಾತ್ರದ ಭೂತಾಯಿ ಮೀನು (ಸಾರ್ಡೀನ್) ಗಳನ್ನು ಬಳಸುತ್ತದೆ, ಇದು ಭೂತಾಯಿ ಮೀನಿನ ಸಂಖ್ಯೆಯ ಸುಸ್ಥಿರತೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ನೀತಿ ಮಾರ್ಗದರ್ಶಿಗಳು ಅಂತಹ ಪರಿವರ್ತನೆಗಾಗಿ ಖಾದ್ಯ ಮೀನು ಜಾತಿಗಳ ಬಳಕೆಯನ್ನು ನಿರುತ್ಸಾಹಗೊಳಿಸುತ್ತವೆ. ಇದಲ್ಲದೆ, ಪರ್ಯಾಯ ಮೂಲಗಳು ಮತ್ತು ಸುಸ್ಥಿರವಾಗಿ ಹಿಡುವಳಿ ಮಾಡಿದ ಮೀನುಗಾರಿಕೆಯಿಂದ ಮೀನಿನ ಮೀಲ್ ನ್ನು ಉತ್ಪಾದಿಸುವ ಕುರಿತು ಆರ್ & ಡಿ ಅನ್ನು ಪ್ರೋತ್ಸಾಹಿಸಲಾಗುವುದು ಮತ್ತು ಗುಣಮಟ್ಟದ ಮೀನಿನ ಮೀಲ್‌ನ್ನು ಎಲ್ಲಾ ಕ್ಷೇತ್ರಗಳಿಗೆ (ಕೋಳಿ, ಜಲಚರ ಸಾಕಣೆ, ಇತ್ಯಾದಿ) ಸ್ಥಿರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಒಟ್ಟು ಮೀನಿನ ಮೀಲ್‌ನ ಅಗತ್ಯವನ್ನು ಅಂದಾಜು ಮಾಡಲಾಗುತ್ತದೆ.

### *6.6.5 ನೀಲಿ ಆರ್ಥಿಕತೆ ಮತ್ತು ಸಮುದ್ರ ಪ್ರಾದೇಶಿಕ ಯೋಜನೆ*

ಭಾರತದ ಕರಾವಳಿ ಮತ್ತು ಸಮುದ್ರ ಪರಿಸರವು ಹೆಚ್ಚಿನ ಉತ್ಪಾದಕತೆಯನ್ನು ಹೊಂದಿರುವ ವಿಶ್ವದ ಶ್ರೀಮಂತ ಪರಿಸರ ವ್ಯವಸ್ಥೆಗಳಲ್ಲಿ ಒಂದಾಗಿದೆ. ಸಂಪನ್ಮೂಲಗಳನ್ನು ಸುಸ್ಥಿರವಾಗಿ ಹಿಡುವಳಿ ಮಾಡಿದರೆ ಮತ್ತು ಉತ್ತಮವಾಗಿ ನಿರ್ವಹಿಸಿದರೆ ಮಾತ್ರ ಈ ನೈಸರ್ಗಿಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳಲು, ಮತ್ತು ಆಹಾರ ಸುರಕ್ಷತೆ ಮತ್ತು ಲಾಭದಾಯಕ ಉದ್ಯೋಗವನ್ನು ಖಚಿತಪಡಿಸಿಕೊಳ್ಳಲು ನೀಲಿ ಆರ್ಥಿಕತೆಯು ಉತ್ತಮ ಅವಕಾಶವನ್ನು ಒದಗಿಸುತ್ತದೆ. ಭಾರತವು ನೀಲಿ ಆರ್ಥಿಕತೆಯ ಕಾರ್ಯನಿರತ ವ್ಯಾಖ್ಯಾನವನ್ನು ಈ ರೀತಿ ಸ್ಪಷ್ಟಪಡಿಸಲಾಗಿದೆ. ''ನೀಲಿ ಆರ್ಥಿಕತೆಯು ಸಮುದ್ರ ಆರೋಗ್ಯವನ್ನು ಕಾಪಾಡುತ್ತ, ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಭಾರತದ ಕಾನೂನು ವ್ಯಾಪ್ತಿಗೆ ಒಳಪಡುವ ಸಾಗರಗಳು ಮತ್ತು ಸಮುದ್ರಗಳ ಸಾಮರ್ಥ್ಯವನ್ನು ಅನ್ವೇಷಿಸಲು ಮತ್ತು ಉತ್ತಮಗೊಳಿಸಲು ಬಯಸುತ್ತದೆ. ನೀಲಿ ಆರ್ಥಿಕತೆಯು ಉತ್ಪಾದನೆ ಮತ್ತು ಬಳಕೆಯನ್ನು ಸಾಮರ್ಥ್ಯದೊಂದಿಗೆ ಸಂಪರ್ಕಿಸುತ್ತದೆ, ಮತ್ತು ಆರ್ಥಿಕ ಅಭಿವೃದ್ಧಿ ಮತ್ತು ಪರಿಸರ ಸುಸ್ಥಿರತೆಗೆ ಸಮಗ್ರ ಕಾರ್ಯವಿಧಾನವನ್ನು ರೂಪಿಸುತ್ತದೆ. ಇದು ಕಡಲಾಚೆಯ ಸಂಪನ್ಮೂಲಗಳು (ಸಮುದ್ರ) ಹಾಗೆಯೇ ಕರಾವಳಿ (ತೀರ ಪ್ರದೇಶ) ಎರಡನ್ನೂ ಒಳಗೊಳ್ಳುತ್ತದೆ.'' ಪ್ರಸ್ತುತ ಅಂದಾಜಿನ ಪ್ರಕಾರ, ಒಟ್ಟು ಮೌಲ್ಯವರ್ಧನೆಯಲ್ಲಿ (ಜಿವಿಎ) ಭಾರತದಲ್ಲಿ ನೀಲಿ ಆರ್ಥಿಕತೆಯ ಗಾತ್ರವು ಸ್ಥಿರ ಬೆಲೆಗಳಲ್ಲಿ 4.6 ಲಕ್ಷ ಕೋಟಿ ರೂ. ಮತ್ತು 2016-17ರಲ್ಲಿ ಪ್ರಸ್ತುತ ಬೆಲೆಯಲ್ಲಿ 5.5 ಲಕ್ಷ ಕೋಟಿ ರೂ. ಎಂದು ಅಂದಾಜಿಸಲಾಗಿದೆ.

ಮೀನುಗಾರಿಕೆ ಮತ್ತು ಜಲಕೃಷಿ ಕ್ಷೇತ್ರವು ಭಾರತೀಯ ಆರ್ಥಿಕತೆಯ ಕ್ರಿಯಾತ್ಮಕ ವಿಭಾಗವಾಗಿ ಹೊರಹೊಮ್ಮುತ್ತಿದೆ ಮತ್ತು ಮುಂಬರುವ ಅವಧಿಯಲ್ಲಿ ಗಮನಾರ್ಹ ಬೆಳವಣಿಗೆಯ ಪಥದಲ್ಲಿ ಸಾಗುವಂತಿದೆ. ಮೀನುಗಾರಿಕೆ ಮತ್ತು ಜಲಕೃಷಿ ಸಹ ನೀಲಿ ಆರ್ಥಿಕತೆಯ ಉಪಕ್ರಮಗಳ ಪ್ರಮುಖ ಅಂಶಗಳಾಗಿವೆ. ಈ ಉಪಕ್ರಮವು ಆಹಾರ ಭದ್ರತೆ, ಬಡತನ ನಿರ್ಮೂಲನೆ ಮತ್ತು ಜಲಸಂಪನ್ಮೂಲಗಳ ಸುಸ್ಥಿರ ನಿರ್ವಹಣೆಗೆ

ಬೆಂಬಲವಾಗಿ ಹೂಡಿಕೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಸಮುದ್ರಾಹಾರ ಮೌಲ್ಯ ಸರಪಳಿಗೆ ವಿಶೇಷ ಗಮನವನ್ನು ನೀಡಿ, ಜಲಸಂಪನ್ಮೂಲಗಳ ಸುಸ್ಥಿರ ಬೆಳವಣಿಗೆ ಮತ್ತು ನಿರ್ವಹಣೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಈ ಉಪಕ್ರಮವು ಸಮಗ್ರ ಕಾರ್ಯವಿಧಾನವನ್ನು ರೂಪಿಸುತ್ತದೆ.

ಆದಾಗ್ಯೂ, ಸಮುದ್ರ ಜಾಗದ ಸ್ಪರ್ಧಾತ್ಮಕ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು, ನೀಲಿ ಆರ್ಥಿಕತೆಯ ಅನುಷ್ಠಾನಕ್ಕೆ ಪ್ರಮುಖ ಸಾಧನವಾಗಿರುವ ಸಾಗರ ಪ್ರಾದೇಶಿಕ ಯೋಜನೆ (ಎಂಎಸ್‌ಪಿ) ಯು ಮಹತ್ವವನ್ನು ಪಡೆದುಕೊಳ್ಳುತ್ತದೆ. ಸಮುದ್ರಗಳಿಂದ ಖನಿಜ ಮತ್ತು ತೈಲ ಪರಿಶೋಧನೆ / ಹೊರತೆಗೆಯುವ ಬೇಡಿಕೆ, ಹೆಚ್ಚುತ್ತಿರುವ ಕಡಲ ವಾಣಿಜ್ಯ ದಟ್ಟಣೆಯ ಪ್ರಮಾಣ ಮತ್ತು ರಕ್ಷಣಾ ಉದ್ದೇಶಗಳಿಗಾಗಿ ಸ್ಥಳಗಳನ್ನು ಕಾಯ್ದಿರಿಸುವುದರೊಂದಿಗೆ, ಮೀನುಗಾರಿಕೆಗೆ ಲಭ್ಯವಿರುವ ಸಮುದ್ರದ ಸ್ಥಳವು ಕಡಿಮೆಯಾಗುತ್ತಿದೆ. ಸಮಕಾಲೀನ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು, ಎಲ್ಲಾ ಆರ್ಥಿಕ ಚಟುವಟಿಕೆಗಳು ಸರಿಯಾದ ಸ್ಥಳವನ್ನು ಪಡೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಘರ್ಷಣೆಗಳನ್ನು ಕಡಿಮೆ ಮಾಡಲು ನೀತಿಯು ಉತ್ತಮವಾದ ಎಂಎಸ್‌ಪಿಗೆ ಒತ್ತು ನೀಡುತ್ತದೆ. ಅಗತ್ಯವಿರುವಲ್ಲಿ ಸಂಶೋಧನಾ ಬೆಂಬಲವನ್ನು ಸಂಶೋಧನಾ ಸಂಸ್ಥೆಗಳಿಂದ ಸಹ ಕೋರಲಾಗುತ್ತದೆ.

## 6.7 ಸಾಮಾಜಿಕ ಭದ್ರತೆ ಮತ್ತು ಸುರಕ್ಷತಾ ಜಾಲಗಳು

### *6.7.1 ಸಣ್ಣ ಪ್ರಮಾಣದ ಮೀನುಗಾರಿಕೆ ಮತ್ತು ಜಲಕೃಷಿಯನ್ನು ಸುರಕ್ಷಿತಗೊಳಿಸುವುದು*

ಸಮುದ್ರ ಮತ್ತು ಒಳನಾಡಿನ ನೀರಿನಲ್ಲಿನ ಭಾರತೀಯ ಮೀನುಗಾರಿಕೆಯ ಮೂಲ ಲಕ್ಷಣವೆಂದರೆ ಸಣ್ಣ-ಪ್ರಮಾಣದ ಮೀನುಗಾರಿಕೆಯ (ಎಸ್‌ಎಸ್‌ಎಫ್) ಪ್ರಾಬಲ್ಯ. ಇದೇ ರೀತಿಯ ಚಿತ್ರವನ್ನು ಜಲಕೃಷಿಯಲ್ಲಿಯೂ ಕಾಣಬಹುದು, ಅಲ್ಲಿ ಹೆಚ್ಚಿನ ಮೀನು ಕೃಷಿಕರು ಬಹಳ ಕಡಿಮೆ ಹಿಡುವಳಿಗಳನ್ನು ಹೊಂದಿದ್ದಾರೆ ಮತ್ತು ಚಿಕ್ಕ ಕೊಳಗಳಲ್ಲಿ ಮೀನುಗಳನ್ನು ಬೆಳೆಸುತ್ತಾರೆ. ಕ್ಷೇತ್ರದ ಈ ಗುಣಲಕ್ಷಣವು ಭವಿಷ್ಯ ಮತ್ತು ಸಮಸ್ಯೆಗಳನ್ನು ಹೊಂದಿದೆ. ಉದ್ಯೋಗಾವಕಾಶದ ವಿಷಯದಲ್ಲಿ, ಬಂಡವಾಳದ ಕಡಿಮೆ ಅವಶ್ಯಕತೆ, ಸರಳ ತಂತ್ರಜ್ಞಾನದ ಬಳಕೆ ಇತ್ಯಾದಿಗಳು ಉತ್ತಮ ಗುಣಗಳಾಗಿವೆ. ಹೆಚ್ಚಿನ ಸಂಖ್ಯೆ ಹಳ್ಳಿಗಾಡಿನ ಪ್ರದೇಶಗಳಲ್ಲಿ, ಗ್ರಾಮೀಣ ಒಳನಾಡಿನಲ್ಲಿ ಮತ್ತು ಕರಾವಳಿಯಲ್ಲಿ ಹೆಚ್ಚು ಚದುರಿಹೋಗಿರುವುದು, ಅಗತ್ಯವಾದ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಜ್ಞಾನ ಮತ್ತು ತಂತ್ರಜ್ಞಾನ, ಮಾರ್ಕೆಟಿಂಗ್, ಮಾನಿಟರಿಂಗ್ ಮತ್ತು ಕಡಿಮೆ ಸಾಮರ್ಥ್ಯದ ಹೂಡಿಕೆ ಮತ್ತು ನಾವೀನ್ಯತೆಗಳನ್ನು ವಿಸ್ತರಣೆಗೆ ಸಮಸ್ಯೆಯಾಗಿವೆ.

ಸಣ್ಣ ಪ್ರಮಾಣದ ಮೀನುಗಾರಿಕೆಯನ್ನು (ಎಸ್‌ಎಸ್‌ಎಫ್) ಭದ್ರಪಡಿಸಿಕೊಳ್ಳಲು ಅಗತ್ಯವಿರುವ ಮೊದಲ ಮತ್ತು ಪ್ರಮುಖ ನೀತಿ ಮಾರ್ಗದರ್ಶಿಗಳು ಹೀಗಿದೆ: (i) ಅಂತರರಾಷ್ಟ್ರೀಯ ಮಾರ್ಗಸೂಚಿಗಳು ಮತ್ತು ರಾಷ್ಟ್ರೀಯ ಸಮಾಲೋಚನೆಗಳನ್ನು ಆಧರಿಸಿ 'ಸಣ್ಣ-ಪ್ರಮಾಣದ ಮೀನುಗಾರಿಕೆ'ಯನ್ನು ಕಾನೂನು

ಬದ್ಧವಾಗಿ ಪೋಷಿಸುವುದು. ನೀತಿ ಬೆಂಬಲಕ್ಕಾಗಿ ಇತರ ಪ್ರಮುಖ ಕ್ಷೇತ್ರಗಳು: (ii) ಸಣ್ಣ–ಪ್ರಮಾಣದ ಕೃಷಿಕರಿಗೆ ವ್ಯವಹಾರವನ್ನು ನಿರ್ವಹಿಸಲು ಸ್ವಯಂ–ಸಂಘಟಿಸಲು ಪ್ರೋತ್ಸಾಹಕಗಳನ್ನು ವಿನ್ಯಾಸ ಗೊಳಿಸುವುದು; (iii) ಕೌಶಲ್ಯ, ಪರಿಣತಿ ಮತ್ತು ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸುವುದು. (iv) ಸ್ವ–ಸಹಾಯ ಗುಂಪುಗಳು (ಸ್ವಸಹಾಯ ಸಂಘಗಳು) / ಸಹಕಾರಿಗಳು / ಮೀನುಗಾರರ ಸಂಘ (ಎಫ್‌ಎಫ್‌ಪಿಒ) ಗಳಾಗಿ ಸಂಘಟಿಸಲು ಮತ್ತು ಅವರ ಉದ್ಯಮವನ್ನು ಹೆಚ್ಚಿಸುವುದು; (V) ಎಸ್‌ಎಸ್‌ಎಫ್‌ಗಳಿಗಾಗಿ ನೈಸರ್ಗಿಕ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಗುರುತಿಸುವುದು / ಹಂಚಿಕೆ ಮಾಡುವುದು; (vi) ವಿಶೇಷವಾಗಿ ಎಸ್‌ಎಸ್‌ಎಫ್ ಮಹಿಳೆಯರಿಗೆ ಅಗತ್ಯ ಕೌಶಲ್ಯ ಮತ್ತು ಸಂಪನ್ಮೂಲಗಳನ್ನು ಪಡೆಯಲು ಕ್ರಮವಹಿಸುವುದು. ಮತ್ತು (vii) ಸ್ಥಿತಿಸ್ಥಾಪಕತ್ವ ಮತ್ತು ಸಾಮಾಜಿಕ ಸುರಕ್ಷತಾ ಜಾಲಗಳನ್ನು ವಿಶೇಷವಾಗಿ ಜೀವ ವಿಮೆ, ಅವರ ಉಪಕರಣ, ಬಲೆ, ಸ್ವತ್ತುಗಳನ್ನು ನೈಸರ್ಗಿಕ ವಿಕೋಪ ವಿಮೆ ಮೂಲಕ ಸುಧಾರಿಸುವುದು.

ಭೂ–ನೀರು–ಬಳಕೆಯ ನೀತಿ, ಅಗತ್ಯವಿರುವ ಕಡೆ ಮೀನುಗಾರಿಕೆ ಸಾಮರ್ಥ್ಯವನ್ನು ಉತ್ತಮಗೊಳಿಸುವುದು, ಸಮುದ್ರ ಮತ್ತು ಒಳನಾಡಿನ ನೀರಿನ ಪರ್ಯಾಯ ಉಪಯೋಗಗಳು ಮುಂತಾದ ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಮಾತುಕತೆಗಳಲ್ಲಿ ಎಸ್‌ಎಸ್‌ಎಫ್‌ನ ಸಂಪೂರ್ಣ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ನೀತಿ ಬೆಂಬಲವೂ ಅಗತ್ಯವಾಗಿರುತ್ತದೆ. ಇದನ್ನು ಮಾಡಲು ಮೀನುಗಾರಿಕೆ ಮತ್ತು ಜಲಕೃಷಿ ಕ್ಷೇತ್ರಕ್ಕೆ ಎಸ್‌ಎಸ್‌ಎಫ್ ನೀಡಿದ ಕೊಡುಗೆಗಳ ಬಗ್ಗೆ ಸಮರ್ಪಕ ಮಾಹಿತಿಯನ್ನು ಸಂಗ್ರಹಿಸುವುದು ಅಗತ್ಯವಾಗಿದೆ, ಮತ್ತು ಅದು ಸಾಮಾನ್ಯವಾಗಿ ಸ್ಪಷ್ಟವಾಗಿರುವುದಿಲ್ಲ.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಕ್ಷೇತ್ರವನ್ನು ವ್ಯಾಖ್ಯಾನಿಸುವ ಸಲುವಾಗಿ ಎಸ್‌ಎಸ್‌ಎಫ್‌ನ ವ್ಯಾಪ್ತಿ ಮತ್ತು ಗುಣಲಕ್ಷಣಗಳನ್ನು ಒಪ್ಪುವುದು.*
- *ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಮಾತುಕತೆಗಳಲ್ಲಿ ಎಸ್‌ಎಸ್‌ಎಫ್‌ನ ಸಂಪೂರ್ಣ ಭಾಗವಹಿಸುವಿಕೆ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಖಚಿತಪಡಿಸುವುದು.*

### *6.7.2 ಸಾಮಾಜಿಕ ಭದ್ರತೆ, ಲಿಂಗ ಸಮಾನತೆ ಮತ್ತು ಸ್ಥಿತಿಸ್ಥಾಪಕತ್ವವನ್ನು ಪೂರೈಸುವುದು*

ಪ್ರಸ್ತುತ ಕಲ್ಯಾಣ ಕ್ರಮಗಳನ್ನು ಮುಂದುವರೆಸಲು ಸರ್ಕಾರ ಪರಿಗಣಿಸುತ್ತದೆ ಮತ್ತು ನೇರ ಲಾಭ ವರ್ಗಾವಣೆ ಯೋಜನೆ (ಡಿಬಿಟಿಎಸ್) ಮೂಲಕ ದೇಶದ ಮೀನುಗಾರ ಸಮುದಾಯ / ಮೀನು ಕಾರ್ಮಿಕರಿಗೆ ಸಮರ್ಪಕ ಸುರಕ್ಷತಾ ಜಾಲಗಳನ್ನು ಒದಗಿಸಲು ಕಾರ್ಯಕ್ರಮಗಳನ್ನು ಮತ್ತಷ್ಟು ಬಲಪಡಿಸುತ್ತದೆ. ಅಂತಹ ಕ್ರಮಗಳಲ್ಲಿ ಸಮುದಾಯ ಕಲ್ಯಾಣ, ವಿಮೆ, ವಸತಿ ಮತ್ತು ಮೀನುಗಾರರಿಗೆ ಇತರ

ಸೌಲಭ್ಯಗಳು ಸಹ ಸೇರಿವೆ. ವಿಪರೀತ ಪ್ರಕೃತಿಯ ಹವಾಮಾನ ಘಟನೆಗಳಾದ ಚಂಡಮಾರುತದ ಉಲ್ಬಣಗಳು, ಚಂಡಮಾರುತಗಳು, ರಾಕ್ಷಸ ಅಲೆಗಳು ಮತ್ತು ಪ್ರವಾಹಗಳನ್ನು ನೈಸರ್ಗಿಕ ವಿಪತ್ತುಗಳು ಎಂದು ಪರಿಗಣಿಸಲಾಗುತ್ತದೆ. ಅದೇ ರೀತಿಯಲ್ಲಿ, ತೈಲ ಸೋರಿಕೆಗಳಂತಹ ಮಾನವ ನಿರ್ಮಿತ ಅವಘಡಗಳನ್ನು ಸಹ ವಿಪತ್ತುಗಳೆಂದು ಪರಿಗಣಿಸಲಾಗುತ್ತದೆ ಮತ್ತು ತೊಂದರೆಯಾದ ಮೀನುಗಾರಿಕೆ ಸಮುದಾಯಗಳಿಗೆ ಅವರ ಜೀವನೋಪಾಯದ ಪುನಃಸ್ಥಾಪನೆಗೆ ಬೆಂಬಲ / ನೆರವು ನೀಡಲಾಗುವುದು. ಸಮುದ್ರದಲ್ಲಿ ಮೀನುಗಾರರ ಪ್ರಾಣಹಾನಿ ಪ್ರಕರಣಗಳಲ್ಲಿ, ಪರಿಹಾರಕ್ಕಾಗಿ ಕಾರ್ಯವಿಧಾನಗಳನ್ನು ಸರಳಗೊಳಿಸಲಾಗುವುದು ಮತ್ತು ತೊಂದರೆಗೀಡಾದ ಮೀನುಗಾರ ಕುಟುಂಬಗಳಿಗೆ ಪ್ರಯೋಜನಗಳನ್ನು ಸೂಕ್ತ ಸಮಯದೊಳಗೆ ಒದಗಿಸಲಾಗುತ್ತದೆ.

ಸಮುದ್ರ ಮೀನುಗಾರಿಕೆ ಮತ್ತು ಜಲಕೃಷಿ ಕ್ಷೇತ್ರಗಳಲ್ಲಿ ವಲಸೆ ಕಾರ್ಮಿಕರು ಪ್ರಮುಖ ಘಟಕವಾಗಿದ್ದಾರೆ. ಸಾಂಪ್ರದಾಯಿಕವಾಗಿ, ತಮಿಳುನಾಡು ಮತ್ತು ಆಂಧ್ರಪ್ರದೇಶದ ಮೀನುಗಾರರು ಮೀನುಗಾರಿಕಾ ದೋಣಿಗಳಲ್ಲಿ ಕಾರ್ಮಿಕರಾಗಿ ಇತರ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದರು. ಆದಾಗ್ಯೂ, ಇತ್ತೀಚಿನ ವರ್ಷಗಳಲ್ಲಿ, ಒಳನಾಡಿನ ರಾಜ್ಯಗಳು / ಅಸ್ಸಾಂ, ಬಂಗಾಳ ಮತ್ತು ಬಿಹಾರದ ಪ್ರದೇಶಗಳಿಂದ ವಲಸೆ ಬಂದವರು ಸಮುದ್ರ ಮೀನುಗಾರಿಕೆ ದೋಣಿಗಳು ಮತ್ತು ಜಲಕೃಷಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅಸಮರ್ಪಕ ಕೌಶಲ್ಯ ಮತ್ತು ಗುರುತಿನ ದಾಖಲೆಗಳ ಕೊರತೆಯಿಂದಾಗಿ, ಅಂತಹ ವಲಸೆ ಕಾರ್ಮಿಕರು ಜೀವನೋಪಾಯಕ್ಕಾಗಿ ತಮ್ಮ ಪ್ರಾಣವನ್ನು ಪಣಕ್ಕಿಡುತ್ತಿದ್ದಾರೆ. ನೀತಿ ಮಾರ್ಗದರ್ಶಿಗಳು ಮೀನುಗಾರಿಕಾ ದೋಣಿಗಳಲ್ಲಿ ಕೆಲಸ ಮಾಡಲು ತರಬೇತಿ ನೀಡುವುದು, ಅವುಗಳ ದಾಖಲೆಯ ನಿರ್ವಹಣೆ, ಮತ್ತು ಸಮುದ್ರದಲ್ಲಿ ಗಾಯ ಅಥವಾ ಮರಣ ಸಮಯದಲ್ಲಿ ವಿಮಾ ನೀಡುವುದನ್ನು ಒಳಗೊಂಡಂತೆ ಅಂತಹ ವಲಸೆ ಕಾರ್ಮಿಕರನ್ನು ತೊಡಗಿಸಿಕೊಳ್ಳುವ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ. ಅಂತೆಯೇ, ಮೀನು ಸಾಕಾಣಿಕೆ ಕ್ಷೇತ್ರಗಳು, ಸಂಸ್ಕರಣ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರಿಗೂ ಯೋಗ್ಯ 'ಕೆಲಸದ ವಾತಾವರಣ'ವನ್ನು ನೀಡಲಾಗುವುದು.

ಮೀನಿನ ಸಂಪನ್ಮೂಲದ ಆರೋಗ್ಯದ ಮೇಲೆ ಮೀನುಗಾರಿಕೆ ನಿಷೇಧದ ಸಕಾರಾತ್ಮಕ ಪರಿಣಾಮಗಳು ಹೆಚ್ಚಿನ ಪಾಲುದಾರರಿಂದ ವ್ಯಕ್ತವಾಗಿವೆ. ಕೆಲವು ಕರಾವಳಿ ರಾಜ್ಯಗಳು ಮತ್ತು ಪಾಲುದಾರರು ನಿಷೇಧದ ಅವಧಿಯನ್ನು ಪ್ರಸ್ತುತ 61 ದಿನಗಳ ಅವಧಿಯಿಂದ ಹೆಚ್ಚಿಸುವ ಅಗತ್ಯವನ್ನು ವ್ಯಕ್ತಪಡಿಸಿದ್ದಾರೆ. ನಿಷೇಧದ ಪ್ರಯೋಜನ ಮತ್ತು ಸಹಕಾರವನ್ನು ಪಾಲುಗಾರರ ಗಮನದಲ್ಲಿಟ್ಟುಕೊಂಡು, ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಮೀನುಗಾರರಿಗೆ ಲಭ್ಯವಿರುವ ಪರಿಹಾರದ ಪ್ಯಾಕೇಜ್ ಅನ್ನು ಸರ್ಕಾರ ಮತ್ತಷ್ಟು ಬಲಪಡಿಸುತ್ತದೆ. ಇದು ಸಂಪನ್ಮೂಲಗಳ ಸಂರಕ್ಷಣೆಯಲ್ಲಿ ಪಾಲುದಾರರು ಒಳಗೊಳ್ಳುವುದನ್ನು ಉತ್ತೇಜಿಸುವುದಲ್ಲದೆ, ಕುಸಿತ / ಸವಕಳಿಯ ಲಕ್ಷಣಗಳನ್ನು ತೋರಿಸುತ್ತಿರುವ ಮೀನು ದಾಸ್ತಾನುಗಳ ಪುನಃಶ್ಚೇತನ ಮತ್ತು ಪುನಃಸ್ಥಾಪನೆಗೆ

ಸಹಕಾರಿಯಾಗುತ್ತದೆ. ಮೀನುಗಾರಿಕೆ ಸಹಕಾರಿ ಸಂಸ್ಥೆಗಳು ಹಲವಾರು ವರ್ಷಗಳಲ್ಲಿ ಬೆಳವಣಿಗೆಯನ್ನು ಕಂಡಿವೆ ಮತ್ತು ಕೆಲವು ರಾಜ್ಯಗಳು / ಯುಟಿಗಳಲ್ಲಿ, ಅಂತಹ ಸಹಕಾರ ಸಂಸ್ಥೆಗಳು ತಮ್ಮ ಯಶಸ್ಸನ್ನು ಪ್ರದರ್ಶಿಸಿವೆ. ಮೀನು ಹಿಡುವಳಿ ಮತ್ತು ಹಿಡುವಳಿ ನಂತರದ ಕಾರ್ಯಗಳನ್ನು ಒಳಗೊಂಡಿರುವ ಉತ್ತಮ ವ್ಯವಹಾರ ಮಾದರಿಗಳನ್ನು ಅಳವಡಿಸಿಕೊಂಡರೆ ಮೀನುಗಾರಿಕೆ ಸಹಕಾರಿ ಸಂಸ್ಥೆಗಳು ಸಮುದಾಯಕ್ಕೆ ಉತ್ತಮ ಸೇವೆ ಸಲ್ಲಿಸುತ್ತವೆ. ಅಗತ್ಯವಿರುವ ಕಡೆ ಕೌಶಲ್ಯ ಅಭಿವೃದ್ಧಿ ಮತ್ತು ತಾಂತ್ರಿಕ ಮತ್ತು ಆರ್ಥಿಕ ನೆರವು ನೀಡುವ ಮೂಲಕ ಮೀನುಗಾರಿಕೆ ಸಹಕಾರ ಸಂಘಗಳು ಮತ್ತು ಎಫ್‌ಎಫ್‌ಪಿಒಗಳನ್ನು ಸರ್ಕಾರ ಮತ್ತಷ್ಟು ಸುಗಮಗೊಳಿಸುತ್ತದೆ ಮತ್ತು ಬಲಪಡಿಸುತ್ತದೆ. ಮೀನುಗಾರಿಕೆ ಮತ್ತು ಹವಾಮಾನ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು ವಿಜ್ಞಾನ ಆಧಾರಿತ ವಿಧಾನವನ್ನು ಅನುಷ್ಠಾನಗೊಳಿಸಲು ಸಹಕಾರಿ ಸಂಸ್ಥೆಗಳನ್ನು ಪ್ರೋತ್ಸಾಹಿಸಲಾಗುತ್ತದೆ ಮತ್ತು ಬಲಪಡಿಸಲಾಗುತ್ತದೆ.

ಮೀನುಗಾರಿಕೆ ಉಪಕರಣಗಳು ಮತ್ತು ದೋಣಿಗಳನ್ನು ಖರೀದಿಸಲು ಮೀನುಗಾರರಿಗೆ ಸಾಂಸ್ಥಿಕ ಸಾಲದ ಲಭ್ಯತೆಯು ಅನೇಕವೇಳೆ ಬಹಳ ಕಷ್ಟಕರವೆಂದು ಸಾಬೀತಾಗಿದೆ, ಮತ್ತು ಆದಾಯದ ಅನಿಶ್ಚಿತತೆ ಸ್ವಭಾವದಿಂದಾಗಿ ಅನೇಕ ಮೀನುಗಾರರು ಖಾಸಗಿ ಹಣಕಾಸು ಮತ್ತು ಮಧ್ಯವರ್ತಿಗಳ ಸಾಲದ ಬಲೆಗೆ ಬೀಳುತ್ತಾರೆ. ಈ ಪರಿಸ್ಥಿತಿಯನ್ನು ಪರಿಹರಿಸಲು, ಮೀನುಗಾರರಿಗೆ ಉದಾರ ನಿಯಮಗಳು ಮತ್ತು ಷರತ್ತುಗಳೊಂದಿಗೆ ಸಾರ್ವಜನಿಕ ಹಣಕಾಸು ಒದಗಿಸುವುದನ್ನು ಸರ್ಕಾರ ಪರಿಗಣಿಸುತ್ತದೆ. ಅಂತೆಯೇ, ನೀತಿಯು ಮೀನುಗಾರಿಕೆ ಸ್ವತ್ತುಗಳಾದ ಬಲೆ ಮತ್ತು ದೋಣಿಗಳನ್ನು ವಿಮೆಯ ವ್ಯಾಪ್ತಿಗೆ ತರುವ ಗುರಿಯನ್ನು ಹೊಂದಿದೆ. ನೈಸರ್ಗಿಕ ವಿಪತ್ತುಗಳು ಮತ್ತು ಇತರ ಕಷ್ಟಕರ ಸಮಯದಲ್ಲಿನ ನಷ್ಟವನ್ನು ಸರಿದೂಗಿಸಲು ಇದು ಮೀನುಗಾರರಿಗೆ ಸಹಾಯ ಮಾಡುತ್ತದೆ. ಅಂತೆಯೇ, ಜಲಕೃಷಿಕರಿಗೆ ನೀತಿಯು ಬೆಳೆ ವಿಮೆ ಮತ್ತು ಅವರ ಆಸ್ತಿಗಳಾದ ಏರೇಟರ್, ವಾಟರ್ ಪಂಪ್ ಇತ್ಯಾದಿಗಳ ವಿಮೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ.

ಮೀನುಗಾರಿಕೆ ಕ್ಷೇತ್ರದಲ್ಲಿ ಮೀನು ಹಿಡುವಳಿ ನಂತರದ ಚಟುವಟಿಕೆಗಳಲ್ಲಿ ಒಟ್ಟು ಉದ್ಯೋಗಿಗಳ ಪೈಕಿ ಶೇಕಡಾ 69 ರಷ್ಟು ಮಹಿಳೆಯರು ಇದ್ದಾರೆ. ಕುಟುಂಬಗಳನ್ನು ಬೆಳೆಸುವ ಜೊತೆಗೆ, ಮೀನುಗಳ ಚಿಲ್ಲರೆ ಮಾರಾಟ ಮಾಡುವುದು, ಮೀನು ಒಣಗಿಸುವುದು, ಶೆಲ್ ಸಂಗ್ರಹಣೆ, ಬಲೆ ದುರಸ್ತಿ ಮತ್ತು ಇತರ ಚಟುವಟಿಕೆಗಳಲ್ಲಿ ಸ್ವಸಹಾಯ ಪದ್ಧತಿ ಮೂಲಕ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ. ಮೀನು ಹಿಡುವಳಿ ಚಟುವಟಿಕೆಗಳಲ್ಲಿ ಮಹಿಳೆಯರು ಸಹ ಭಾಗವಹಿಸುವ ಉದಾಹರಣೆಗಳಿವೆ. ಮಹಿಳೆಯರು ನಿರ್ವಹಿಸುವ ಪಾತ್ರಗಳಿಗೆ ಸರ್ಕಾರವು ನೀಡಿದ ಸವಲತ್ತುಗಳನ್ನು ಮುಂದುವರಿಸುತ್ತದೆ ಮತ್ತು ಮಹಿಳಾ ಸಹಕಾರ ಸಂಘಗಳನ್ನು ರೂಪಿಸುವುದು; ಮಹಿಳಾ ಸ್ನೇಹಿ ಆರ್ಥಿಕ ಬೆಂಬಲ ಯೋಜನೆಗಳು; ಬಂದರುಗಳು ಮತ್ತು ಇಳಿದಾಣಗಳಲ್ಲಿ ಸುರಕ್ಷತೆ ಮತ್ತು ನೈರ್ಮಲ್ಯವನ್ನು ಒಳಗೊಂಡಿರುವ ಉತ್ತಮ ಕೆಲಸದ ಪರಿಸ್ಥಿತಿಗಳು; ಚಿಲ್ಲರೆ ವ್ಯಾಪಾರಕ್ಕೆ ಸಾರಿಗೆ ಸೌಲಭ್ಯಗಳು; ಸಣ್ಣ ಪ್ರಮಾಣದ ಮೀನುಗಾರಿಕೆ, ಮೌಲ್ಯವರ್ಧನೆ

ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೋತ್ಸಾಹ; ಮತ್ತು ಮೀನುಗಾರಿಕೆ ನಿರ್ವಹಣೆಯಲ್ಲಿ ಅವರ ಸಕ್ರಿಯ ತೊಡಗಿಸಿಕೊಳ್ಳುವಿಕೆಗೆ ಸಹಕರಿಸುವ ಮೂಲಕ ಬೆಂಬಲವನ್ನು ಮತ್ತಷ್ಟು ಹೆಚ್ಚಿಸುತ್ತವೆ. ಅದೇ ಧಾಟಿಯಲ್ಲಿ ಮತ್ತು ಒಳಗೊಳ್ಳುವಿಕೆಗೆ ಅದರ ಬದ್ಧತೆಯನ್ನು ಅನುಸರಿಸಿ, ನೀತಿ ನಿರ್ದೇಶನಗಳು ಲೆಸ್ಬಿಯನ್, ಗೇ, ದ್ವಿಲಿಂಗಿ, ಟ್ರಾನ್ಸ್ಜೆಂಡರ್, ಕ್ವೀರ್, ಮತ್ತು ಎರಡು–ಉತ್ಸಾಹ ಮತ್ತು ಇತರ ಗುರುತುಗಳ (ಎಲ್ಜಿಬಿಟಿಕ್ಯೂ 2 +) ಮೀನುಗಾರಿಕೆ ಮತ್ತು ಜಲಕೃಷಿಗೆ ಸಂಬಂಧಿಸಿದ ಜೀವನೋಪಾಯಗಳನ್ನು ಸಹ ಬೆಂಬಲಿಸುತ್ತದೆ. ಕ್ಷೀಣಿಸುತ್ತಿರುವ ಸಮುದ್ರ ಮೀನುಗಾರಿಕೆ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು, ಕರಾವಳಿಯಾದ್ಯಂತ ಹರಡಿರುವ ಅಪಾರ ಸಂಖ್ಯೆಯ ಮೀನುಗಾರ ಸಮುದಾಯಗಳಿಗೆ ಹೆಚ್ಚುವರಿ / ಪರ್ಯಾಯ ಜೀವನೋಪಾಯಗಳು ಅಗತ್ಯವಾಗಿರುತ್ತದೆ. ಈ ವಿಷಯದಲ್ಲಿ ಸಮಗ್ರ ಮೀನು ಕೃಷಿ ಮತ್ತು ಪರಿಸರ–ಪ್ರವಾಸೋದ್ಯಮಗಳು ಮುಖ್ಯವೆಂದು ಪರಿಗಣಿಸಲಾಗುತ್ತದೆ ಮತ್ತು ಎರಡೂ ಹೆಚ್ಚುವರಿ / ಪರ್ಯಾಯ ಜೀವನೋಪಾಯದ ಮೂಲಗಳಿಗೆ ಉತ್ತಮ ಅವಕಾಶವನ್ನು ನೀಡುತ್ತವೆ.

ಇತ್ತೀಚಿನ ದಿನಗಳಲ್ಲಿ, ಭಾರತೀಯ ಮೀನುಗಾರರು ಅಂತರರಾಷ್ಟ್ರೀಯ ಕಡಲ ಗಡಿರೇಖೆಯನ್ನು (ಐಎಂಬಿಎಲ್) ದಾಟುವ ಸಂಭವ ಹೆಚ್ಚಾಗಿದೆ. ಈ ಹೆಚ್ಚಳಕ್ಕೆ ಹಲವು ಕಾರಣಗಳಿದ್ದು, ಅವುಗಳಲ್ಲಿ ಹೇಗ್ ನಲ್ಲಿರುವ ಶಾಶ್ವತ ಮಧ್ಯಸ್ಥಿಕೆ ನ್ಯಾಯಾಲಯದ ನೀಡಿದ ತೀರ್ಪಿನ ಆಧಾರದ ಮೇಲೆ ಐಎಂಬಿಎಲ್ ಅನ್ನು ಮರು ವ್ಯಾಖ್ಯಾನಿಸಿರುವುದು ಮುಖ್ಯವಾಗಿದೆ. ಇಂತಹ ಘಟನೆಗಳನ್ನು ಕಡಿಮೆ ಮಾಡಲು, ಮೀನುಗಾರರಿಗೆ ಅಗತ್ಯವಾದ ಜಾಗೃತಿ ಮತ್ತು ತರಬೇತಿಯನ್ನು ನೀಡಲು ಸರ್ಕಾರ ಪರಿಗಣಿಸುತ್ತದೆ ಮತ್ತು ಇದರಿಂದ ಐಎಂಬಿಎಲ್ ದಾಟುವುದನ್ನು ತಪ್ಪಿಸಬಹುದು.

ಮುಂದುವರಿಯುತ್ತಾ ಮೀನುಗಾರಿಕೆ ದೋಣಿ ನಿರ್ಮಾಣ ಯಾರ್ಡ್‌ಗಳ ಸ್ಥಾಪನೆ ಮತ್ತು ಮೀನುಗಾರಿಕಾ ದೋಣಿಗಳ ನಿರ್ಮಾಣವು ದೇಶದಲ್ಲಿ ಅನಿಯಂತ್ರಿತ ಚಟುವಟಿಕೆಯಾಗಿದ್ದು, ಕಳಪೆ ಗುಣಮಟ್ಟದ ದೋಣಿಗಳು ನಿರ್ಮಾಣಕ್ಕೆ ಕಾರಣವಾಗಿವೆ. ಇದು ದೋಣಿಯ ಸ್ಥಿರತೆ, ಮೀನು ಸಂಗ್ರಹಿಸಲು ಸೂಕ್ತವಾದ ಸ್ಥಳ, ಸಿಬ್ಬಂದಿ, ವಸತಿ, ಅಡಿಗೆಮನೆ ಮತ್ತು ಶೌಚಾಲಯ ಮೊದಲಾದ ಅಗತ್ಯಗಳನ್ನು ಸೃಷ್ಟಿಸುವಲ್ಲಿ ಕೊರತೆಯಾಗುತ್ತಿದೆ. ಫೈಬರ್ ರೀನ್‌ಫೋರ್ಸ್ಡ್ ಪ್ಲಾಸ್ಟಿಕ್(ಎಫ್‌ಆರ್‌ಪಿ) ಹೆಚ್ಚುತ್ತಿರುವ ಬಳಕೆಯೊಂದಿಗೆ, ಅಂತಹ ಯಾರ್ಡ್‌ಗಳಿಂದ ಕಳಪೆ ಗುಣಮಟ್ಟದ ದೋಣಿಗಳನ್ನು ನಿರ್ಮಿಸುವ ಸಾಧ್ಯತೆಗಳು ಹೆಚ್ಚಿವೆ. ದೋಣಿ ನಿರ್ಮಾಣದ ಯಾರ್ಡ್‌ಗಳ ನೋಂದಣಿ, ಮೀನುಗಾರಿಕೆ ದೋಣಿಗಳ ವಾರ್ಷಿಕ ಸಮೀಕ್ಷೆ, ಸಂವಹನ ಮತ್ತು ಸುರಕ್ಷತಾ ಉಪಕರಣಗಳ ನಿರಂತರ ಪರಿಶೀಲನೆ (IRS/ಇತರೆ ತಾಂತ್ರಿಕ ಸಂಸ್ಥೆಗಳ ಮೂಲಕ) ಮೀನುಗಾರಿಕೆ ದೋಣಿಗಳಿಗೆ ಉತ್ತಮ ಗುಣಮಟ್ಟದ ವಿನ್ಯಾಸ ಮತ್ತು ನಿರ್ಮಾಣದ ವಸ್ತುಗಳ ಪೂರೈಕೆ, ಅವುಗಳ ಪರಿಶೀಲನೆ ಮತ್ತು ನಿಯಂತ್ರಣ (ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ) ಮೊದಲಾದವುಗಳನ್ನು ಸೇರ್ಪಡೆಗೊಳ್ಳಲು ಕಡಲ ರಾಜ್ಯಗಳು/ಯುಟಿಗಳ ಸಮುದ್ರ ಮೀನುಗಾರಿಕೆ ನಿಯಂತ್ರಣ ಕಾಯ್ದೆಗಳ (ಎಂಎಫ್‌ಆರ್‌ಎ)

ವ್ಯಾಪ್ತಿಯನ್ನು ವಿಸ್ತರಿಸುವ ಅಗತ್ಯವನ್ನು ಈ ನೀತಿ ತಿಳಿಸುತ್ತದೆ.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿದೆ:**

- *ಮೀನುಗಾರ ಸಮುದಾಯ / ಮೀನು ಕಾರ್ಮಿಕರ ಉನ್ನತಿಗಾಗಿ ಸಮುದಾಯ ಕಲ್ಯಾಣ ಕ್ರಮಗಳನ್ನು ಮುಂದುವರಿಸುವುದು ಮತ್ತು ಹೆಚ್ಚಿಸುವುದು, ಮತ್ತು ಸುರಕ್ಷತಾ ವ್ಯವಸ್ಥೆಯನ್ನು ಖಾತ್ರಿಪಡಿಸುವುದು.*
- *ಮೀನುಗಾರಿಕೆ ಮತ್ತು ಜಲಕೃಷಿಯಲ್ಲಿ ಕೆಲಸ ಮಾಡುವ ವಲಸೆ ಕಾರ್ಮಿಕರನ್ನು ಗುರುತಿಸಿ ಅವರಿಗೆ ಅಗತ್ಯವಾದ ಸುರಕ್ಷತಾ ವ್ಯವಸ್ಥೆಯನ್ನು ಒದಗಿಸುವುದು.*
- *ಸಂರಕ್ಷಣೆ ಮತ್ತು ನಿರ್ವಹಣಾ ಕಾರ್ಯಕ್ರಮಗಳಲ್ಲಿ ಪರಿಣಾಮಕಾರಿ ಭಾಗವಹಿಸುವಿಕೆಗಾಗಿ ಮೀನುಗಾರರಿಗೆ ಸಹಾಯವನ್ನು ಹೆಚ್ಚಿಸುವುದು.*
- *ಅಗತ್ಯವಿರುವಲ್ಲೆಲ್ಲಾ ಸಾಂಸ್ಥಿಕ ಮತ್ತು ಕೌಶಲ್ಯ ಅಭಿವೃದ್ಧಿ ಮತ್ತು ತಾಂತ್ರಿಕ ಮತ್ತು ಆರ್ಥಿಕ ನೆರವು ಮೂಲಕ ಮೀನುಗಾರರ ಸಹಕಾರಿ ಸಂಘಗಳು ಮತ್ತು ಎಫ್‌ಎಫ್‌ಪಿಒಗಳನ್ನು ಸಹಕರಿಸುವುದು ಮತ್ತು ಬಲಪಡಿಸುವುದು.*
- *ಸಾಂಸ್ಥಿಕ ಸಾಲವನ್ನು ಪಡೆಯಲು ಮೀನುಗಾರರು ಮತ್ತು ಕೃಷಿಕರಿಗೆ ಸುಲಭ ಅವಕಾಶವನ್ನು ಒದಗಿಸುವುದು ಮತ್ತು ಮೀನುಗಾರಿಕೆ ಆಸ್ತಿಗಳಿಗೆ ವಿಮೆ ನೀಡಲು ಪರಿಶೀಲಿಸುವುದು.*
- *ಮಹಿಳಾ ಸಹಕಾರ ಸಂಘಗಳು / ಸ್ವಸಹಾಯ ಸಂಘಗಳು / ಎಫ್‌ಎಫ್‌ಪಿಒಗಳು, ಉದ್ದೇಶಿತ ಯೋಜನೆಗಳು ಮತ್ತು ಕೆಲಸದ ವಾತಾವರಣವನ್ನು ಸುಧಾರಿಸುವ ಮೂಲಕ ಮೀನುಗಾರಿಕೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು.*
- *ಕಡಲ ಗಡಿಗಳನ್ನು ಆಕಸ್ಮಿಕವಾಗಿ ದಾಟುವುದನ್ನು ತಪ್ಪಿಸಲು ಹಡಗಿನ ವಿನ್ಯಾಸ ಮತ್ತು ನ್ಯಾವಿಗೇಷನಲ್ ಜಾಗೃತಿಯನ್ನು ಸೃಷ್ಟಿಸುವುದು ಮತ್ತು  ಮೀನುಗಾರರನ್ನು ಹೆಚ್ಚು ಹಿಡುವಳಿ ಮಾಡಿದ ಸಂಪನ್ಮೂಲಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಪರ್ಯಾಯ ಜೀವನೋಪಾಯ ಮಾರ್ಗಗಳ ಆಯ್ಕೆಗಳನ್ನು ಉತ್ತೇಜಿಸುವುದು.*

## 6.8 ಮೀನುಗಾರಿಕೆ ಆಡಳಿತ

### *6.8.1 ಒಳನಾಡು ಮತ್ತು ಸಮುದ್ರ ಸಂಪನ್ಮೂಲಗಳ ಸುಸ್ಥಿರ ಮತ್ತು ಪ್ರಜ್ಞಾವಂತ ಬಳಕೆಯನ್ನು ನಿಯಂತ್ರಿಸುವುದು*

12 ನಾಟಿಕಲ್ ಮೈಲು ಮೀರಿದ ಸಮುದ್ರದ ನೀರಿನಲ್ಲಿನ ಸಂಪನ್ಮೂಲಗಳ ಹಿಡುವಳಿಯ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು, ಇಇಜೆಡ್ ಮತ್ತು ಎಬಿಎನ್ಜೆಗಳಲ್ಲಿನ ದೇಶದ ದೋಣಿಗಳಿಂದ

ಮೀನುಗಾರಿಕೆಯನ್ನು ನಿಯಂತ್ರಿಸಲು ಸಮಗ್ರ ಶಾಸನವನ್ನು ಜಾರಿಗೆ ತರುವ ತುರ್ತು ಅವಶ್ಯಕತೆಯಿದೆ. ಇಇಜೆಡ್‌ನ ನಿರ್ವಹಣೆಯ ಜವಾಬ್ದಾರಿಯುತ ನೋಡಲ್ ಏಜೆನ್ಸಿಯ ಕಾರ್ಯಸೂಚಿಯನ್ನು ಇದು ಸ್ಪಷ್ಟವಾಗಿ ನಿಗದಿಪಡಿಸುತ್ತದೆ ಮತ್ತು ಮೀನುಗಾರರಿಗೆ ಸ್ಪಷ್ಟವಾದ ನಿಯಮಗಳನ್ನು ಅನುಸರಿಸುವುದು ಸುಲಭವಾಗುತ್ತಿದೆ. ಎಂಸಿಎಸ್ ಏಜೆನ್ಸಿಗಳು ಅವುಗಳನ್ನು ಕಾರ್ಯಗತಗೊಳಿಸುತ್ತವೆ ಎಂಬ ದೃಷ್ಟಿಯಿಂದ ಸಮಗ್ರ ಶಾಸನವು ಅಗತ್ಯವಾಗಿರುತ್ತದೆ.

ಮೀನುಗಾರಿಕೆ ವಿಧಾನಗಳಲ್ಲಿ ಮತ್ತು ಸಂಪನ್ಮೂಲಗಳನ್ನು ಬಳಸಿಕೊಳ್ಳುವಲ್ಲಿ ನಿರಂತರ ಬದಲಾವಣೆಗಳೊಂದಿಗೆ ಭಾರತದಲ್ಲಿನ ಸಮುದ್ರ ಮೀನುಗಾರಿಕೆಯು ಕ್ರಿಯಾತ್ಮಕವಾಗಿದೆ. 1980 ರ ದಶಕದ ಆರಂಭದಿಂದಲೂ MFRA ಗಳು ಅಸ್ತಿತ್ವಕ್ಕೆ ಬಂದಿವೆ ಮತ್ತು ಕೆಲವು ರಾಜ್ಯಗಳು / UT ಗಳನ್ನು ಹೊರತುಪಡಿಸಿ, 1990 ರ ದಶಕದ ಮಧ್ಯಭಾಗದಲ್ಲಿ MFRA ಗಳು ಜಾರಿಯಲ್ಲಿದ್ದವು. ಪ್ರಮುಖ ಅಂತರರಾಷ್ಟ್ರೀಯ ಒಪ್ಪಂದಗಳು / ವ್ಯವಸ್ಥೆಗಳನ್ನು (1982 UNCLOS, 1992 UNFSA, 1995 FAO CCRF) ಅಳವಡಿಸಿಕೊಳ್ಳುವ ಮೊದಲು ಹೆಚ್ಚಿನ MFRA ಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು, ನೀತಿಯು MFRA ಗಳಲ್ಲಿ ಮತ್ತು ಮೀನುಗಾರಿಕೆಯನ್ನು ನಿಯಂತ್ರಿಸಲು ಅಸ್ತಿತ್ವದಲ್ಲಿರುವ ನಿಯಮಗಳು ಮತ್ತು ನಿಬಂಧನೆಗಳನ್ನು ಅಂತರಾಷ್ಟ್ರೀಯ ಒಪ್ಪಂದಗಳಿಗೆ/ಕರಾರುಗಳಂತೆ ಮೀನುಗಾರಿಕೆ ನಿರ್ವಹಣೆಯ ಸಮಗ್ರ ಅಂಶಗಳನ್ನು ಒಳಗೊಂಡಂತೆ ನವೀಕರಿಸಲು ಬೆಂಬಲಿಸುತ್ತದೆ. ಕರಾವಳಿ ರಾಜ್ಯಗಳು / ಯುಟಿಗಳು ಪರಿಗಣಿಸಲು ಮಾದರಿ ಮಸೂದೆಯನ್ನು ಸಿದ್ಧಪಡಿಸುವ ಮೂಲಕ ಇದನ್ನು ಕೈಗೊಳ್ಳಲಾಗುವುದು. ಅಂತೆಯೇ, ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿಗಾಗಿ ಮಾದರಿ ಮಸೂದೆಯನ್ನು ಸಿದ್ಧಪಡಿಸುವ ಅವಶ್ಯಕತೆಯಿದೆ. ಇದನ್ನು ರಾಜ್ಯಗಳು / ಯುಟಿಗಳು ತಮ್ಮ ಅಸ್ತಿತ್ವದಲ್ಲಿರುವ ಕಾಯಿದೆಗಳನ್ನು ರದ್ದುಗೊಳಿಸಲು ಅಥವಾ ಅವುಗಳನ್ನು ಸಮಕಾಲೀನಗೊಳಿಸಲು ಮತ್ತು ಸ್ಥಳೀಯ ಅವಶ್ಯಕತೆಗಳನ್ನು ಅನುಸರಿಸಲು ತಿದ್ದುಪಡಿ ಮಾಡಲು ಬಳಸಬಹುದು.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಕಂಡಂತಿವೆ:**

- *ಎಂಎಫ್‌ಆರ್‌ಎಗಳಲ್ಲಿ ಮೀನುಗಾರಿಕೆಯನ್ನು ನಿಯಂತ್ರಿಸಲು ಅಸ್ತಿತ್ವದಲ್ಲಿರುವ ನಿಯಮಗಳು ಮತ್ತು ನಿಬಂಧನೆಗಳನ್ನು ನವೀಕರಿಸುವುದು ಮತ್ತು ಅವುಗಳನ್ನು ಅಂತರರಾಷ್ಟ್ರೀಯ ಒಪ್ಪಂದಗಳು / ವ್ಯವಸ್ಥೆಗಳೊಂದಿಗೆ ಸಮನ್ವಯಗೊಳಿಸುವುದು.*
- *ಇಇಜೆಡ್‌ನ 12–200 ನಾಟಿಕಲ್ ಮೈಲಿ ಪ್ರದೇಶದಲ್ಲಿ ಮೀನುಗಾರಿಕೆ ನಿಯಂತ್ರಣ.*
- *ರಾಜ್ಯಗಳು / ಯುಟಿಗಳು ಅಸ್ತಿತ್ವದಲ್ಲಿರುವ ಕಾಯಿದೆಗಳನ್ನು ರದ್ದುಗೊಳಿಸಲು ಅಥವಾ ತಿದ್ದುಪಡಿ ಮಾಡಲು ಬಳಸುವಂತೆ ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿಗಾಗಿ 'ಮಾದರಿ ಮಸೂದೆ' ಸಿದ್ಧಪಡಿಸುವುದು.*

### *6.8.2 ಸಂಸ್ಥೆಗಳು*

**ಸಮುದಾಯ ಸಂಸ್ಥೆಗಳನ್ನು ಸ್ಥಾಪಿಸುವುದು:** ಯಶಸ್ವಿ ಸಂಪನ್ಮೂಲ ನಿರ್ವಹಣೆಗೆ ಒಂದು ಪೂರ್ವಾಪೇಕ್ಷಿತವೆಂದರೆ ಆಸ್ತಿ ಹಕ್ಕುಗಳ ಸೂಕ್ತ ವಿವರಣೆಯಾಗಿದೆ ಅಂದರೆ ಸಂಪನ್ಮೂಲವನ್ನು ಯಾರು ಹೊಂದಿದ್ದಾರೆ? ಯಾರು ಸಂರಕ್ಷಣೆಯ ಜವಾಬ್ದಾರಿ ಹೊಂದಿದ್ದಾರೆ? ಸಂಪನ್ಮೂಲ ಬಳಕೆಯಿಂದ ಲಾಭವನ್ನು ಯಾರು ಪಡೆಯುತ್ತಾರೆ? ಇತ್ಯಾದಿ. ಭಾರತದಲ್ಲಿ, ಮಾಲೀಕತ್ವದ ವಿಷಯವು ವಾಸ್ತವಿಕವಾಗಿ ಅಸ್ಪಷ್ಟವಾಗಿದೆ. ರಾಜ್ಯದ ಪ್ರತಿನಿಧಿಯಾಗಿ ಸರ್ಕಾರವು ಸಂಪನ್ಮೂಲವನ್ನು ಹೊಂದಿದ್ದರೆ, ಸಮುದಾಯವು ತನ್ನ ಸಾಂಪ್ರದಾಯಿಕ ಮಾಲೀಕತ್ವದ ಹಕ್ಕನ್ನು ಪ್ರತಿಪಾದಿಸುತ್ತದೆ. ಎರಡೂ ಸ್ಥಾನಗಳನ್ನು ನ್ಯಾಯಸಮ್ಮತಗೊಳಿಸುವ ಒಂದು ಮಾರ್ಗವೆಂದರೆ ಸಹ-ನಿರ್ವಹಣೆಯ ಮೂಲಕ. ಕೇರಳ ಮತ್ತು ತಮಿಳುನಾಡು ರಾಜ್ಯಗಳು ಮತ್ತು ಪುದುಚೇರಿಯ ಯುಟಿ ಈಗ ವಿವಿಧ ಆಡಳಿತ ಶ್ರೇಣಿಗಳಲ್ಲಿ (ಗ್ರಾಮ, ಜಿಲ್ಲೆ, ರಾಜ್ಯ) ಸಹ-ನಿರ್ವಹಣಾ ಘಟಕಗಳನ್ನು ಸ್ಥಾಪಿಸಿವೆ, ಅವುಗಳ ಹಕ್ಕುಗಳ ಚಾರ್ಟರ್ ಮತ್ತು ಕರ್ತವ್ಯಗಳು, ಮತ್ತು ಕಾನೂನು / ಆಡಳಿತಾತ್ಮಕ ಬೆಂಬಲವನ್ನೂ ಸಹ ನೀಡಿವೆ. ನೀತಿ ನಿರ್ದೇಶನಗಳು ಒಳನಾಡು ಮತ್ತು ಇತರ ಕರಾವಳಿ ರಾಜ್ಯಗಳು / ಯುಟಿಗಳಿಗೆ ಇಂತಹ ಉಪಕ್ರಮಗಳನ್ನು ಮುಂದಿಡುವ ಗುರಿಯನ್ನು ಹೊಂದಿವೆ.

**ಇನ್ಪುಟ್ (Input) ಮತ್ತು ಔಟ್‌ಪುಟ್ (output) ಪೂರೈಕೆ ಜಾಲವನ್ನು ಕ್ರೋಡಿಕರಿಸುವುದು:** ಸರಬರಾಜು ಜಾಲದ ಜ್ಞಾನವು ಯಾವುದೇ ವ್ಯಾಪಾರ ಸಂಸ್ಥೆಗೆ ಪ್ರಮುಖವಾಗಿದೆ. ಸಾಮಾನ್ಯವಾಗಿ ಉತ್ಪಾದನಾ ಘಟಕವು ಕಚ್ಚಾ ಸರಕುಗಳ ಗುಣಮಟ್ಟ ಮತ್ತು ಪ್ರಮಾಣದ ಬಗ್ಗೆ ಸಂಪೂರ್ಣ ಜ್ಞಾನವನ್ನು ಹೊಂದಿರಬೇಕು, ಅದನ್ನು ಅಂತಿಮ ಉತ್ಪನ್ನವನ್ನು ಉತ್ಪಾದಿಸಲು ಅವರು ಬಳಸಿಕೊಳ್ಳಬಹುದು. ಮೀನುಗಾರಿಕೆ ಉತ್ಪಾದನೆಗಳು ದೋಣಿ ಅಥವಾ ಕ್ಷೇತ್ರದಲ್ಲಿ (Farm) ನಡೆಯುತ್ತವೆ. ಆದಾಗ್ಯೂ, ಮಧ್ಯವರ್ತಿ ಸರಕುಗಳ ಮೇಲೆ ಅವರಿಗೆ ಕಡಿಮೆ ನಿಯಂತ್ರಣವಿದೆ. ಉದಾಹರಣೆಗೆ ದೋಣಿ ನಿರ್ಮಿಸುವ ಯಾರ್ಡ್‌ಗಳಲ್ಲಿ ನಿಗದಿತ ಮಾದಂಡಗಳಿಲ್ಲ. ಆದ್ದರಿಂದ ಮೀನುಗಾರರು ಪಾವತಿಸುವ ಹಣಕ್ಕೆ ಸೂಕ್ತ ಬೆಲೆ/ಪ್ರತಿಫಲದ ಖಾತರಿಯಿಲ್ಲ. ಮೀನು ಕೃಷಿಕರು ಖರೀದಿಸುವ ಮೀನುಮರಿ ಮತ್ತು ಆಹಾರದ ಮೇಲೆ ಯಾವುದೇ ನಿಯಂತ್ರಣವಿರುವುದಿಲ್ಲ. ಅದೇ ಸಮಯದಲ್ಲಿ, ಮೀನುಗಾರರು ಮತ್ತು ಮೀನು ಕೃಷಿಕರು ತಮ್ಮ ಉತ್ಪನ್ನದ ಅಂತಿಮವಾಗಿ ತಲುಪುವ ಸ್ಥಳದ ಬಗ್ಗೆ ಮಾಹಿತಿಯಿರುವುದಿಲ್ಲ. ಪರಿಣಾಮವಾಗಿ, ಮೌಲ್ಯ ಸರಪಳಿಯಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ 'ಮೈಯೋಪಿಕ್' ಉತ್ಪಾದನಾ ಕಾರ್ಯತಂತ್ರವನ್ನು ಅನುಸರಿಸುತ್ತಾರೆ ಅಥವಾ 'ಸಿಲೋ'ದಲ್ಲಿ ಕೆಲಸ ಮಾಡುತ್ತಾರೆ, ಇದು ಅವುಗಳ ಮೌಲ್ಯ ರಚನೆಯನ್ನು ಅತ್ಯುತ್ತಮವಾಗಿಸುವುದಿಲ್ಲ ಅಥವಾ ಸಂಪನ್ಮೂಲಗಳ ಸುಸ್ಥಿರತೆಯನ್ನು ಖಚಿತಪಡಿಸುವುದಿಲ್ಲ. ನಿಗದಿತ ಮಾನದಂಡ ಮತ್ತು ಗುತ್ತಿಗೆ ಮೂಲಕ ಮೀನುಗಾರಿಕೆ ದೋಣಿ / ಕೊಳವನ್ನು ಕೇಂದ್ರವಾಗಿಟ್ಟುಕೊಂಡು ಮೌಲ್ಯ ಸರಪಳಿಯನ್ನು ರಚಿಸುವುದನ್ನು ಈ ನೀತಿಯು ಉತ್ತೇಜಿಸುತ್ತದೆ. ಸಮುದಾಯವು ಮೌಲ್ಯ ಸರಪಳಿಯನ್ನು ಹೊಂದುವುದನ್ನು

ಖಚಿತಪಡಿಸಿಕೊಳ್ಳಲು, ಮೀನುಗಾರ / ಮೀನು ಕೃಷಿಕರ ಸಹಕಾರಿ / ಎಫ್‌ಎಫ್‌ಪಿಒ / ಸಹ–ನಿರ್ವಹಣಾ ಸಂಸ್ಥೆಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲಾಗುತ್ತದೆ.

**ಏಕ ಗವಾಕ್ಷಿ (Single window) ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು:** ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಎಂಬ ಪ್ರತ್ಯೇಕ ಸಚಿವಾಲಯದ ಅಡಿಯಲ್ಲಿ ಮೀನುಗಾರಿಕಾ ಇಲಾಖೆಯನ್ನು ಸ್ಥಾಪಿಸುವ ರೂಪದಲ್ಲಿ ಹೊಸ ಸಾಂಸ್ಥಿಕ ಸುಧಾರಣೆಯು ಈ ವಲಯದತ್ತ ಗಮನವನ್ನು ಹೆಚ್ಚಿಸುವ ಅವಕಾಶವನ್ನು ಸೃಷ್ಟಿಸಿದೆ. ಆದಾಗ್ಯೂ, ವ್ಯವಹಾರ ನಿಯಮಗಳ ಹಂಚಿಕೆಯ ವಿಷಯದಲ್ಲಿ, ಹೊಸ ಇಲಾಖೆಯ ಆದೇಶವನ್ನು ಹೆಚ್ಚಿಸಲಾಗಿಲ್ಲ ಆದ್ದರಿಂದ ಅದರ ಸಾಮರ್ಥ್ಯವನ್ನು ಸೀಮಿತಗೊಳಿಸುತ್ತದೆ. ಮೀನುಗಾರಿಕೆ ಚಟುವಟಿಕೆಗಳ ಬಹು ಆಯಾಮಗಳನ್ನು ಗಮನಿಸಿದರೆ (ಮಾನವ ಮತ್ತು ಪ್ರಕೃತಿಯ ನಡುವಿನ ಸಂವಹನ; ಭೂ–ವ್ಯಾಪ್ತಿಯಿಂದ ಸಮುದ್ರ ವ್ಯಾಪ್ತಿಗೆ; ಸ್ಥಳೀಯ, ಪ್ರಾದೇಶಿಕ, ಅಂತರರಾಷ್ಟ್ರೀಯ ನಿಯಮಗಳು; ಆಹಾರ ಮತ್ತು ಉದ್ಯೋಗ ಸುರಕ್ಷತೆ; ಬಾಹ್ಯ ಶಕ್ತಿಗಳಿಗೆ ದುರ್ಬಲತೆ; ವ್ಯಾಪಾರ ನಿಯಮಗಳ ಮೂಲಕ ಮೀನುಗಾರಿಕೆ ಉತ್ಪಾದನೆಯನ್ನು ನಿಯಂತ್ರಿಸುವಲ್ಲಿ ಅಂತರರಾಷ್ಟ್ರೀಯ ಪ್ರಯತ್ನ; ಇತ್ಯಾದಿ), ಆಡಳಿತ, ಸಹಕಾರ ಮತ್ತು ನೀತಿ ರೂಪಕ (ವ್ಯವಹಾರಗಳಲ್ಲಿ) ಮತ್ತು ಪರಿಣಾಮಕಾರಿ ಮೀನುಗಾರಿಕೆ ಆಡಳಿತಕ್ಕಾಗಿ ರಾಜ್ಯ/ಯುಟಿಗಳ ನಡುವೆ ಸಮನ್ವಯ ಸಾಧಿಸಲು ಹೊಸ ಇಲಾಖೆಯನ್ನು ಕೇಂದ್ರ ಸಂಸ್ಥೆಯಾಗಿ ಅಭಿವೃದ್ಧಿಪಡಿಸಬೇಕಾದ ಅಗತ್ಯವಿದೆ.

ಮೇಲಿನದನ್ನು ಸಾಧಿಸಲು ಆರ್ & ಡಿ, ಎಂಸಿಎಸ್, ವ್ಯಾಪಾರ, ಅಂತರರಾಷ್ಟ್ರೀಯ ಸಂಬಂಧಗಳು, ಅಭಿವೃದ್ಧಿ ಇತ್ಯಾದಿಗಳನ್ನು ಒಳಗೊಂಡ ಕೇಂದ್ರೀಕೃತ ಚಟುವಟಿಕೆಗಳನ್ನು ಕೈಗೊಳ್ಳಲು ಇಲಾಖೆಯ ಅಡಿಯಲ್ಲಿ ವಿಶೇಷ ಏಜೆನ್ಸಿಗಳನ್ನು ಸ್ಥಾಪಿಸುವ ಅಗತ್ಯವಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಬೇರೆ ಸಚಿವಾಲಯ ಮತ್ತು ಇಲಾಖೆಯಲ್ಲಿ ಚದುರಿದ ಸಂಸ್ಥೆಗಳನ್ನು ಹೊಸದಾಗಿರುವ ಇಲಾಖೆಯೊಂದಿಗೆ ಒಗ್ಗೂಡಿಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಮುಂದೆ ಸಾಗುತ್ತಾ ಕ್ಷೇತ್ರದ ಹೆಚ್ಚುತ್ತಿರುವ ಅಗತ್ಯತೆಗಳನ್ನು ಪೂರೈಸಲು ಮತ್ತು ಸರ್ಕಾರವು ಊಹಿಸಿದಂತೆ ನೀಲಿ ಆರ್ಥಿಕತೆಯ ಒಟ್ಟಾರೆ ಗುರಿಯತ್ತ ಕ್ಷೇತ್ರದ ಕೊಡುಗೆಗಳನ್ನು ವಿಸ್ತರಿಸಲು ‘ಮೀನುಗಾರಿಕೆ ಮತ್ತು ಕಡಲ ವ್ಯವಹಾರಗಳ ಸಚಿವಾಲಯ’ವನ್ನು ರಚಿಸುವ ಗುರಿಯನ್ನು ಹೊಂದಿದೆ.

ಮೀನುಗಾರಿಕಾ ಇಲಾಖೆಯೊಳಗೆ, ಅಸ್ತಿತ್ವದಲ್ಲಿರುವ ನಾಲ್ಕು ಮೀನುಗಾರಿಕಾ ಸಂಸ್ಥೆಗಳು (ಫಿಶರಿ ಸರ್ವೆ ಆಫ್ ಇಂಡಿಯಾ (ಎಫ್‌ಎಸ್‌ಐ), ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಫಿಶರೀಸ್ ನಾಟಿಕಲ್ ಅಂಡ್ ಎಂಜಿನಿಯರಿಂಗ್ ತರಬೇತಿ (ಸಿಫ್ನೆಟ್), ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಕೋಸ್ಟಲ್ ಎಂಜಿನಿಯರಿಂಗ್ ಫಾರ್ ಫಿಶರಿ (ಸಿಐಸಿಇಎಫ್) ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪೋಸ್ಟ್–ಹಾರ್ವೆಸ್ಟ್ ತಂತ್ರಜ್ಞಾನ ಮತ್ತು ತರಬೇತಿ (NIFPHATT)) ಅನ್ನು ಅವರ ಆದೇಶ, ಕಾರ್ಯಗಳು ಮತ್ತು ಉಪಯುಕ್ತತೆಯ ದೃಷ್ಟಿಯಿಂದ ಪರಿಶೀಲಿಸಬೇಕಾಗಿದೆ. ಅಂತೆಯೇ, ಈ ಎಲ್ಲಾ ಸಂಸ್ಥೆಗಳನ್ನು ಹೇಗೆ ಮರು ಜೋಡಿಸಬಹುದು ಅಥವಾ

ಮಾನವಶಕ್ತಿ ಮತ್ತು ಸಂಪನ್ಮೂಲಗಳ ಪರಿಣಾಮಕಾರಿ ನಿರ್ವಹಣೆಗೆ ವಿಲೀನಗೊಳ್ಳಲು ಮತ್ತು ಅಗತ್ಯವಾದ ಆರ್ಥಿಕತೆಯನ್ನು ತರಲು ಏನು ಅಗತ್ಯವಿದೆಯೆಂದು ನೋಡಲು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯನ್ನು (ಎನ್‌ಎಫ್‌ಡಿಬಿ) ಸಹ ಪರಿಶೀಲಿಸಬೇಕಾಗಿದೆ. ಐದೂ ಸಂಸ್ಥೆಗಳನ್ನು ಒಗ್ಗೂಡಿಸಿ 'ಮೀನುಗಾರಿಕೆ ಮತ್ತು ಕಡಲ ವ್ಯವಹಾರಗಳ ನಿರ್ದೇಶನಾಲಯ'ವನ್ನು ಸ್ಥಾಪಿಸುವುದರಿಂದ ಮುಂಬರುವ ದಶಕಗಳಲ್ಲಿ ಈ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಾದ ಸಾಂಸ್ಥಿಕ ಬೆಂಬಲ ಮತ್ತು ಅಪೇಕ್ಷಿತ ಒತ್ತಾಸೆಯನ್ನು ಒದಗಿಸುತ್ತದೆ.

ಮೀನುಗಾರಿಕಾ ವಲಯವು ಕರಾವಳಿ ರಾಜ್ಯ / ಯುಟಿ ಸರ್ಕಾರಗಳು (ಮೀನುಗಾರಿಕೆ ಇಲಾಖೆಗಳು), ಕೇಂದ್ರ ಸರ್ಕಾರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ, ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಗೃಹ ವ್ಯವಹಾರ ಸಚಿವಾಲಯ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ, ಜಲಸಂಪನ್ಮೂಲ ಸಚಿವಾಲಯ, ನದಿ ಅಭಿವೃದ್ಧಿ ಮತ್ತು ಗಂಗಾ ಪುನಃಶ್ಚೇತನಗೊಳಿಸುವಿಕೆ, ವಿದ್ಯುತ್ ಸಚಿವಾಲಯ, ರಕ್ಷಣಾ ಸಚಿವಾಲಯ, ಭೂ ವಿಜ್ಞಾನ ಸಚಿವಾಲಯ, ಇತ್ಯಾದಿ) ಮತ್ತು ವೈಜ್ಞಾನಿಕ ಸಂಸ್ಥೆಗಳೊಂದಿಗೆ ವ್ಯವಹರಿಸುತ್ತದೆ. ಈ ಬಹುತ್ವ ಆಡಳಿತ ರಚನೆಯು ಮೀನುಗಾರಿಕೆ ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು ಒಂದು ಕಡೆ ಕರಾವಳಿ ರಾಜ್ಯಗಳು / ಯುಟಿಗಳು ಮತ್ತು ಮತ್ತೊಂದೆಡೆ ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳು / ಇಲಾಖೆಗಳ ನಡುವೆ ಬಲವಾದ ಸಮನ್ವಯವನ್ನು ಬಯಸುತ್ತದೆ. ಮೀನುಗಾರಿಕೆ ಮತ್ತು ಜಲಕೃಷಿಯನ್ನು ಸುಸ್ಥಿರವಾಗಿ ನಿರ್ವಹಿಸಲು ರಾಜ್ಯಗಳು / ಯುಟಿಗಳ ನಡುವೆ ಮತ್ತು ರಾಜ್ಯ / ಯುಟಿ ಒಳಗೆ ಇದೇ ರೀತಿಯ ಸಹಕಾರ ಅಗತ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ, ಅಂತರ ಸಚಿವಾಲಯ / ಇಲಾಖೆ ಸಮಿತಿಗಳು ಮತ್ತು ಇತರ ಸಮನ್ವಯ ಸಂಸ್ಥೆಗಳ ಮೂಲಕ ಎಲ್ಲಾ ಸಂಬಂಧಿತ ಏಜೆನ್ಸಿಗಳ ನಡುವೆ ಉತ್ತಮ ಸಮನ್ವಯಕ್ಕೆ ಅನುವು ಮಾಡಿಕೊಡುವ ವ್ಯವಸ್ಥೆಯನ್ನು ಸೃಷ್ಟಿಸಲು ನೀತಿಯು ಉದ್ದೇಶಿಸಿದೆ.

ಕಡಿಮೆ ಸುಂಕಗಳು ಮತ್ತು ತೆರಿಗೆಗಳು, ನೀರು ಹಂಚಿಕೆ, ವಿದ್ಯುತ್ ಮತ್ತು ಕೃಷಿ ಕ್ಷೇತ್ರಕ್ಕೆ ಲಭ್ಯವಿರುವ ಇತರ ಬೆಂಬಲ ಸೌಲಭ್ಯಗಳ ಪ್ರಯೋಜನಗಳನ್ನು ಪಡೆಯಲು ಜಲಕೃಷಿ ಕ್ಷೇತ್ರವನ್ನು ಕೃಷಿ ಕ್ಷೇತ್ರಕ್ಕೆ ಸಮನಾಗಿ ಪರಿಗಣಿಸಲು ದೀರ್ಘಕಾಲದ ಬೇಡಿಕೆಯಿದೆ. ಕೃಷಿಯಂತೆ ಜಲಕೃಷಿ ಕೂಡ ಆಹಾರ ಉತ್ಪಾದನೆಯಲ್ಲಿ ತೊಡಗಿರುವ ಒಂದು ಪ್ರಾಥಮಿಕ ಚಟುವಟಿಕೆಯಾಗಿರುವುದರಿಂದ ಸಮಾನ ಅವಕಾಶಗಳು ಜಲಕೃಷಿಯ ವಿಸ್ತರಣೆಯನ್ನು ಉತ್ತೇಜಿಸುತ್ತದೆ ಮತ್ತು ದೇಶದ ಆಹಾರ ಮತ್ತು ಪೌಷ್ಠಿಕಾಂಶದ ಅವಶ್ಯಕತೆಗಳನ್ನು ಪೂರೈಸುವಲ್ಲಿ ಸಹಾಯಕವಾಗಲಿದೆ. ಇದಲ್ಲದೆ, ಸಾಲ ನೀಡಿಕೆ, ವಿಮೆ, ಮತ್ತು 'ಫಾರ್ಮ್‌ನಿಂದ ಫೋರ್ಕ್' ಗೆ ಮೌಲ್ಯ ಸರಪಳಿಯನ್ನು ಬಲಪಡಿಸುವ ಅಗತ್ಯತೆಗಳನ್ನು ಪೂರೈಸಲು ನೀತಿ ಬೆಂಬಲವನ್ನು ಒದಗಿಸಲಾಗುವುದು. ಕೃಷಿಯಂತೆ ಸಮಾನ ಅವಕಾಶ ನೀಡುವುದರೊಂದಿಗೆ, ನೀತಿಯು ಮೀನುಗಾರರು

ಮತ್ತು ಮೀನು ಕೃಷಿಕರಿಗೆ ಲಾಭವಾಗುವಂತೆ ಮತ್ತು ಅವರ ಆದಾಯ ದ್ವಿಗುಣಗೊಳ್ಳಲು ಮೀನು ಕೃಷಿ ಚಟುವಟಿಕೆಗಳನ್ನು ಕೃಷಿ ಮತ್ತು ಸಂಬಂಧಿತ ವಲಯದ ಚಟುವಟಿಕೆಗಳೊಂದಿಗೆ ಸಮನ್ವಯ ಸಾಧಿಸಲು ಬಯಸುತ್ತದೆ.

**ಸಾಮರ್ಥ್ಯ ವೃದ್ಧಿ:** ಮೀನುಗಾರಿಕೆ ಮತ್ತು ಜಲಕೃಷಿ ವಲಯದಲ್ಲಿನ ಸಂಸ್ಥೆಗಳ ಅಭಿವೃದ್ಧಿಗೆ ಈ ವಲಯದಲ್ಲಿ ಕೆಲಸವನ್ನು ನಿರ್ವಹಿಸುವ ಜನರು ತಮ್ಮ ಮೂಲಭೂತ ಶಿಕ್ಷಣದ ದೃಷ್ಟಿಯಿಂದ ಸಮರ್ಥರಾಗಿರಬೇಕು ಮತ್ತು ಅವರ ಜ್ಞಾನ ಮತ್ತು ತಾಂತ್ರಿಕ ಮರು–ದೃಷ್ಟಿಕೋನದ ತರಬೇತಿ ಮತ್ತು ಆವರ್ತಕ ಸೇವೆಯ ವರ್ಧನೆಯನ್ನು ಸಹ ಅಗತ್ಯವಾಗಿರುತ್ತದೆ. ಈ ವಲಯವು ಎಲ್ಲಾ ರೀತಿಯಲ್ಲೂ ಉತ್ಪಾದನೆಯಿಂದ ಮೌಲ್ಯ–ಉತ್ಪಾದನೆಯವರೆಗೆ ಅನೇಕ ಪಟ್ಟು ಬೆಳೆದಿದ್ದರೂ, ಈ ವಲಯದಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರು ಮತ್ತು ಪುರುಷರ ಸಾಮರ್ಥ್ಯಗಳು ತಕ್ಕಮಟ್ಟಿಗೆ ಕೆಳಮಟ್ಟದಲ್ಲಿವೆ. ಈ ವಿಶ್ಲೇಷಣೆಯು ಸೇವೆಯ ಸಂಘಟನೆ, ಕೇಡರ್–ಬಿಲ್ಡಿಂಗ್, ಇಂಡಕ್ಷನ್–ಲೆವೆಲ್ ಮತ್ತು ಸೇವೆಯಲ್ಲಿನ ತರಬೇತಿ ಅವಕಾಶಗಳು, ವೃತ್ತಿ ಅವಕಾಶಗಳು, ಸುಧಾರಿತ ತರಬೇತಿ, ಮುಂತಾದ ವಿವಿಧ ನಿಯತಾಂಕಗಳಿಂದ ಬಂದಿದೆ ಮತ್ತು ಮೀನುಗಾರಿಕೆ ಮತ್ತು ಜಲಕೃಷಿ ಸಾಕಣೆ ಕ್ಷೇತ್ರವು ಕೃಷಿ, ಮತ್ತು ಪಶುವೈದ್ಯಕೀಯ ಮತ್ತು ಪಶುಸಂಗೋಪನೆಯಂತಹ ಇತರ ಪ್ರಾಥಮಿಕ ಉತ್ಪಾದನಾ ಕ್ಷೇತ್ರಗಳಿಗೆ ಹೋಲಿಸಿದಲ್ಲಿ ಕೆಳಭಾಗದಲ್ಲಿದೆ. ಈ ಕ್ಷೇತ್ರಕ್ಕೆ ನೀಡಿರುವ ಅನುದಾನ, ವಿಸ್ತರಣಾ ಜವಾಬ್ದಾರಿ ಮತ್ತು ಉತ್ಪಾದನಾ ಗುರಿಗಳನ್ನು ಆಧರಿಸಿ ನೀಡಿರುವ ಆದ್ಯತೆಯನ್ನು ಸಾಧಿಸಲು ಈ ಕ್ಷೇತ್ರದ ಕಾರ್ಯನಿರ್ವಹಿಸುವವರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಪ್ರಮುಖ್ಯ ಆದ್ಯತೆ ನೀಡುವುದು ಅಗತ್ಯವಾಗಿದೆ.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ರಾಜ್ಯಗಳು / ಯುಟಿಗಳಲ್ಲಿ ಮೀನುಗಾರಿಕೆ ಸಹ–ನಿರ್ವಹಣಾ ವ್ಯವಸ್ಥೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುವುದು ಮತ್ತು ಸುಗಮಗೊಳಿಸುವುದು.*
- *ಸರಬರಾಜು ಜಾಲದ ಮೇಲೆ ಸಮುದಾಯ ಮಾಲೀಕತ್ವವನ್ನು ಪ್ರೋತ್ಸಾಹಿಸುವುದು.*
- *ಪೂರಕ ಚಟುವಟಿಕೆಗಳನ್ನು ಒಳಗೊಂಡ ಸಮಗ್ರ ಆದಿಯಿಂದ ಕೊನೆಯವರೆಗಿನ ಸರಬರಾಜು ಜಾಲವನ್ನು ಪ್ರೋತ್ಸಾಹಿಸುವುದು.*
- *ಏಕ–ಕಿಟಕಿ ವ್ಯವಸ್ಥೆಯ ಮೂಲಕ ಚಟುವಟಿಕೆಗಳ ಒಗ್ಗೂಡಿಸುವಿಕೆ ಮತ್ತು ವ್ಯವಹಾರದ ಸುಲಭತೆಗಾಗಿ ಆರ್ & ಡಿ, ಎಂಸಿಎಸ್, ವ್ಯಾಪಾರ, ಅಂತರರಾಷ್ಟ್ರೀಯ ಸಂಬಂಧಗಳು, ಅಭಿವೃದ್ಧಿ ಮುಂತಾದ ಕೇಂದ್ರೀಕೃತ ಚಟುವಟಿಕೆಗಳನ್ನು ಕೈಗೊಳ್ಳಲು ಇಲಾಖೆಯ ಅಡಿಯಲ್ಲಿ ವಿಶೇಷ ವಿಭಾಗಗಳ ಗುಂಪನ್ನು ಸ್ಥಾಪಿಸುವ ಬಗ್ಗೆ ಅನ್ವೇಷಿಸುವುದು.*

- *ಮೀನುಗಾರಿಕೆ ಮತ್ತು ಕಡಲ ವ್ಯವಹಾರಗಳ ಸಚಿವಾಲಯ ಮತ್ತು ಮೀನುಗಾರಿಕೆ ಮತ್ತು ಕಡಲ ವ್ಯವಹಾರಗಳ ನಿರ್ದೇಶನಾಲಯದ ಸ್ಥಾಪನೆಯತ್ತ ಸಾಗುವುದು.*
- *ದೇಶದ ಮೀನುಗಾರಿಕೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳ ಸಾಮರ್ಥ್ಯವನ್ನು ಹೆಚ್ಚಿಸಲು ನೀಲನಕ್ಷೆಯನ್ನು ಅಭಿವೃದ್ಧಿಪಡಿಸುವುದು.*
- *ಜಲಕೃಷಿಯನ್ನು ಕೃಷಿಗೆ ಸಮನಾಗಿ ತರುವುದು.*

### *6.8.3 ಮಾನವ ಸಂಪನ್ಮೂಲ ಮತ್ತು ಉದ್ಯಮಶೀಲತೆ*

ಸ್ವಾತಂತ್ರ್ಯದ ನಂತರ, ಮೀನುಗಾರಿಕೆ ಜೀವನಾಧಾರ ಚಟುವಟಿಕೆಯಿಂದ ವೈವಿಧ್ಯಮಯ ವಾಣಿಜ್ಯ ಚಟುವಟಿಕೆಯಾಗಿ ರೂಪಾಂತರಗೊಂಡಿದ್ದು, ಮೀನುಗಾರರು ಮತ್ತು ಇತರ ಪಾಲುದಾರರ ಉದ್ಯಮಶೀಲತೆಯು (ಅಪ್‌ಸ್ಟ್ರೀಮ್ ಮತ್ತು ಡೌನ್‌ಸ್ಟ್ರೀಮ್ ಎರಡೂ) ಸ್ವಲ್ಪ ಮಾತ್ರ ಬದಲಾವಣೆಗೆ ಒಳಗಾಗಿದೆ. ಕ್ಷೇತ್ರದ ಚಟುವಟಿಕೆಗಳು ಮತ್ತು ಸಂಘಟನೆಯು ಬದಲಾವಣೆಯನ್ನು ವಿರೋಧಿಸುತ್ತವೆ. ಈ ನಿಟ್ಟಿನಲ್ಲಿ ನೀತಿ ಮಾರ್ಗದರ್ಶಿಗಳು ತರಬೇತಿ, ಸಾಮರ್ಥ್ಯ ವೃದ್ಧಿ ಮತ್ತು ಸಾಂಪ್ರದಾಯಿಕ ಮೀನುಗಾರರು ಮತ್ತು ಮೀನು ಕೃಷಿಕರ  ತಾಂತ್ರಿಕ ಕೌಶಲ್ಯಗಳ ಉನ್ನತೀಕರಣವನ್ನು ಸಾಂಪ್ರದಾಯಿಕ ಮೀನುಗಾರಿಕೆ / ಕೃಷಿಯಿಂದ ಹೆಚ್ಚು ಆರ್ಥಿಕ ಮತ್ತು ಪರಿಣಾಮಕಾರಿ ಉದ್ಯೋಗಕ್ಕೆ ಸಹಾಯಕವಾಗುವಂತೆ ನೀಡುತ್ತವೆ.

ಮೀನುಗಾರಿಕೆ ಮತ್ತು ಜಲಕೃಷಿಯ ವ್ಯಾಪಾರೀಕರಣದ ಪ್ರಯೋಜನಗಳ ಸಂಪೂರ್ಣವಾಗಿ ಲಾಭ ಪಡೆಯಲು, ಮೀನುಗಾರರು ಮತ್ತು ಮೀನು ಕೃಷಿಕರಿಗೆ ಉದ್ಯಮಶೀಲತಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು, ಇದು ಮೀನುಗಾರಿಕೆ ಮೌಲ್ಯ ಸರಪಳಿ ಮತ್ತು ಆಧುನಿಕ ಮೀನುಗಾರಿಕೆ ಕ್ಷೇತ್ರದ ಇತರ ಅವಶ್ಯಕತೆಗಳಲ್ಲಿ ತಮ್ಮ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಲು ಪ್ರೋತ್ಸಾಹಿಸುತ್ತದೆ. ದೇಶಾದ್ಯಂತ ಸ್ಥಾಪಿಸಲಾದ ಮೀನುಗಾರಿಕಾ ಕಾಲೇಜುಗಳು ಇದರಲ್ಲಿ ಪಾತ್ರವಹಿಸಬಹುದು. ಅಲ್ಲದೆ, ಕೆಲವು ಆರ್ & ಡಿ ಸಂಸ್ಥೆಗಳು ವಿವಿಧ ಹಂತಗಳಲ್ಲಿನ ಪಾಲುದಾರರ ಉದ್ಯಮಶೀಲತೆಯನ್ನು ಹೆಚ್ಚಿಸಲು ಅಗತ್ಯ ಕಾರ್ಯಕ್ರಮಗಳನ್ನು ಸಹ ತೆಗೆದುಕೊಳ್ಳಬಹುದು.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಮೀನುಗಾರಿಕೆ ಆರ್ & ಡಿ ಮತ್ತು ಶಿಕ್ಷಣ ಸಂಸ್ಥೆಗಳನ್ನು, ತಮ್ಮ ಗ್ರಾಹಕರ ದೃಷ್ಟಿಕೋನವನ್ನು ಸುಧಾರಿಸುವ ಮೂಲಕ ತರಬೇತಿ, ಸಾಮರ್ಥ್ಯ ವೃದ್ಧಿ, ನಿರ್ವಹಣಾ ಯೋಜನೆಗಳ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದು.*

### *6.8.4 ದತ್ತಾಂಶ (Database)*

ಯೋಗ್ಯ ನೀತಿ ರೂಪಿಸಲು ಖಚಿತ ಅಂಕಿ ಅಂಶಗಳು ಪೂರ್ವ ಅವಶ್ಯಕತೆಯಾಗಿದೆ. ಕಳೆದ 4–5 ದಶಕಗಳಲ್ಲಿ ಮೀನುಗಾರಿಕಾ ವಲಯವು ಅನೇಕ ಪಟ್ಟು ಬೆಳೆದಿದ್ದರೂ, ದತ್ತಾಂಶ ಸಂಗ್ರಹಣೆ ಮತ್ತು ಅವುಗಳ ಸಂಯೋಜನೆಯ ಕಾರ್ಯವಿಧಾನಗಳು ಹಿಂದುಳಿದಿವೆ. ಅಂತರರಾಷ್ಟ್ರೀಯವಾಗಿ ಅಂಗೀಕರಿಸಲ್ಪಟ್ಟ ವಿಧಾನಗಳು ಮತ್ತು ಪ್ರೋಟೋಕಾಲ್‌ಗಳನ್ನು ಅನುಸರಿಸಿ ಸಮುದ್ರ ಮೀನು ಹಿಡುವಳಿ ದತ್ತಾಂಶವನ್ನು ನಿಯಮಿತವಾಗಿ ಸಂಗ್ರಹಿಸಲಾಗುತ್ತದೆಯಾದರೂ, ಇತರ ಕ್ಷೇತ್ರಗಳಲ್ಲಿಯೂ ಇದು ನಡೆಯುತ್ತಿಲ್ಲ. ಸಮುದ್ರ ಮೀನುಗಾರಿಕೆ ಕ್ಷೇತ್ರದಲ್ಲಿ ನಡೆಸುವ ಐದು ವರ್ಷಗಳ ಜನಗಣತಿಯನ್ನು ಹೊರತುಪಡಿಸಿ, ಜಲಕೃಷಿ ಸಾಕಣೆ ಸೇರಿದಂತೆ ಒಳನಾಡಿನ ಮೀನುಗಾರಿಕೆಗೂ ಇದೇ ರೀತಿಯ ಮಾಹಿತಿ ಲಭ್ಯವಿಲ್ಲ. ಸಂಶೋಧನಾ ಪ್ರಕಟಣೆಗಳ ಮೂಲಕ ಲಭ್ಯವಿರುವ ಮಾಹಿತಿಯನ್ನು ಹೊರತುಪಡಿಸಿ, ಜೈವಿಕ ಅಂಶಗಳ ವ್ಯವಸ್ಥಿತ ವ್ಯಾಪ್ತಿ ಮತ್ತು ಸಮುದಾಯಗಳು / ಸಂಬಂಧಿತ ಮಧ್ಯಸ್ಥಗಾರರ ಸಾಮಾಜಿಕ–ಆರ್ಥಿಕ ಗುಣಲಕ್ಷಣಗಳ ಮಾಹಿತಿಗಳು ಕಡಿಮೆ ಇವೆ.

ಮೇಲಿನವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಖಚಿತ ದತ್ತಾಂಶದ ಲಭ್ಯತೆಯು ಅಭಿವೃದ್ಧಿ ಚೌಕಟ್ಟಿನಲ್ಲಿ ದುರ್ಬಲ ಕೊಂಡಿಯಾಗಿ ಮುಂದುವರೆದಿದೆ ಎಂಬ ಅಂಶವನ್ನು ಒಪ್ಪಿಕೊಂಡು, ನೀತಿ ಮಾರ್ಗದರ್ಶಿಗಳು ಕ್ಷೇತ್ರದ ವಿವಿಧ ಆಯಾಮಗಳ ಸಮರ್ಪಕ ವ್ಯಾಪ್ತಿಯನ್ನು ಖಾತ್ರಿಪಡಿಸುವ ದತ್ತಾಂಶ ಸಂಗ್ರಹಣೆಗೆ ಸೂಕ್ತ ವ್ಯವಸ್ಥೆಗಳನ್ನು ರಚಿಸುವುದರ ಮೇಲೆ ಕೇಂದ್ರೀಕರಿಸುತ್ತವೆ. ಮತ್ತು ವಿಶ್ವಾಸಾರ್ಹ, ದತ್ತಾಂಶ ಸಂಗ್ರಹ ಕಾರ್ಯವಿಧಾನಗಳು ಪಾರದರ್ಶಕವಾಗಿವೆ ಮತ್ತು ಅಂಕಿಅಂಶ ಸಂಗ್ರಹ ಸುಗಮ ಮತ್ತು ಅಡಚಣೆಯಿಲ್ಲದೆ ಸಾಗಲು ಗಮನಹರಿಸುತ್ತದೆ. ಮೀನುಗಾರರು ಮತ್ತು ಮೀನು ಕೃಷಿಕರಿಗೆ ನಿಯಮಿತವಾಗಿ 'ಪರಿಸ್ಥಿತಿ ಮೌಲ್ಯಮಾಪನ ಸಮೀಕ್ಷೆ' (Situation Assessment Survey) ನಡೆಸಲು ಅಂಕಿಅಂಶ ಮತ್ತು ಯೋಜನೆ ಅನುಷ್ಠಾನ ಸಚಿವಾಲಯಕ್ಕೆ (ಎಂಒಎಸ್‌ಪಿಐ) ಕೋರಲಾಗುವುದು. ಮೀನುಗಾರಿಕೆ ದತ್ತಾಂಶ ಸಂಗ್ರಹಣೆ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡಲು ಮತ್ತು ದತ್ತಾಂಶ ಸಂಗ್ರಹಣೆ, ಸಂಸ್ಕರಣೆ ಮತ್ತು ಪ್ರಸಾರಕ್ಕೆ ಕೊಡುಗೆ ನೀಡುವ ಏಜೆನ್ಸಿಗಳಿಗೆ ಅಗತ್ಯವಾದ ಪ್ರೋತ್ಸಾಹವನ್ನು ಒದಗಿಸಲು ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯದಿಂದ ರಾಷ್ಟ್ರಮಟ್ಟದ ಪ್ಲಾಟ್‌ಫಾರಂ ಅನ್ನು ರಚಿಸಲಾಗುವುದು.

**ತಕ್ಷಣದ ಕ್ರಮಕೈಗೊಳ್ಳಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಪ್ರಕ್ರಿಯೆಯ ಮೇಲ್ವಿಚಾರಣೆಗೆ ಮತ್ತು ದತ್ತಾಂಶ ಸಂಗ್ರಹಣೆ, ಸಂಸ್ಕರಣೆ ಮತ್ತು ಪ್ರಸಾರಕ್ಕೆ ಕಾರಣವಾಗುವ ಏಜೆನ್ಸಿಗಳಿಗೆ ಅಗತ್ಯವಾದ ಪ್ರೋತ್ಸಾಹವನ್ನು ಒದಗಿಸಲು ರಾಷ್ಟ್ರೀಯ ಮಟ್ಟದ ವೇದಿಕೆಯನ್ನು ಅಭಿವೃದ್ಧಿಪಡಿಸುವುದು.*

### *6.8.5 ಜ್ಞಾನವನ್ನು ತಲುಪಿಸುವುದು ಮತ್ತು ತಾಂತ್ರಿಕ ಬೆಂಬಲವನ್ನು ನೀಡುವುದು*

ಭಾರತವು ಮೀನುಗಾರಿಕೆ ಆರ್ & ಡಿ ಸಂಸ್ಥೆಗಳ ಅತ್ಯಂತ ವ್ಯಾಪಕವಾದ ಜಾಲವನ್ನು ಹೊಂದಿದೆ. ಐಸಿಎಆರ್ ಅಡಿಯಲ್ಲಿನ ಎಂಟು ಮೀನುಗಾರಿಕೆ ಸಂಸ್ಥೆಗಳು; ಅರೆ–ನ್ಯಾಯಾಂಗ ಸಂಸ್ಥೆ– ಕರಾವಳಿ ಅಕ್ವಾಕಲ್ಚರ್ ಪ್ರಾಧಿಕಾರ ಸೇರಿದಂತೆ MFAH & D ಅಡಿಯಲ್ಲಿರುವ ಆರು ಆರ್ & ಡಿ ಸಂಸ್ಥೆಗಳು; ಸಾಗರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಮೂರು ಸಂಸ್ಥೆಗಳು; ಭೂ ವಿಜ್ಞಾನ ಸಚಿವಾಲಯದ ಅಡಿಯಲ್ಲಿ ನಾಲ್ಕು ಸಂಸ್ಥೆಗಳು; ಮತ್ತು ವಿವಿಧ ರಾಜ್ಯಗಳು / ಯುಟಿಗಳಲ್ಲಿರುವ 30 ಮೀನುಗಾರಿಕಾ ಕಾಲೇಜುಗಳು ದೇಶದಲ್ಲಿ ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿಗೆ ಅನುಭವಿ ಮಾನವ ಸಂಪನ್ಮೂಲ ಸಮೂಹವನ್ನು ಒದಗಿಸುತ್ತವೆ. ವಿಭಾಗಗಳು ಮತ್ತು ಭೌಗೋಳಿಕತೆಗೆ ಸಂಬಂಧಿಸಿದಂತೆ ಅವುಗಳ ವ್ಯಾಪ್ತಿ ವಿಸ್ತಾರವಾಗಿದೆ.

ಐಸಿಎಆರ್ ಮೀನುಗಾರಿಕೆ ಸಂಸ್ಥೆಗಳು ಸ್ಥಾಪನೆಯ ಆರಂಭದಿಂದಲೂ ಮೀನುಗಾರಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಉಪಕ್ರಮಗಳಲ್ಲಿ ಮುಂಚೂಣಿಯಲ್ಲಿವೆ. ಎಪ್ಪತ್ತರ ದಶಕ ಉತ್ತರಾರ್ಧದಲ್ಲಿ ಮೊದಲ ನೀಲಿ ಕ್ರಾಂತಿಗೆ ಭಾರತೀಯ ದೊಡ್ಡಗೆಂಡೆ ಮತ್ತು ವಿದೇಶಿ ಪ್ರಭೇದಗಳ (ಸಿಲ್ವರ್ ಕಾರ್ಪ್, ಹುಲ್ಲು ಗೆಂಡೆ ಮತ್ತು ಸಾಮಾನ್ಯ ಗೆಂಡೆಗಳ) ಸಂಯೋಜಿತ (Composite) ಕೃಷಿ ಮತ್ತು ಮೀನುಮರಿ ಉತ್ಪಾದನಾ ತಂತ್ರಜ್ಞಾನಗಳನ್ನು ಐಸಿಎಆರ್ ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆಯ ಮೂಲಕ ನೀಡಿದ ವಿಸ್ತರಣಾ ಸೇವೆ ಮತ್ತು ತಾಂತ್ರಿಕ ನೆರವುಗಳ ಜನಪ್ರಿಯಗೊಳಿಸಿರುವುದು ಮತ್ತು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳನ್ನು (ಎಫ್.ಎಫ್.ಡಿ.ಎ) ಸ್ಥಾಪಿಸುವ ಮೂಲಕ ಆಗಿನ ಕೃಷಿ ಮತ್ತು ಸಹಕಾರ ಸಚಿವಾಲಯವು ದೇಶಾದ್ಯಂತ ಸ್ಥಾಪಿಸಿರುವುದು ಕಾರಣವಾಗಿದೆ. ಗಾಳಿಯ ಉಸಿರಾಟದ ಮೀನುಗಳು, ಉಪ್ಪುನೀರಿನ ಜಲಕೃಷಿ ಮತ್ತು ಜಲಾಶಯದ ಮೀನುಗಾರಿಕೆ ಅಭಿವೃದ್ಧಿಯಲ್ಲಿ ಇದೇ ರೀತಿಯ ಬೆಳವಣಿಗೆಗಳು ನಡೆದವು. ಸಮುದ್ರ ಮೀನುಗಾರಿಕೆ ವಲಯದಲ್ಲೂ ಯೋಗ್ಯ ವಿಧಾನದ ಮೂಲಕ ಸಮುದ್ರ ಮೀನುಗಾರಿಕೆಯ ಅಂಕಿ ಅಂಶಗಳ ಸಂಗ್ರಹ, ಹಿಡಿಯಬಹುದಾದ ಮೀನಿನ ಕನಿಷ್ಠ ಗಾತ್ರವನ್ನು ನಿಗದಿಪಡಿಸುವುದು, ಮೀನಿನ ಸಂಪನ್ಮೂಲಗಳ ಅಧ್ಯಯನ, ಸಮುದ್ರ ಮೀನು ಕೃಷಿಗೆ ಯೋಗ್ಯವಾದ ಜಾತಿಯ ಮೀನು ಮರಿಗಳ ಉತ್ಪಾದನಾ ತಂತ್ರಜ್ಞಾನದ ಅಭಿವೃದ್ಧಿ, ಐದು ವರ್ಷಕ್ಕೊಮ್ಮೆ ಸಮುದ್ರ ಮೀನುಗಾರಿಕೆಯ ಗಣತಿ, ಸುಧಾರಿತ ಮೀನು ಹಿಡುವಳಿ ನಂತರದ ತಂತ್ರಜ್ಞಾನಗಳು, ದೋಣಿಗಳ ಹೊಸ ವಿನ್ಯಾಸ ಮತ್ತು ಗುಣಮಟ್ಟದ ನಿಯಂತ್ರಣ ಮೊದಲಾದವುಗಳ ಮೂಲಕ ಐಸಿಎಆರ್ ಸಂಸ್ಥೆಗಳು ಮಹತ್ತರ ಸೇವೆಯನ್ನು ನೀಡುತ್ತಿವೆ. ಆದಾಗ್ಯೂ, ಇಂದು, ಜಲಕೃಷಿ ವಲಯದಿಂದ ಹೆಚ್ಚಿನ ಉತ್ಪಾದನೆಯನ್ನು ನಿರೀಕ್ಷಿಸಲಾಗಿದೆ ಮತ್ತು ಮೀನು ಹಿಡುವಳಿಯನ್ನು ಗರಿಷ್ಠ ಮಟ್ಟದಲ್ಲಿ ಉಳಿಸಿಕೊಳ್ಳಬೇಕಾದರೆ, ಮೀನುಗಾರಿಕಾ ಸಂಸ್ಥೆಗಳ ನಿರೀಕ್ಷಿತ ಪಾತ್ರವು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತದೆ. ಕೆಳಹಂತದಲ್ಲಿರುವ ಕೃಷಿಕರ ತಕ್ಷಣದ ಅಗತ್ಯಗಳನ್ನು ಪೂರೈಸುವ ತಂತ್ರಜ್ಞಾನಗಳು

ಇಂದಿನ ಅಗತ್ಯವಾಗಿದೆ. ಮೂಲ ವಿಜ್ಞಾನ ಮತ್ತು ಹೊಂದಾಣಿಕೆಯ ಸಂಶೋಧನೆಯ ನಡುವೆ ಸಮತೋಲನ ಅಗತ್ಯ. ವಿಸ್ತರಣೆ ಸೇವೆಗಳು ಮತ್ತು ನೆರವಿನ ಅಗತ್ಯವು ಮೊದಲಿಗಿಂತಲೂ ಹೆಚ್ಚಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಸಂಶೋಧನೆಯು ಅಭಿವೃದ್ಧಿಯ ಮುಂದೆ ಸಾಗಬೇಕಾಗಿದೆ. ಇದರಿಂದಾಗಿ ಸಂಶೋಧನಾ ಫಲಿತಾಂಶಗಳನ್ನು ಹಿಂದಿನಂತೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಬಳಸಲ್ಪಡುತ್ತವೆ. ಆರ್ & ಡಿ ಸಂಸ್ಥೆಗಳು ಖಾಸಗಿ ವಲಯದೊಂದಿಗೆ ಬಲವಾದ ಸಂಬಂಧವನ್ನು ಹೊಂದಬೇಕು ಮತ್ತು ಸಂಪನ್ಮೂಲಗಳನ್ನು ಸದ್ಬಳಕೆ ಮಾಡಲು ಒಟ್ಟಾಗಿ ಕೆಲಸ ಮಾಡಬೇಕು ಮತ್ತು ತಂತ್ರಜ್ಞಾನಗಳ ಸಂಶೋಧನಾಲಯದಿಂದ ಮೀನುಕೃಷಿ ಕ್ಷೇತ್ರಕ್ಕೆ ಕಡಿಮೆ ಅವಧಿಯನ್ನು ವರ್ಗಾವಣೆ ಮಾಡಬೇಕು. ನೀತಿ ಮಾರ್ಗದರ್ಶಿಗಳು ಸಂಶೋಧನೆ ಮತ್ತು ಅಭಿವೃದ್ಧಿಯ ನಡುವಿನ ಸಂಪರ್ಕಗಳನ್ನು ಮತ್ತಷ್ಟು ಬಲಪಡಿಸುವ ಗುರಿಯನ್ನು ಹೊಂದಿವೆ. ನೀತಿ ಮಾರ್ಗದರ್ಶಿಗಳು ಜವಾಬ್ದಾರಿಯುತ ಆರ್ & ಡಿ, ಮತ್ತು ಮೀನುಗಾರಿಕೆ ಅಭಿವೃದ್ಧಿ ಮತ್ತು ಆಡಳಿತದಲ್ಲಿ ಅವುಗಳ ಬಳಕೆಯನ್ನು ಖಚಿತಪಡಿಸುತ್ತದೆ. ಕಟ್ಟಕಡೆಯ ಕ್ಷೇತ್ರದವರೆಗಿನ ಜ್ಞಾನ ಪ್ರಸಾರವು ನೀತಿಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಹೆಚ್ಚುತ್ತಿರುವ ಸಾಕ್ಷರತೆ, ಮತ್ತು ಇಂಟರ್ನೆಟ್, ಮತ್ತು ಸ್ಮಾರ್ಟ್‌ಫೋನ್‌ನ ನಿರಂತರ ಬಳಕೆಯಿಂದಾಗಿ, ಜ್ಞಾನ ಪ್ರಸಾರವನ್ನು ಹೆಚ್ಚಾಗಿ ವರ್ಚುವಲ್ ಪ್ಲಾಟ್‌ಫಾರ್ಮ್‌ಗಳ ಮೂಲಕ ವೇಗವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಎಲ್ಲರಿಗೂ ನಡೆಸಲಾಗುವುದನ್ನು ನೀತಿಯು ಖಚಿತಪಡಿಸುತ್ತದೆ. ನೀತಿ ಮಾರ್ಗದರ್ಶಿಗಳು ಐಟಿ ಆಧಾರಿತ ಜ್ಞಾನದ 'ಹಬ್ ಮತ್ತು ಕಡ್ಡಿಗಳನ್ನು' (Hub & Spokes) ಮೀನುಗಾರರಿಗೆ ಮತ್ತು ಮೀನು ಕೃಷಿಕರಿಗೆ ನೈಜ–ಸಮಯದ ಆಧಾರದ ಮೇಲೆ ಲಭ್ಯವಾಗುವಂತಹ ಮಾಹಿತಿ ಸಂಗ್ರಹಣೆ, ಪರಿಶೀಲನೆ ಮತ್ತು ಸಂಸ್ಕರಣೆಗೆ ಕೇಂದ್ರಗಳನ್ನು ಸ್ಥಾಪಿಸಲು ನೀತಿಯು ಕೇಂದ್ರಿಕರಿಸುತ್ತದೆ. ಅಂತಿಮ–ಬಳಕೆದಾರರಿಗೆ ಒದಗಿಸಲಾದ ಮಾಹಿತಿಯು ಆಡುಭಾಷೆಯಲ್ಲಿದೆ ಎಂದು ಖಚಿತಪಡಿಸಿಕೊಳ್ಳಲಾಗುತ್ತದೆ ಇದರಿಂದ ಅರ್ಥಮಾಡಿ ಕೊಳ್ಳುವುದು ಸುಲಭವಾಗುತ್ತದೆ. ಮೀನುಗಾರಿಕೆ ಇಲಾಖೆಯಿಂದ ಸಮುದ್ರ ಮೀನುಗಾರಿಕೆಯಲ್ಲಿ 'ಸಾಗರ್ ಮಿತ್ರ' ಅನ್ನು ಉತ್ತೇಜಿಸುವುದು ಪಾಲುದಾರರನ್ನು ಸಂಪರ್ಕಿಸಲು ಉಪಯುಕ್ತವಾಗುತ್ತದೆ.

**ತಕ್ಷಣದ ಕ್ರಮವಹಿಸಬೇಕಾದ ಪ್ರಮುಖ ಕ್ಷೇತ್ರಗಳು ಕೆಳಗಿನಂತಿವೆ:**

- *ಸುಧಾರಿತ ದತ್ತಾಂಶ ನಿರ್ವಹಣಾ ನೀತಿ, ಎಲ್ಲರಿಗೂ ವಿಸ್ತರಣೆ ಸೇವೆಗಳು ಮತ್ತು ಅಂತರ ಸಚಿವಾಲಯ ಸಹಕಾರದ ಮೂಲಕ ಜ್ಞಾನ ನಿರ್ವಹಣೆಯನ್ನು ಹೆಚ್ಚಿಸುವುದು.*
- *ಸುಸ್ಥಿರ ಮೀನುಗಾರಿಕೆ ಮತ್ತು ಜಲಕೃಷಿಗಾಗಿ ಸಾಕಣೆಗಾಗಿ ತಂತ್ರಜ್ಞಾನಗಳು / ನಿರ್ವಹಣಾ ಪದ್ಧತಿಗಳ ತ್ವರಿತ ಅಭಿವೃದ್ಧಿ ಮತ್ತು ಪ್ರಸಾರಕ್ಕಾಗಿ ಮೀನುಗಾರಿಕೆ ಕ್ಷೇತ್ರದಲ್ಲಿ ಆರ್ & ಡಿ ಸಂಪರ್ಕವನ್ನು ಬಲಪಡಿಸುವುದು.*

## 6.9 ಪ್ರಾದೇಶಿಕ / ಅಂತರರಾಷ್ಟ್ರೀಯ ಬದ್ಧತೆಗಳು

### *6.9.1 ಪ್ರಾದೇಶಿಕ ಸಹಕಾರವನ್ನು ಉತ್ತೇಜಿಸುವುದು*

ಭಾರತೀಯ ಉಪಖಂಡವನ್ನು ಪಶ್ಚಿಮಕ್ಕೆ ಅರೇಬಿಯನ್ ಸಮುದ್ರ ಮತ್ತು ಪೂರ್ವದಲ್ಲಿ ಬಂಗಾಳಕೊಲ್ಲಿಯಿಂದ ಸುತ್ತುವರೆದಿದೆ. ಒಟ್ಟಿನಲ್ಲಿ, ಎರಡು ಸಮುದ್ರಗಳು ಹಿಂದೂ ಮಹಾಸಾಗರದ ಮೇಲಿನ ಭಾಗವಾಗಿದೆ. ಪಶ್ಚಿಮ ಕರಾವಳಿಯಲ್ಲಿ, ಭಾರತ ತನ್ನ ಕಡಲ ಗಡಿಯನ್ನು ಪಾಕಿಸ್ತಾನ ಮತ್ತು ಮಾಲ್ಡೀವ್ಸ್ ನೊಂದಿಗೆ ಹಂಚಿಕೊಂಡರೆ, ಪೂರ್ವ ಕರಾವಳಿಯಲ್ಲಿ, ಗಡಿಗಳನ್ನು ಶ್ರೀಲಂಕಾ, ಬಾಂಗ್ಲಾದೇಶ, ಮ್ಯಾನ್ಮಾರ್, ಥೈಲ್ಯಾಂಡ್ ಮತ್ತು ಇಂಡೋನೇಷ್ಯಾದೊಂದಿಗೆ ಹಂಚಿಕೊಂಡಿದೆ. ಕೆಲವು ಸಂದರ್ಭಗಳಲ್ಲಿ, ಇದು ಹಂಚಿಕೆಯಾದ ಕಡಲ ಗಡಿಗಳು ಮಾತ್ರವಲ್ಲದೆ ಭಾರತ ಮತ್ತು ಶ್ರೀಲಂಕಾ ನಡುವಿನ ಮನ್ನಾರ್ ಕೊಲ್ಲಿ ಮತ್ತು ಪಾಕ್ ಕೊಲ್ಲಿ; ಬಾಂಗ್ಲಾದೇಶ ಮತ್ತು ಭಾರತದ ನಡುವಿನ ಸುಂದರಬನ್ಸ್; ಮತ್ತು ಅಂಡಮಾನ್ ಸಮುದ್ರದಲ್ಲಿನ ಮೈಕ್ (ಮೆರ್ಗುಯಿ) ದ್ವೀಪಸಮೂಹದಂತಹ ಹಂಚಿಕೆಯಾದ ಪರಿಸರ ವ್ಯವಸ್ಥೆಗಳಾಗಿದೆ. ಅರೇಬಿಯನ್ ಸಮುದ್ರ ಮತ್ತು ಬಂಗಾಳಕೊಲ್ಲಿಯ ಎರಡೂ ಟ್ಯೂನ ಮತ್ತು ಟ್ಯೂನ ತರಹದ ಜಾತಿಗಳ, ಶಾರ್ಕ್ ಮತ್ತು ಸ್ಪ್ಯಾನಿಷ್ ಮ್ಯಾಕೆರೆಲ್‌ಗಳಂತಹ ವಲಸೆ ಹೋಗುವ ಮತ್ತು ವಿಶಾಲವಾಗಿ ಹರಡಿರುವ ಮೀನು ದಾಸ್ತಾನುಗಳನ್ನು ಹೊಂದಿವೆ. ಸನ್ನಿವೇಶಗಳಿಗೆ ಅಗತ್ಯವಾದಂತೆ, ಅಗತ್ಯವಿರುವ ಕಡೆಗಳಲ್ಲಿ ಮೀನಿನ ಜಾತಿಗಳು / ದಾಸ್ತಾನುಗಳ ಸಂರಕ್ಷಣೆ ಸೇರಿದಂತೆ ಸಂಪನ್ಮೂಲಗಳ ನಿರ್ವಹಣೆ ಮತ್ತು ಸುಸ್ಥಿರ ಬಳಕೆಯಲ್ಲಿ ಸರ್ಕಾರವು ಬಲವಾದ ಪ್ರಾದೇಶಿಕ ಸಹಕಾರವನ್ನು ಬೆಳೆಸುತ್ತದೆ.

ಮೀನುಗಾರರ ಸುರಕ್ಷತೆ ಮತ್ತು ಭದ್ರತೆಯಲ್ಲಿಯೂ ಸಹಕಾರವು ಅಗತ್ಯ. ಮೇಲಿನ ಹಿಂದೂ ಮಹಾಸಾಗರ, ಅದರಲ್ಲೂ ವಿಶೇಷವಾಗಿ ಬಂಗಾಳಕೊಲ್ಲಿಯ ಮತ್ತು ಇತ್ತೀಚಿನ ವರ್ಷಗಳಲ್ಲಿ ಅರೇಬಿಯನ್ ಸಮುದ್ರವು ಹೆಚ್ಚಿನ ಸಂಖ್ಯೆಯ ಪ್ರತಿಕೂಲ ಹವಾಮಾನ ಘಟನೆಗಳಿಗೆ ಸಾಕ್ಷಿಯಾಗಿದೆ ಮತ್ತು ಪ್ರತಿವರ್ಷ ಅನೇಕ ಮೀನುಗಾರರು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಾರೆ ಅಥವಾ ತೀವ್ರ ಸಂಕಷ್ಟಗಳನ್ನು ಅನುಭವಿಸುತ್ತಾರೆ. ಇದಲ್ಲದೆ, ಪ್ರಾದೇಶಿಕ ಮೀನುಗಾರಿಕೆ ಮತ್ತು ಪರಿಸರ ಸಂಸ್ಥೆಗಳಲ್ಲಿ ಭಾಗವಹಿಸುವ ಮೂಲಕ, ದ್ವಿಪಕ್ಷೀಯ ವ್ಯವಸ್ಥೆಗಳ ಮೂಲಕ ಸಮುದ್ರ ಮೀನುಗಾರಿಕೆ ಕ್ಷೇತ್ರದಲ್ಲಿ ಸಹಕಾರವನ್ನು ಹೆಚ್ಚಿಸಲಾಗುವುದು. ಅಂತಹ ಸಹಕಾರವು ಹಂಚಿದ ಸಂಪನ್ಮೂಲಗಳು ಮತ್ತು ಹಂಚಿದ ಪರಿಸರ ವ್ಯವಸ್ಥೆಗಳನ್ನು ನಿರ್ವಹಿಸಲು ಅನುಕೂಲವಾಗುತ್ತದೆ; ಗಡಿರೇಖೆ ಮೀರಿದ ಸಂಪನ್ಮೂಲಗಳ ಯೋಗ್ಯ ರೀತಿಯಲ್ಲಿ ಹಿಡಿಯಲು ನೀತಿಗಳು ಮತ್ತು ಕಾರ್ಯಕ್ರಮಗಳ ಸಾಮರಸ್ಯ; ಮಾನವ ಹಕ್ಕುಗಳ ರಕ್ಷಣೆ, ವಿಶೇಷವಾಗಿ ಇತರ ದೇಶಗಳ ನೀರಿನಲ್ಲಿ ದಾರಿ ತಪ್ಪುವ ಮೀನುಗಾರರಿಗೆ ಸಹಕಾರಿಯಾಗುತ್ತದೆ.

ಭಾರತೀಯ ಮೀನುಗಾರರು ತಮ್ಮ ಕೌಶಲ್ಯ, ಶ್ರಮಶೀಲ ಸ್ವಭಾವ ಮತ್ತು ಸವಾಲಿನ ಪರಿಸ್ಥಿತಿಗಳಲ್ಲಿ ಕೆಲಸ ಮಾಡುವ ಸಾಮರ್ಥ್ಯಕ್ಕಾಗಿ ಈ ಪ್ರದೇಶದ ಇತರ ದೇಶಗಳಲ್ಲಿ ವ್ಯಾಪಕವಾಗಿ ಗುರುತಿಸಲ್ಪಟ್ಟಿದ್ದಾರೆ.

ಇದರ ಪರಿಣಾಮವಾಗಿ, ಭಾರತದಿಂದ ಹೆಚ್ಚು ಹೆಚ್ಚು ಮೀನುಗಾರರು ಈಗ ಇತರ ದೇಶಗಳ ಮೀನುಗಾರಿಕಾ ಪಡೆಗಳಲ್ಲಿ ಉದ್ಯೋಗವನ್ನು ಪಡೆಯುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ, ಭಾರತೀಯ ಮೀನುಗಾರರನ್ನು ನೆರೆಯ ದೇಶಗಳಲ್ಲಿ ಬಂಧಿಸಲಾಗಿದೆ, ಏಕೆಂದರೆ ಮೀನುಗಾರಿಕೆ ಮಾಡುವಾಗ ಅವರು ತಿಳಿಯದೆ ಇತರ ದೇಶಗಳ ಇಇಜೆಡ್ ಪ್ರವೇಶಿಸುತ್ತಾರೆ. ಇದರಿಂದಾಗಿ ಸರ್ಕಾರವು ಸಾಮಾನ್ಯ ವ್ಯವಸ್ಥೆಗಳ ಮೂಲಕ ಅವರ ಬಿಡುಗಡೆಯು ಕಷ್ಟಕರವಾಗಿದೆ. ಈ ನೀತಿಯು ಇತರ ದೇಶಗಳಲ್ಲಿ ಮೀನುಗಾರಿಕೆ ಕ್ಷೇತ್ರದಲ್ಲಿ ಉದ್ಯೋಗ ಪಡೆಯಲು ಸಿದ್ಧರಿರುವವರು ಅನ್ಯದೇಶದ ಸಮುದ್ರಗಳಲ್ಲಿ ಕೆಲಸ ಮಾಡುವ ಬಗ್ಗೆ ಸಾಕಷ್ಟು ಕೌಶಲ್ಯ ಮತ್ತು ಜ್ಞಾನವನ್ನು ಹೊಂದಿದ್ದಾರೆ ಮತ್ತು ಸರ್ಕಾರದ ಔಪಚಾರಿಕ ಅನುಮೋದನೆಗಳ ಮೂಲಕ ಹೋಗುತ್ತಾರೆ ಎಂದು ಖಾತರಿಪಡಿಸುತ್ತದೆ.

ಅಂತರರಾಷ್ಟ್ರೀಯ ಬದ್ಧತೆಗಳಿಗೆ ಸಂಬಂಧಿಸಿದಂತೆ, ಇದು ತನ್ನ ಜವಾಬ್ದಾರಿಗಳನ್ನು ಪೂರೈಸುವ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (SDG) ಪೂರೈಸುವ ಜಾಗತಿಕ ಕಾರ್ಯಸೂಚಿಯನ್ನು ಅದರಲ್ಲೂ ಮುಖ್ಯವಾಗಿ ಎಸ್‌ಡಿಜಿ ಗುರಿ 14–'ನೀರಿನೊಳಗಿನ ಜೀವನ' ಬೆಂಬಲಿಸುವ ಪ್ರಯತ್ನವಾಗಿದೆ.

### *6.9.2 ಭಾರತವನ್ನು ಈ ಪ್ರದೇಶದ ನಾಯಕನ ಸ್ಥಾನದಲ್ಲಿರಿಸುವುದು*

ಮೀನುಗಾರಿಕೆಯಲ್ಲಿನ ಜಾಗತಿಕ ಪ್ರವೃತ್ತಿ ಏನೆಂದರೆ, ಒಂದು ದೇಶವು ತನ್ನ ಮೀನುಗಾರಿಕೆಯನ್ನು ನಿರ್ವಹಿಸುವಲ್ಲಿನ ವಿಶ್ವಾಸಾರ್ಹತೆಯು ಅದರ ವ್ಯಾಪಾರ ಸಾಮರ್ಥ್ಯವನ್ನು ನಿರ್ಧರಿಸುತ್ತದೆ. ಮೀನುಗಾರಿಕೆ ನಿರ್ವಹಣೆಗೆ ಶ್ಲಾಘಿಸಲ್ಪಟ್ಟ ಮೀನುಗಾರಿಕೆ ರಾಷ್ಟ್ರಗಳಾದ ಆಸ್ಟ್ರೇಲಿಯಾ, ನಾರ್ವೆ, ನ್ಯೂಜಿಲೆಂಡ್ ಮತ್ತು ಇತರ ದೇಶಗಳನ್ನು ನೋಡಿದರೆ, ಇದನ್ನು ದ್ವಿಮುಖ ಪ್ರಕ್ರಿಯೆಯ ಮೂಲಕ ಸಾಧಿಸಬಹುದು. ಮೊದಲನೆಯದಾಗಿ, ದೇಶಗಳು ನಿರ್ವಹಣಾ ಪ್ರಭುತ್ವಗಳನ್ನು ಸ್ಥಾಪಿಸುತ್ತವೆ, ಇವುಗಳಿಗೆ ಅಂತರರಾಷ್ಟ್ರೀಯ ಸಮುದಾಯವು ಹೆಚ್ಚು ಬೆಲೆ ಕೊಡುತ್ತದೆ ಮತ್ತು ಅವುಗಳ ಪರಿಣಾಮವನ್ನು ವಿಭಿನ್ನ ಸೂಚಕಗಳಲ್ಲಿ ಅಳೆಯಲಾಗುತ್ತದೆ. ಎರಡನೆಯದಾಗಿ, ಅವರು ಜ್ಞಾನದ ಪ್ರಮುಖ ರಫ್ತುದಾರರಾದರು. ಜ್ಞಾನ ರಫ್ತುದಾರರಾಗುವ ಮೂಲಕ, ಅವರು ಉತ್ತಮ ನಿರ್ವಹಣೆಯ ರುಜುವಾತುಗಳನ್ನು ಮತ್ತಷ್ಟು ದೃಢಪಡಿಸಿದರು. ಭಾರತವು ಅತ್ಯುತ್ತಮ ಸಾಮರ್ಥ್ಯವನ್ನು ಹೊಂದಿರುವ ವೈಜ್ಞಾನಿಕ ಸಂಸ್ಥೆಗಳನ್ನು ಹೊಂದಿದೆ. ಆದರೆ ರಾಷ್ಟ್ರೀಯ ಗಡಿಗಳನ್ನು ಮೀರಿದ ಯಾವುದೇ ಮಾನ್ಯತೆ ಅಥವಾ ಅನುಭವವಿಲ್ಲ. ಅಂತರರಾಷ್ಟ್ರೀಯ ಮಾನ್ಯತೆ ಕೊರತೆಯಿಂದಾಗಿ, ಜಾಗತಿಕ ಮೀನುಗಾರಿಕೆ ಮತ್ತು ಜಲಕೃಷಿಯ ಭವಿಷ್ಯವನ್ನು ರೂಪಿಸುವ ಜಾಗತಿಕ ಚರ್ಚೆಗಳು ಮತ್ತು ಜಾಗತಿಕ ಕಾರ್ಯಸೂಚಿಯಲ್ಲಿ ಭಾರತೀಯ ವಿಜ್ಞಾನಿಗಳು ವಿರಳವಾಗಿ ಕಾಣಿಸಿಕೊಂಡಿದ್ದಾರೆ. ರಾಷ್ಟ್ರೀಯ ಆರ್ & ಡಿ ಸ್ಥಾಪನೆಯನ್ನು ಉತ್ತೇಜಿಸಲು, ಪ್ರಾದೇಶಿಕ ಸಂಸ್ಥೆಗಳಲ್ಲಿ ಮೊದಲು ಅವರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಮತ್ತು ಬಹು–ದೇಶಗಳಲ್ಲಿ ತರಬೇತಿ, ಸಹಕಾರಿ ಸಂಶೋಧನಾ ಕಾರ್ಯಕ್ರಮಗಳು ಇತ್ಯಾದಿಗಳ

ಮೂಲಕ ಪ್ರಾದೇಶಿಕ ನಾಯಕತ್ವವನ್ನು ಖಾತರಿಪಡಿಸುವ ನೀತಿಯ ಅಗತ್ಯವಿದೆ. ಪ್ರಾದೇಶಿಕ ನಾಯಕತ್ವವನ್ನು ಸ್ಥಾಪಿಸಿದ ನಂತರ ವ್ಯಾಪ್ತಿಪ್ರದೇಶಗಳನ್ನು ಮತ್ತಷ್ಟು ವಿಸ್ತರಿಸಬೇಕು. ಉದಾಹರಣೆಗೆ, ದಕ್ಷಿಣ ಏಷ್ಯಾದಿಂದ ಪ್ರಾರಂಭಿಸಲು, ನಂತರ ಏಷ್ಯಾ ಮತ್ತು ಆಫ್ರಿಕಾ ಇತ್ಯಾದಿ. ಹೀಗೆ ಪ್ರಾದೇಶಿಕ ಸಂಸ್ಥೆಗಳನ್ನು ಬೆಂಬಲಿಸುವುದು ಮತ್ತು ಅಂತಹ ಸಂಸ್ಥೆಗಳಲ್ಲಿ ನಾಯಕತ್ವ ವಹಿಸುವುದು ಮೀನುಗಾರಿಕೆ ಅಭಿವೃದ್ಧಿಯಲ್ಲಿ ದೇಶದ ಗಂಭೀರತೆಯನ್ನು ತೋರಿಸುತ್ತದೆ.

## 6.10 ಮುಂದಿನ ದಾರಿ

ಮೇಲಿನ ಪ್ಯಾರಾಗಳಲ್ಲಿನ ನಿರೂಪಣೆಯು ದೇಶದಲ್ಲಿ ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿಯ ವಿವಿಧ ಅಂಶಗಳನ್ನು ಒಳಗೊಂಡ 10 ವಿಭಾಗಗಳು ಮತ್ತು 28 ವಿಷಯಗಳ ಅಡಿಯಲ್ಲಿ ನೀತಿ ಮಾರ್ಗದರ್ಶಿಯನ್ನು ಪಟ್ಟಿ ಮಾಡುತ್ತದೆ.

ಕೆಲವು ವಿಷಯಗಳು ಸ್ವತಂತ್ರ ಸ್ವಭಾವದ್ದಾಗಿದ್ದರೆ, ಇನ್ನೂ ಅನೇಕವು ವಿವಿಧ ವಿಭಾಗದಲ್ಲಿ ಹರಡಿದ್ದು ಏಕಕಾಲದಲ್ಲಿ ವ್ಯವಹರಿಸಬೇಕಾಗುತ್ತದೆ. ಮೀನುಗಾರಿಕೆ ಮತ್ತು ಜಲಕೃಷಿಗಳಂತಹ ಹೆಚ್ಚು ವೈವಿಧ್ಯಮಯ ವಲಯದಲ್ಲಿ ಹೆಚ್ಚಿನ ಸಂಖ್ಯೆಯ ಪಾಲುದಾರರಿರುವಲ್ಲಿ ನೀತಿ ಮಾರ್ಗದರ್ಶಿಗಳನ್ನು ಅನುಷ್ಠಾನಗೊಳಿಸುವುದು ಮತ್ತು ನಿಸ್ಸಂದೇಹವಾಗಿ ದೀರ್ಘಾವಧಿಯ ಮತ್ತು ಕಠಿಣ, ಆದರೆ ಅಸಾಧ್ಯವಲ್ಲದ ಪ್ರಕ್ರಿಯೆಯಾಗಿದೆ. ಪ್ರತಿ 28 ವಿಷಯಗಳ ಅಡಿಯಲ್ಲಿ ಕ್ರಿಯಾಬಿಂದುಗಳನ್ನು (Action points) 'ಅನುಷ್ಠಾನ ಯೋಜನೆ'ಯಲ್ಲಿ ವಿವರಿಸುವ ಪ್ರಕ್ರಿಯೆ ಮಾಡಲಾಗಿದೆ ಮತ್ತು ಅವುಗಳ ಕಾರ್ಯಸಾಧ್ಯತೆಯನ್ನು ಪ್ರದರ್ಶಿಸಲು ಕೆಲವು ಕ್ರಮಗಳನ್ನು ಪೈಲಟ್ ಯೋಜನೆಯಾಗಿ ಕೈಗೊಳ್ಳುವುದು ಅಗತ್ಯ. ಪ್ರಧಾನ್ ಮಂತ್ರಿ ಮತ್ಸ್ಯ ಸಂಪದ ಯೋಜನೆ (ಪಿಎಂಎಂಎಸ್‌ವೈ) ಅಡಿಯಲ್ಲಿ ಪಟ್ಟಿ ಮಾಡಲಾದ ಯೋಜನೆಗಳು ಮತ್ತು ಕಾರ್ಯಕ್ರಮಗಳು ಹೆಚ್ಚಿನ ನೀತಿ ಮಾರ್ಗದರ್ಶಿಗಳನ್ನು ತೆಗೆದುಕೊಳ್ಳಲು ಅಗತ್ಯವಾದ ಬಜೆಟ್ ಬೆಂಬಲವನ್ನು ಒದಗಿಸುತ್ತದೆ. ನಿಯಮಿತ ಮೇಲ್ವಿಚಾರಣೆ ಮತ್ತು ಮಧ್ಯಕಾಲೀನ ಮೌಲ್ಯಮಾಪನವು ಅನುಷ್ಠಾನ ತಂತ್ರದ ಅವಶ್ಯಕ ಭಾಗವಾಗಿದೆ. ಮೊದಲಿನಿಂದಲೂ ಪಾಲುದಾರರ ವಿಶೇಷವಾಗಿ ಮೀನುಗಾರರು ಮತ್ತು ಮೀನು ಕೃಷಿಕರ ವಿಶ್ವಾಸ ಮತ್ತು ನಂಬಿಕೆಯನ್ನು ಬೆಳೆಸಲು ಇದು ಉಪಯುಕ್ತವಾಗಿರುತ್ತದೆ. ಇದರಿಂದಾಗಿ ಅವರು ಈ ಪ್ರಕ್ರಿಯೆಯಲ್ಲಿ ಸಕ್ರಿಯ ಪಾಲುದಾರರಾಗುತ್ತಾರೆ ಮತ್ತು ರಾಷ್ಟ್ರೀಯ ಮೀನುಗಾರಿಕೆ ನೀತಿಯನ್ನು ಜಾರಿಗೆ ತರುವ ಈ ದೀರ್ಘ ಕಾರ್ಯದಲ್ಲಿ ಸರ್ಕಾರದೊಂದಿಗೆ ಕೈಜೋಡಿಸುತ್ತಾರೆ.

ಅಂತಿಮವಾಗಿ, ರಾಷ್ಟ್ರೀಯ ಮೀನುಗಾರಿಕಾ ನೀತಿಯ ಪ್ರಸ್ತುತ ಕಾಲಮಿತಿಯನ್ನು ಹತ್ತು ವರ್ಷಗಳಾಗಿ ಇರಿಸಲಾಗಿದ್ದರೂ, ಅದರ ಯಶಸ್ವಿ ಅನುಷ್ಠಾನವು ಮುಂದಿನ ಅವಧಿಗೂ ಪ್ರಯೋಜನಗಳ ಹರಿವನ್ನು ಖಚಿತಪಡಿಸುತ್ತದೆ ಎಂದು ಊಹಿಸಲಾಗಿದೆ.

* * * *

## ಸಂಕ್ಷಿಪ್ತ ರೂಪಗಳು

| | |
|---|---|
| ಎಬಿಎನ್‌ಜೆ | ರಾಷ್ಟ್ರೀಯ ವ್ಯಾಪ್ತಿಗೆ ಮೀರಿದ ಪ್ರದೇಶಗಳು |
| ಬಿಎಂಪಿಗಳು | ಅತ್ಯುತ್ತಮ ನಿರ್ವಹಣಾ ಅಭ್ಯಾಸಗಳು |
| CICEF | ಮೀನುಗಾರಿಕೆಗಾಗಿ ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಕೋಸ್ಟಲ್ ಎಂಜಿನಿಯರಿಂಗ್ |
| ಸಿಫ್ನೆಟ್ | ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಫಿಶರೀಸ್ ನಾಟಿಕಲ್ ಮತ್ತು ಎಂಜಿನಿಯರಿಂಗ್ ತರಬೇತಿ |
| ಡಿಬಿಟಿಎಸ್ | ನೇರ ಲಾಭ ವರ್ಗಾವಣೆ ಯೋಜನೆ |
| DoF | ಮೀನುಗಾರಿಕೆ ಇಲಾಖೆ |
| ಇಎಎಫ್ಎಂ | ಮೀನುಗಾರಿಕೆ ನಿರ್ವಹಣೆಗೆ ಪರಿಸರ ವ್ಯವಸ್ಥೆ ಅನುಸಂಧಾನ |
| ಇಬಿಎಸ್ಎಗಳು | ಪರಿಸರ ಮತ್ತು ಜೈವಿಕವಾಗಿ ಮಹತ್ವದ ಪ್ರದೇಶಗಳು |
| ಇಇಜೆಡ್ | ವಿಶೇಷ ಆರ್ಥಿಕ ವಲಯ |
| ಇಟಿಪಿ | ಅಳಿವಿನಂಚಿನಲ್ಲಿರುವ, ಬೆದರಿಕೆ ಮತ್ತು ರಕ್ಷಿತ |
| EUS | ಎಪಿಜೂಟಿಕ್ ಅಲ್ಸರೇಟಿವ್ ಸಿಂಡ್ರೋಮ್ |
| FAO | ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ |
| ಎಫ್ಎಫ್ಪಿಒಗಳು | ಮೀನು ಕೃಷಿಕರ ಉತ್ಪಾದಕರ ಸಂಸ್ಥೆಗಳು |
| ಎಫ್ಎಚ್‌ಗಳು | ಮೀನುಗಾರಿಕೆ ಬಂದರುಗಳು |
| ಎಫ್ಎಲ್‌ಸಿಗಳು | ಮೀನುಗಾರಿಕೆ ಇಳಿದಾಣ ಕೇಂದ್ರಗಳು |
| ಎಫ್ಆರ್‌ಪಿ | ಫೈಬರ್ ಬಲವರ್ಧಿತ ಪ್ಲಾಸ್ಟಿಕ್ |
| ಎಫ್ಎಸ್ಐ | ಫಿಶರಿ ಸರ್ವೆ ಆಫ್ ಇಂಡಿಯಾ |
| ಎಫ್‌ವಿಸಿ | ಆಹಾರ ಮೌಲ್ಯ ಸರಪಳಿ |
| ಜಿಎಪಿ | ಉತ್ತಮ ಜಲಕೃಷಿ ಅಭ್ಯಾಸಗಳು |
| ಜಿಎಚ್‌ಜಿಗಳು | ಹಸಿರುಮನೆ ಅನಿಲಗಳು |
| ಜಿವಿಎ | ಒಟ್ಟು ಮೌಲ್ಯವನ್ನು ಸೇರಿಸಲಾಗಿದೆ |
| ಎಚ್‌ಎಸಿಸಿಪಿ | ಅಪಾಯ ವಿಶ್ಲೇಷಣೆ ವಿಮರ್ಶಾತ್ಮಕ ನಿಯಂತ್ರಣ ಬಿಂದು |
| ಐಸಿಎಆರ್ | ಭಾರತೀಯ ಕೃಷಿ ಸಂಶೋಧನಾ ಮಂಡಳಿ |
| ಐಸಿಜಿ | ಭಾರತೀಯ ಕೋಸ್ಟ್ ಗಾರ್ಡ್ |
| ಐಎಲ್‌ಒ | ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ |
| ಐಎಂಬಿಎಲ್ | ಅಂತರರಾಷ್ಟ್ರೀಯ ಕಡಲ ಗಡಿರೇಖೆ |
| ಐಎಂಸಿ | ಇಂಡಿಯನ್ ಮೇಜರ್ ಕಾರ್ಪ್ಸ್ (ಭಾರತೀಯ ದೊಡ್ಡಗೆಂಡೆ ಮೀನುಗಳು) |

| | |
|---|---|
| IMO | ಅಂತರರಾಷ್ಟ್ರೀಯ ಕಡಲ ಸಂಸ್ಥೆ |
| ಐಟಿ | ಮಾಹಿತಿ ತಂತ್ರಜ್ಞಾನ |
| ಐಯುಯು | ಅಕ್ರಮ, ವರದಿ ಮಾಡದ ಮತ್ತು ಅನಿಯಂತ್ರಿತ ಮೀನುಗಾರಿಕೆ |
| ಎಂಸಿಎಸ್ | ಮೇಲ್ವಿಚಾರಣೆ, ನಿಯಂತ್ರಣ ಮತ್ತು ಕಣ್ಗಾವಲು |
| MFAH & D. | ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ |
| ಎಂಎಫ್ಆರ್ಎಗಳು | ಸಮುದ್ರ ಮೀನುಗಾರಿಕೆ ನಿಯಂತ್ರಣ ಕಾಯಿದೆಗಳು |
| ಎಂ.ಎಲ್.ಎಸ್ | ಕನಿಷ್ಠ ಕಾನೂನು ಗಾತ್ರ |
| ಎಂಎಂಟಿ | ಮಿಲಿಯನ್ ಮೆಟ್ರಿಕ್ ಟನ್ |
| ಎಂಪಿಎಗಳು | ಸಮುದ್ರ ಸಂರಕ್ಷಿತ ಪ್ರದೇಶಗಳು |
| ಎಂ.ಎಸ್.ಪಿ. | ಸಾಗರ ಪ್ರಾದೇಶಿಕ ಯೋಜನೆ |
| ಎನ್ಎಫ್ಪಿ | ರಾಷ್ಟ್ರೀಯ ಮೀನುಗಾರಿಕೆ ನೀತಿ |
| ನಿಫ್ಟಾಟ್ | ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಪೋಸ್ಟ್–ಹಾರ್ವೆಸ್ಟ್ ಟೆಕ್ನಾಲಜಿ ಅಂಡ್ ಟ್ರೈನಿಂಗ್ |
| ಎನ್.ಎಂ. | ನಾಟಿಕಲ್ ಮೈಲ್ |
| NPOA-MCS | ಮಾನಿಟರಿಂಗ್, ನಿಯಂತ್ರಣ ಮತ್ತು ಕಣ್ಗಾವಲುಗಾಗಿ ರಾಷ್ಟ್ರೀಯ ಯೋಜನೆ |
| ಪಿಎಫ್ಜೆಡ್ | ಸಂಭಾವ್ಯ ಮೀನುಗಾರಿಕೆ ವಲಯ |
| ಪಿಎಂಎಂಎಸ್ವೈ | ಪ್ರಧಾನ್ ಮಂತ್ರಿ ಮತ್ಸ್ಯ ಸಂಪದ ಯೋಜನೆ |
| ಪಿಪಿಪಿ | ಸಾರ್ವಜನಿಕ ಖಾಸಗಿ ಸಹಭಾಗಿತ್ವ |
| ಪಿ.ವೈ. | ಸಂಭಾವ್ಯ ಇಳುವರಿ |
| ಸ್ವಸಹಾಯ ಸಂಘಗಳು | ಸ್ವ–ಸಹಾಯ ಗುಂಪುಗಳು |
| ಎಸ್ಎಸ್ಎಫ್ | ಸಣ್ಣ–ಪ್ರಮಾಣದ ಮೀನುಗಾರಿಕೆ |
| ಎಸ್.ಟಿ. | ಬಾಹ್ಯಾಕಾಶ ತಂತ್ರಜ್ಞಾನ |
| TURF ಗಳು | ಮೀನುಗಾರಿಕೆಗಾಗಿ ಪ್ರಾದೇಶಿಕ ಬಳಕೆಯ ಹಕ್ಕುಗಳು |
| ಯುಟಿಗಳು | ಕೇಂದ್ರಾಡಳಿತ ಪ್ರದೇಶಗಳು |
| ವಿಎಂಇಗಳು | ದುರ್ಬಲ ಸಮುದ್ರ ಪರಿಸರ ವ್ಯವಸ್ಥೆಗಳು |
| ಡಬ್ಲ್ಯೂಎಸ್ಎಸ್ಡಿ | ವೈಟ್ ಸ್ಪಾಟ್ ಸಿಂಡ್ರೋಮ್ ರೋಗ |

* * * *

## ಬೇಸ್ಲೈನ್ ಸನ್ನಿವೇಶ 1

### A ಸಾಮಾನ್ಯ ವಿಚಾರಗಳು

| ನಿಯತಾಂಕ | ಮೌಲ್ಯ |
|---|---|
| ದೇಶದ ವಿಸ್ತೀರ್ಣ (ಮಿಲಿಯನ್ ಚದರ ಕಿಮೀ) | 3.29 |
| ಜನಸಂಖ್ಯೆ (ಮಿಲಿಯನ್) | 1210.19 |
| ನಗರ ಕುಟುಂಬಗಳ ಒಟ್ಟು ಸಂಖ್ಯೆ * (ಮಿಲಿಯನ್) | 80.33 |
| ಒಟ್ಟು ಗ್ರಾಮೀಣ ಕುಟುಂಬಗಳ ಸಂಖ್ಯೆ * (ಮಿಲಿಯನ್) | 168.08 |
| ಮನೆಯ ಸರಾಸರಿ ಗಾತ್ರ * (ನಗರ) (ವ್ಯಕ್ತಿ) | 4.9 |
| ಮನೆಯ ಸರಾಸರಿ ಗಾತ್ರ * (ಗ್ರಾಮೀಣ) (ವ್ಯಕ್ತಿ) | 4.6 |

* **ರಾಷ್ಟ್ರೀಯ ಜನಸಂಖ್ಯಾ ಗಣತಿ 2011**

**ಭಾರತೀಯ ಆರ್ಥಿಕತೆಯಲ್ಲಿ ಮೀನುಗಾರಿಕೆ ಕ್ಷೇತ್ರ**

| ಒಟ್ಟು ಮೌಲ್ಯ ಸೇರ್ಪಡೆ (ಜಿವಿಎ) ಮತ್ತು ಬೆಳವಣಿಗೆಯ ದರ (%) (ಸ್ಥಿರ ಬೆಲೆ: 2011–12) | | | | |
|---|---|---|---|---|
| ವರ್ಷಗಳು | ಮೀನುಗಾರಿಕೆ ಕ್ಷೇತ್ರದ ಜಿವಿಎ (ರೂ ಕೋಟಿ) | ರಾಷ್ಟ್ರೀಯ ಜಿವಿಎ (ಕೋಟಿಯಲ್ಲಿ ರೂ.) | YOY ಬೆಳವಣಿಗೆಯ ದರ (ಮೀನುಗಾರಿಕೆ ವಲಯ) | YOY ಬೆಳವಣಿಗೆಯ ದರ (ರಾಷ್ಟ್ರೀಯ) |
| 2009–10 | 61,269 | 71,31,836 | 3.53 | 6.86 |
| 2010–11 | 64,663 | 77,04,514 | 5.54 | 8.03 |
| 2011–12 | 68,027 | 81,06,946 | 5.20 | 5.22 |
| 2012–13 | 71,362 | 85,46,275 | 4.90 | 5.42 |
| 2013–14 | 76,487 | 90,63,649 | 7.18 | 6.05 |
| 2014–15 | 82,232 | 97,12,133 | 7.51 | 7.15 |
| 2015–16 | 90,205 | 1,04,91,870 | 9.70 | 8.03 |
| 2016–17 | 99,627 | 1,13,28,285 | 10.45 | 7.97 |
| 2017–18 | 1,14,248 | 1,20,74,413 | 14.68 | 6.59 |
| 2018–19 | 1,28,011 | 1,28,03,128 | 12.05 | 6.04 |
| *ಮೂಲ: ರಾಷ್ಟ್ರೀಯ ಸಂಖ್ಯಾಶಾಸ್ತ್ರೀಯ ಕಚೇರಿ, ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ, ಸರ್ಕಾರ ಭಾರತ* | | | | |

| ಒಟ್ಟು ಮೌಲ್ಯ ಸೇರ್ಪಡೆ (ಜಿವಿಎ) ಯ ಬೆಳವಣಿಗೆಯ ದರ (%) (ಸ್ಥಿರ ಬೆಲೆ: 2011–12) | | | | |
|---|---|---|---|---|
| ವರ್ಷಗಳು | ಮೀನುಗಾರಿಕೆ ವಲಯ (%) | | ರಾಷ್ಟ್ರೀಯ (%) | |
| | **YOY ಬೆಳವಣಿಗೆ ದರ** | **ಸರಾಸರಿ ಬೆಳವಣಿಗೆ ದರ** | **YOY ಬೆಳವಣಿಗೆ ದರ** | **ಸರಾಸರಿ ಬೆಳವಣಿಗೆಯ ದರ** |
| 2009–10 | 3.53 | | 6.86 | |
| 2010–11 | 5.54 | | 8.03 | |
| 2011–12 | 5.20 | **5.27** | 5.22 | **6.32** |
| 2012–13 | 4.90 | | 5.42 | |
| 2013–14 | 7.18 | | 6.05 | |
| 2014–15 | 7.51 | | 7.15 | |
| 2015–16 | 9.70 | | 8.03 | |
| 2016–17 | 10.45 | **10.87** | 7.97 | **7.16** |
| 2017–18 | 14.68 | | 6.59 | |
| 2018–19 | 12.05 | | 6.04 | |
| ಮೂಲ: ರಾಷ್ಟ್ರೀಯ ಸಂಖ್ಯಾಶಾಸ್ತ್ರೀಯ ಕಚೇರಿ, ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ, ಭಾರತ ಸರ್ಕಾರ | | | | |

[1] *ಎಲ್ಲಾ ಡೇಟಾವು http://dof.gov.in/statistics ಮತ್ತು ಮೀನುಗಾರಿಕೆ ಇಲಾಖೆ, ಮೀನುಗಾರಿಕೆ ಸಚಿವಾಲಯ, ಪಶುಸಂಗೋಪನೆ ಮತ್ತು ಹೈನುಗಾರಿಕೆ, ಭಾರತ ಸರ್ಕಾರ ಪ್ರಕಟಿಸಿದ ಮೀನುಗಾರಿಕೆ ಅಂಕಿಅಂಶ 2018 ಅನ್ನು ಆಧರಿಸಿದೆ (ಬೇರೆ ರೀತಿಯಲ್ಲಿ ಉಲ್ಲೇಖಿಸದ ಹೊರತು.)*

## B ಒಳನಾಡು ಮೀನುಗಾರಿಕೆ

| ನಿಯತಾಂಕ | ಮೌಲ್ಯ |
| --- | --- |
| *ಸಂಪನ್ಮೂಲಗಳು* | |
| ನದಿಗಳು ಮತ್ತು ಕಾಲುವೆಗಳು (ಕಿಮೀ) | 2,01,495.65 |
| ಸಣ್ಣ, ಮಧ್ಯಮ ಮತ್ತು ದೊಡ್ಡ ಜಲಾಶಯ (ಸಂಖ್ಯೆ) | 9,058 |
| ಸಣ್ಣ, ಮಧ್ಯಮ ಮತ್ತು ದೊಡ್ಡ ಜಲಾಶಯ (ಹೇಕ್ಟೇರ್) | 35,24,724.18 |
| ಟ್ಯಾಂಕ್ ಮತ್ತು ಕೊಳಗಳು (ಹೇಕ್ಟೇರ್) | 24,78,263.21 |
| ಉಪ್ಪುನೀರು (ಹೇಕ್ಟೇರ್) | 11,60,162.50 |
| ಬೀಲ್ಸ್ (ಹೇಕ್ಟೇರ್) | 4,24,850.93 |
| ಆಕ್ಸಬೋ ಸರೋವರಗಳು (ಹೇಕ್ಟೇರ್) | 1,17,800.45 |
| ನಿರ್ಲಕ್ಷಿಸಿದ ನೀರು (Derclict) (ಹೇಕ್ಟೇರ್) | 2,30,136.38 |
| ನದಿಗಳು ಮತ್ತು ಕಾಲುವೆಗಳನ್ನು ಹೊರತುಪಡಿಸಿ (ಹೇ) | 3,00,724.52 |
| ನದಿಗಳು ಮತ್ತು ಕಾಲುವೆಗಳನ್ನು ಹೊರತುಪಡಿಸಿ ಒಟ್ಟು ಜಲಮೂಲಗಳು (ಹೇ) | 82,36,662.17 |
| 2017–18ರಲ್ಲಿ ಮೀನು ಉತ್ಪಾದನೆ (ಮಿಲಿಯನ್ ಟನ್) | 8.90 |

## C ಸಮುದ್ರ

| ನಿಯತಾಂಕ | ಮೌಲ್ಯ |
| --- | --- |
| *ಸಂಪನ್ಮೂಲಗಳು* | |
| ಕರಾವಳಿಯ ಉದ್ದ (ಕಿ.ಮೀ) | 8,118 |
| ವಿಶೇಷ ಆರ್ಥಿಕ ವಲಯ (ಮಿಲಿಯನ್ ಚದರ ಕಿ.ಮೀ.) | 2.02 |
| ಕಾಂಟಿನೆಂಟಲ್ ಶೆಲ್ಫ್ ಪ್ರದೇಶ (ಅಂದಾಜು) (ಮಿಲಿಯನ್ ಚದರ ಕಿ.ಮೀ.) | 0.53 |
| ಲ್ಯಾಂಡಿಂಗ್ ಕೇಂದ್ರಗಳು | 1,547 |
| ಮೀನುಗಾರಿಕೆ ಗ್ರಾಮಗಳು | 3,477 |
| ಮೀನುಗಾರರ ಜನಸಂಖ್ಯೆ | **3,774,577** |
| *ಮೀನುಗಾರಿಕೆ ಸಂಪನ್ಮೂಲಗಳು (ಸಂಭಾವ್ಯ ಇಳುವರಿ)* | |
| ಡಿಮರ್ಸಲ್ (ಮುಖ್ಯಭೂಮಿ) (ಟನ್‌ಗಳು) | 2,298,281 |
| ಪೆಲಾಜಿಕ್ (ಮುಖ್ಯಭೂಮಿ) (ಟನ್‌ಗಳು) | 2,631,827 |
| ಲಕ್ಷದ್ವೀಪ (ಸಾಗರವನ್ನು ಹೊರತುಪಡಿಸಿ) (ಟನ್‌ಗಳು) | 14,490 |
| ಎ & ಎನ್ ದ್ವೀಪಗಳು (ಸಾಗರವನ್ನು ಹೊರತುಪಡಿಸಿ) (ಟನ್‌ಗಳು) | 43,794 |

| | |
|---|---|
| ಓಷಿಯಾನಿಕ್ (ಸಂಪೂರ್ಣ ಇಇಜೆಡ್‌ಗಾಗಿ) (ಟನ್‌ಗಳು) | 2,30,832 |
| ಇತರೆ (ಟನ್‌ಗಳು) | 91,369 |
| ಒಟ್ಟು ಸಂಭಾವ್ಯ ಇಳುವರಿ (ಟನ್‌ಗಳು) | **5,310,593** |
| ***ಉದ್ಯೋಗ*** | |
| ಸಕ್ರಿಯ ಮೀನುಗಾರರು (ಸಂಖ್ಯೆ) (2016) | **927,081** |
| ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳು (ಸಂಖ್ಯೆ) (2016) | **521,745** |
| ಮೀನುಗಾರಿಕೆ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವ ಒಟ್ಟು (2016) | **1,448,826** |
| ನೋಂದಾಯಿತ ಆಳ ಸಮುದ್ರಕ್ಕೆ ಹೋಗುವ ಮೀನುಗಾರಿಕೆ ಹಡಗುಗಳು(2019)(ಸಂಖ್ಯೆ) | **53** |
| ನೋಂದಾಯಿತ ಮೋಟರಿಕೃತ ಯಾಂತ್ರಿಕವಲ್ಲದ ದೋಣಿಗಳು (ಸಂಖ್ಯೆ) | **136,920** |
| ನೋಂದಾಯಿತ ಮೋಟರಿಕೃತ ಯಾಂತ್ರಿಕ ದೋಣೀಗಳು (ಸಂಖ್ಯೆ) | **66,198** |
| ನೋಂದಾಯಿತ ಮೋಟಾರುರಹಿತ (ಸಂಖ್ಯೆ) | **65,876** |
| **ಒಟ್ಟು ನೋಂದಾಯಿತ ಮೀನುಗಾರಿಕೆ ದೋಣಿಗಳು** (ಸಂಖ್ಯೆ) | **269,047** |
| 2017–18ರಲ್ಲಿ ಮೀನು ಉತ್ಪಾದನೆ (ಮಿಲಿಯನ್ ಟನ್) | **3.69** |

## D ಮೀನುಗಾರರ ಜನಸಂಖ್ಯೆ

| ಎಸ್.ನಂ. | ರಾಜ್ಯಗಳು / ಯುಟಿಗಳು | ಮೀನುಗಾರರ ಜನಸಂಖ್ಯೆ | | |
|---|---|---|---|---|
| | | ಒಟ್ಟು | ಸಮುದ್ರ | ಒಳನಾಡು |
| 1 | ಆಂಧ್ರಪ್ರದೇಶ | 14,47,529 | 5,17,435 | 9,30,094 |
| 2 | ಅರುಣಾಚಲ ಪ್ರದೇಶ | 24,015 | – | 24,015 |
| 3 | ಅಸ್ಸಾಂ | 25,24,106 | – | 25,24,106 |
| 4 | ಬಿಹಾರ | 60,27,375 | – | 60,27,375 |
| 5 | ಚತ್ತೀಸ್‌ಗರ್ | 2,20,355 | – | 2,20,355 |
| 6 | ಗೋವಾ | 10,545 | 12,651 | –2,106 |
| 7 | ಗುಜರಾತ್ | 5,58,691 | 3,54,992 | 2,03,699 |
| 8 | ಹರಿಯಾಣ | 1,18,455 | – | 1,18,455 |
| 9 | ಹಿಮಾಚಲ ಪ್ರದೇಶ | 11,806 | – | 11,806 |
| 10 | ಜಮ್ಮು ಮತ್ತು ಕಾಶ್ಮೀರ | 17,396 | – | 17,396 |
| 11 | ಜಾರ್ಖಂಡ್ | 1,40,897 | – | 1,40,897 |
| 12 | ಕರ್ನಾಟಕ | 9,74,276 | 1,57,989 | 8,16,287 |
| 13 | ಕೇರಳ | 10,44,361 | 5,63,903 | 4,80,458 |
| 14 | ಮಧ್ಯಪ್ರದೇಶ | 22,32,822 | – | 22,32,822 |
| 15 | ಮಹಾರಾಷ್ಟ್ರ | 15,18,228 | 3,64,899 | 11,53,329 |
| 16 | ಮಣಿಪುರ | 47,711 | – | 47,711 |
| 17 | ಮೇಘಾಲಯ | 16,567 | – | 16,567 |
| 18 | ಮಿಜೋರಾಂ | 6,289 | – | 6,289 |
| 19 | ನಾಗಾಲ್ಯಾಂಡ್ | 7,958 | – | 7,958 |
| 20 | ಒಡಿಶಾ | 15,17,574 | 5,17,623 | 9,99,951 |
| 21 | ಪಂಜಾಬ್ | 7,591 | – | 7,591 |
| 22 | ರಾಜಸ್ಥಾನ | 57,260 | – | 57,260 |
| 23 | ಸಿಕ್ಕಿಂ | 581 | – | 581 |
| 24 | ತಮಿಳುನಾಡು | 12,83,751 | 7,95,708 | 4,88,043 |
| 25 | ತೆಲಂಗಾಣ | 8,62,221 | – | 8,62,221 |
| 26 | ತ್ರಿಪುರ | 7,761 | – | 7,761 |

| | | | | |
|---|---|---|---|---|
| 27 | ಉತ್ತರಾಖಂಡ | 8,352 | – | 8,352 |
| 28 | ಉತ್ತರ ಪ್ರದೇಶ | 39,00,005 | – | 39,00,005 |
| 29 | ಪಶ್ಚಿಮ ಬಂಗಾಳ | 32,36,261 | 3,68,816 | 28,67,445 |
| 30 | ಎ & ಎನ್ ದ್ವೀಪಗಳು | 25,941 | 26,521 | –580 |
| 31 | ಚಂಡೀಗರ್ | 524 | – | 524 |
| 32 | ದಾದ್ರಾ ಮತ್ತು ನಗರ ಹವೇಲಿ, ದಮನ್ ಮತ್ತು ಡಿಯು | 40,016 | 15,836 | 24,180 |
| 33 | ದೆಹಲಿ | 617 | – | 617 |
| 34 | ಲಡಾಖ್ | 22 | – | 22 |
| 35 | ಲಕ್ಷದ್ವೀಪ | 6,518 | 27,934 | –21,416 |
| 36 | ಪುದುಚೇರಿ | 1,07,272 | 50,270 | 57,002 |
| ಒಟ್ಟು | | 2,80,11,649 | 37,74,577 | 2,42,37,072 |
| | ಭಾರತದ ಒಟ್ಟು ಜನಸಂಖ್ಯೆ | | | **1,37,13,60,350** |
| | ಮೀನುಗಾರರು (ಒಟ್ಟು ಜನಸಂಖ್ಯೆಯ ಶೇ.) | | | 2.04 |
| | ಸಮುದ್ರ ಮೀನುಗಾರರು (ಮೀನುಗಾರರ ಜನಸಂಖ್ಯೆಯ ಶೇ.) | | | 13.48 |
| | ಒಳನಾಡಿನ ಮೀನುಗಾರರು (ಒಟ್ಟು ಮೀನುಗಾರರ ಜನಸಂಖ್ಯೆಯ ಶೇ.) | | | 86.52 |

## E ಮೀನುಗಾರಿಕೆ ಉತ್ಪಾದನೆ ಮತ್ತು ಬಳಕೆ

**ರಾಜ್ಯಗಳು / ಯುಟಿಗಳ ಒಳನಾಡು ಮತ್ತು ಸಮುದ್ರ ಮೀನು ಉತ್ಪಾದನೆ 2014–15 ರಿಂದ 2018–19ರ ಅವಧಿಯಲ್ಲಿ (ಲಕ್ಷ ಟನ್‌ಗಳಲ್ಲಿ)**

| ಎಸ್.ನಂ. | ರಾಜ್ಯ / ಯುಟಿ | 2014–15 | | | 2015–16 | | | 2016–17 | | | 2017–18 | | | 2018–19 | | |
|---|---|---|---|---|---|---|---|---|---|---|---|---|---|---|---|---|
| | | ಒಳನಾಡು | ಸಮುದ್ರ | ಒಟ್ಟು | ಒಳನಾಡು | ಸಮುದ್ರ | ಒಟ್ಟು | ಒಳನಾಡು | ಸಮುದ್ರ | ಒಟ್ಟು | ಒಳನಾಡು | ಸಮುದ್ರ | ಒಟ್ಟು | ಒಳನಾಡು | ಸಮುದ್ರ | ಒಟ್ಟು |
| 1 | ಆಂಧ್ರಪ್ರದೇಶ | 15.03 | 4.75 | 19.79 | 18.32 | 5.20 | 23.52 | 21.86 | 5.80 | 27.66 | 28.45 | 6.05 | 34.50 | 33.92 | 8.75 | 42.67 |
| 2 | ಅರುಣಾಚಲ ಪ್ರದೇಶ | 0.04 | 0.00 | 0.04 | 0.04 | 0.00 | 0.04 | 0.04 | 0.00 | 0.04 | 0.04 | 0.00 | 0.04 | 0.05 | 0.00 | 0.05 |
| 3 | ಅಸ್ಸಾಂ | 2.83 | 0.00 | 2.83 | 2.94 | 0.00 | 2.94 | 3.07 | 0.00 | 3.07 | 3.27 | 0.00 | 3.27 | 3.31 | 0.00 | 3.31 |
| 4 | ಬಿಹಾರ | 4.80 | 0.00 | 4.80 | 5.07 | 0.00 | 5.07 | 5.09 | 0.00 | 5.09 | 5.88 | 0.00 | 5.88 | 6.02 | 0.00 | 6.02 |
| 5 | ಚತ್ತೀಸ್‌ಗರ್ | 3.14 | 0.00 | 3.14 | 3.42 | 0.00 | 3.42 | 3.77 | 0.00 | 3.77 | 4.57 | 0.00 | 4.57 | 4.89 | 0.00 | 4.89 |
| 6 | ಗೋವಾ | 0.03 | 1.15 | 1.18 | 0.05 | 1.07 | 1.12 | 0.04 | 1.14 | 1.18 | 0.06 | 1.18 | 1.24 | 0.05 | 1.15 | 1.20 |
| 7 | ಗುಜರಾತ್ | 1.11 | 6.98 | 8.10 | 1.12 | 6.97 | 8.10 | 1.17 | 6.99 | 8.16 | 1.34 | 7.01 | 8.35 | 1.43 | 6.99 | 8.42 |
| 8 | ಹರಿಯಾಣ | 1.11 | 0.00 | 1.11 | 1.21 | 0.00 | 1.21 | 1.44 | 0.00 | 1.44 | 1.90 | 0.00 | 1.90 | 1.80 | 0.00 | 1.80 |
| 9 | ಹಿಮಾಚಲ ಪ್ರದೇಶ | 0.11 | 0.00 | 0.11 | 0.12 | 0.00 | 0.12 | 0.13 | 0.00 | 0.13 | 0.13 | 0.00 | 0.13 | 0.13 | 0.00 | 0.13 |
| 10 | ಜಮ್ಮು ಮತ್ತು ಕಾಶ್ಮೀರ | 0.20 | 0.00 | 0.20 | 0.20 | 0.00 | 0.20 | 0.20 | 0.00 | 0.20 | 0.21 | 0.00 | 0.21 | 0.21 | 0.00 | 0.21 |
| 11 | ಜಾರ್ಖಂಡ್ | 1.06 | 0.00 | 1.06 | 1.16 | 0.00 | 1.16 | 1.45 | 0.00 | 1.45 | 1.90 | 0.00 | 1.90 | 2.08 | 0.00 | 2.08 |
| 12 | ಕರ್ನಾಟಕ | 2.23 | 4.00 | 6.23 | 1.69 | 4.12 | 5.81 | 1.59 | 3.99 | 5.57 | 1.88 | 4.14 | 6.03 | 1.98 | 3.89 | 5.87 |
| 13 | ಕೇರಳ | 2.02 | 5.24 | 7.26 | 2.11 | 5.17 | 7.28 | 1.61 | 4.31 | 5.93 | 1.48 | 4.14 | 5.63 | 1.66 | 5.49 | 7.14 |
| 14 | ಮಧ್ಯಪ್ರದೇಶ | 1.09 | 0.00 | 1.09 | 1.15 | 0.00 | 1.15 | 1.39 | 0.00 | 1.39 | 1.43 | 0.00 | 1.43 | 1.73 | 0.00 | 1.73 |
| 15 | ಮಹಾರಾಷ್ಟ್ರ | 1.44 | 4.64 | 6.08 | 1.46 | 4.34 | 5.80 | 2.00 | 4.63 | 6.63 | 1.31 | 4.75 | 6.06 | 1.00 | 4.67 | 5.68 |
| 16 | ಮಣಿಪುರ | 0.31 | 0.00 | 0.31 | 0.32 | 0.00 | 0.32 | 0.32 | 0.00 | 0.32 | 0.33 | 0.00 | 0.33 | 0.32 | 0.00 | 0.32 |
| 17 | ಮೇಘಾಲಯ | 0.06 | 0.00 | 0.06 | 0.11 | 0.00 | 0.11 | 0.12 | 0.00 | 0.12 | 0.12 | 0.00 | 0.12 | 0.13 | 0.00 | 0.13 |
| 18 | ಮಿಜೋರಾಂ | 0.06 | 0.00 | 0.06 | 0.07 | 0.00 | 0.07 | 0.08 | 0.00 | 0.08 | 0.08 | 0.00 | 0.08 | 0.07 | 0.00 | 0.07 |
| 19 | ನಾಗಾಲ್ಯಾಂಡ್ | 0.08 | 0.00 | 0.08 | 0.08 | 0.00 | 0.08 | 0.09 | 0.00 | 0.09 | 0.09 | 0.00 | 0.09 | 0.09 | 0.00 | 0.09 |
| 20 | ಒಡಿಶಾ | 3.36 | 1.33 | 4.70 | 3.77 | 1.45 | 5.21 | 4.55 | 1.53 | 6.08 | 5.34 | 1.51 | 6.85 | 5.07 | 2.52 | 7.59 |
| 21 | ಪಂಜಾಬ್ | 1.15 | 0.00 | 1.15 | 1.20 | 0.00 | 1.20 | 1.33 | 0.00 | 1.33 | 1.37 | 0.00 | 1.37 | 1.36 | 0.00 | 1.36 |
| 22 | ರಾಜಸ್ಥಾನ | 0.45 | 0.00 | 0.45 | 0.42 | 0.00 | 0.42 | 0.50 | 0.00 | 0.50 | 0.54 | 0.00 | 0.54 | 0.56 | 0.00 | 0.56 |
| 23 | ಸಿಕ್ಕಿಂ | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 |

| | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| 24 | ತಮಿಳುನಾಡು | 2.40 | 4.57 | 6.98 | 2.43 | 4.67 | 7.09 | 1.97 | 4.72 | 6.69 | 1.85 | 4.97 | 6.82 | 1.62 | 5.13 | 6.75 |
| 25 | ತೆಲಂಗಾಣ | 2.68 | 0.00 | 2.68 | 2.37 | 0.00 | 2.37 | 1.99 | 0.00 | 1.99 | 2.70 | 0.00 | 2.70 | 2.94 | 0.00 | 2.94 |
| 26 | ತ್ರಿಪುರ | 0.65 | 0.00 | 0.65 | 0.69 | 0.00 | 0.69 | 0.72 | 0.00 | 0.72 | 0.77 | 0.00 | 0.77 | 0.76 | 0.00 | 0.76 |
| 27 | ಉತ್ತರಾಖಂಡ | 0.04 | 0.00 | 0.04 | 0.04 | 0.00 | 0.04 | 0.04 | 0.00 | 0.04 | 0.05 | 0.00 | 0.05 | 0.05 | 0.00 | 0.05 |
| 28 | ಉತ್ತರ ಪ್ರದೇಶ | 4.94 | 0.00 | 4.94 | 5.05 | 0.00 | 5.05 | 6.18 | 0.00 | 6.18 | 6.29 | 0.00 | 6.29 | 6.62 | 0.00 | 6.62 |
| 29 | ಪಶ್ಚಿಮ ಬಂಗಾಳ | 14.38 | 1.79 | 16.17 | 14.93 | 1.78 | 16.71 | 15.25 | 1.77 | 17.02 | 15.57 | 1.85 | 17.42 | 15.88 | 1.82 | 17.70 |
| 30 | ಎ ಮತ್ತು ಎನ್ ದ್ವೀಪಗಳು | 0.00 | 0.37 | 0.37 | 0.00 | 0.37 | 0.37 | 0.00 | 0.39 | 0.39 | 0.00 | 0.39 | 0.40 | 0.00 | 0.41 | 0.41 |
| 31 | ಚಂಡೀಗರ | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 32 | ಡಿ & ನಗರ ಹವೇಲಿ | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 33 | ದಮನ್ ಮತ್ತು ಡಿಯು | 0.00 | 0.32 | 0.32 | 0.00 | 0.23 | 0.23 | 0.01 | 0.23 | 0.24 | 0.00 | 0.24 | 0.25 | 0.00 | 0.24 | 0.25 |
| 34 | ದೆಹಲಿ | 0.01 | 0.00 | 0.01 | 0.01 | 0.00 | 0.01 | 0.01 | 0.00 | 0.01 | 0.01 | 0.00 | 0.01 | 0.01 | 0.00 | 0.01 |
| 35 | ಲಕ್ಷದ್ವೀಪ | 0.00 | 0.13 | 0.13 | 0.00 | 0.16 | 0.16 | 0.00 | 0.30 | 0.30 | 0.00 | 0.21 | 0.21 | 0.00 | 0.22 | 0.22 |
| 36 | ಪುದುಚೇರಿ | 0.06 | 0.42 | 0.47 | 0.07 | 0.47 | 0.54 | 0.04 | 0.46 | 0.50 | 0.07 | 0.42 | 0.50 | 0.07 | 0.45 | 0.52 |
| ಭಾರತ | | 66.91 | 35.69 | 102.60 | 71.62 | 36.00 | 107.62 | 78.06 | 36.25 | 114.31 | 89.02 | 36.88 | 125.90 | 95.82 | 41.76 | 137.58 |
| ಮೂಲ: ಮೀನುಗಾರಿಕೆ ಇಲಾಖೆ, ರಾಜ್ಯ ಸರ್ಕಾರ / ಯುಟಿಗಳ ಆಡಳಿತ | | | | | | | | | | | | | | | | |

| | |
|---|---|
| ಮೀನು ಮತ್ತು ಸೀಗಡಿಗಳ ವಾರ್ಷಿಕ ತಲಾ ಬಳಕೆ[ಇ] (ನಗರ) (ಕೆಜಿ) | 3.00 |
| ಮೀನು ಮತ್ತು ಸೀಗಡಿಗಳ ವಾರ್ಷಿಕ ತಲಾ ಬಳಕೆ[ಇ] (ಗ್ರಾಮೀಣ) (ಕೆಜಿ) | 3.24 |
| ಮೀನುಗಳನ್ನು ಸೇವಿಸುವ ನಗರ ಮನೆಯವರು[ಇ] (ದಶಲಕ್ಷ) | 16.87 |
| ಮೀನುಗಳನ್ನು ಸೇವಿಸುವ ಗ್ರಾಮೀಣ ಮನೆಯವರು[ಇ] (ದಶಲಕ್ಷ) | 44.54 |

**ಇ = ಮೀನುಗಾರಿಕೆ ಅಂಕಿಅಂಶಗಳ ಕೈಪಿಡಿ 2018 ಮತ್ತು ರಾಷ್ಟ್ರೀಯ ಜನಸಂಖ್ಯಾ ಗಣತಿ 2011 ರಿಂದ ಅಂದಾಜಿಸಲಾಗಿದೆ.**